ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 23 ಸೋಮವಾರ 2026

ಸಂಪುಟ: 46 | ಸಂಚಿಕೆ: 304 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ವೀಳ್ಯದೆಲೆ, ನಂಜನಗೂಡು ರಸಬಾಳೆ ಪ್ರಸ್ತಾಪಿಸಿ ಕರುನಾಡ ರೈತರ ಪ್ರಶಂಸಿಸಿದ ಪ್ರಧಾನಿ ನರೇಂದ್ರ ಮೋದಿ

■ ಗುಣಮಟ್ಟದ ಕೃಷಿ ಉತ್ಪನ್ನಗಳ ಉತ್ಪಾದನೆ, ರಫ್ತು ಹೆಚ್ಚಳ ಸಂಬಂಧ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪ ■ ಹಬ್ಬಗಳಲ್ಲಿ ಸ್ವದೇಶಿ ಉತ್ಪನ್ನಗಳನ್ನೇ ಬಳಸಲು ಜನರಲ್ಲಿ ಮನವಿ

ನವದೆಹಲಿ: ಮೈಸೂರು ಜಿಲ್ಲೆಯ ಹೆಗ್ಗುರುತುಗಳಾದ ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮನ್ ಕಿ ಬಾತ್(ಮನದ ಮಾತು) ಕಾರ್ಯಕ್ರಮದಲ್ಲಿ ಪ್ರಸ್ತಾಪಿಸುವುದರೊಂದಿಗೆ ಕರ್ನಾಟಕದ ರೈತರನ್ನು ಪ್ರಶಂಸಿಸಿದ್ದಾರೆ.

ಕರ್ನಾಟಕದ ನಂಜನಗೂಡು ಬಾಳೆಹಣ್ಣು, ಮೈಸೂರಿನ ವೀಳ್ಯದೆಲೆ ಹಾಗೂ ಇಂಡಿಯಲ್ಲಿ ಬೆಳೆಯುವ ನಿಂಬೆ ಹಣ್ಣುಗಳನ್ನು ಅಲ್ಲಿನ ರೈತರು ಮಾಲ್ಡೀವ್ಸ್ ಸೇರಿದಂತೆ ಹಲವು ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಆ ಉತ್ಪನ್ನಗಳು ಅತ್ಯುತ್ತಮ ರುಚಿಯ ಜೊತೆಗೆ ಗುಣಮಟ್ಟವನ್ನು ಹೊಂದಿವೆ. ಅವುಗಳಿಗೆ ಜಿಐ ಟ್ಯಾಗ್ (ಭೌಗೋಳಿಕ ಸೂಚ್ಯಂಕ) ಕೂಡ ಇದೆ ಎಂದು ತಿಳಿಸಿದ್ದಾರೆ.





ಕರ್ನಾಟಕದ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ವಿದೇಶಗಳಿಗೆ ರವಾನೆ ಮಾಡುವ ಮೂಲಕ ಗಮನಸೆಳೆಯುತ್ತಿದ್ದಾರೆ. ಇಂದಿನ ರೈತರು ಗುಣಮಟ್ಟದ ಕೃಷಿಯೊಂದಿಗೆ ಉತ್ಪನ್ನದ ಪ್ರಮಾಣವನ್ನೂ ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ. ನೆಲ, ಜಲವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಮೂಲಕ ಉತ್ತಮ ಆದಾಯವನ್ನು ಕೂಡ ಪಡೆಯುತ್ತಿದ್ದಾರೆ ಎಂದು ಪ್ರಶಂಸಿಸಿದ್ದಾರೆ. ಒಡಿಶಾದ ಹಿರೋಡ್ ಪಟೇಲ್ ಎನ್ನುವ ಯುವ ಕೃಷಿಕನೊಬ್ಬ, ನೂತನ ಮಾದರಿಯ ಕೃಷಿಯ ಮೂಲಕ ಗಮನ ಸೆಳೆಯುತ್ತಿದ್ದಾನೆ. ಕೃಷಿ ಹೊಂಡದಲ್ಲಿ ತರಕಾರಿ ಬೆಳೆದರೆ, ಅದರ ಸುತ್ತ ಬಾಳೆಹಣ್ಣು, ತೆಂಗು ಬೆಳೆಯುತ್ತಿದ್ದಾರೆ. ಆ ಹೊಂಡದಲ್ಲೇ ಮೀನು ಸಾಕಾಣಿಕೆಯನ್ನೂ ಮಾಡುತ್ತಿದ್ದಾರೆ. ಯುವ ರೈತನ ಕೃಷಿ ಪದ್ಧತಿಯನ್ನು ವೀಕ್ಷಿಸಲು ದೂರ ದೂರಿನಿಂದ ರೈತರು ಅವರ ತೋಟಕ್ಕೆ ಭೇಟಿ ನೀಡುತ್ತಿದ್ದಾರೆ. ಕೇರಳ ತ್ರಿಶೂರ್‌ನ ಹಳ್ಳಿಯೊಂದರಲ್ಲಿ 570 ವಿವಿಧ ತಳಿಯ ಭತ್ತವನ್ನು ಯಶಸ್ವಿಯಾಗಿ ಬೆಳೆಯುವ ಮೂಲಕ ಅಲ್ಲಿನ ರೈತರು ಗಮನಸೆಳೆದಿದ್ದಾರೆ ಎಂದು ಹೇಳಿದ್ದಾರೆ.

ಕೃಷಿ ಉತ್ಪನ್ನಗಳ ರಫ್ತು ಹೆಚ್ಚಾಗುತ್ತಿರುವುದು ದೇಶದ ರೈತರ ಪರಿಶ್ರಮವನ್ನು ತೋರಿಸುತ್ತದೆ. ಅವರು ಮಣ್ಣಿನ ನಿಜವಾದ ಆರಾಧಕರು. ಅವರು ಮಣ್ಣನ್ನು ಚಿನ್ನವಾಗಿಸುವ ಸಾಮರ್ಥ್ಯ ಹೊಂದಿದ್ದಾರೆ. ಭಾರತವು ಪ್ರತಿವರ್ಷ 150 ಮಿಲಿಯನ್ ಟನ್ ಭತ್ತವನ್ನು ಉತ್ಪಾದಿಸುವ ಮೂಲಕ ಜಗತ್ತಿನ ಅತಿದೊಡ್ಡ ಭತ್ತ ಬೆಳೆಯುವ ದೇಶವಾಗಿದೆ. ■ 6ನೇ ಪುಟಕ್ಕೆ

ಒಕ್ಕಲಿಗರು ಮುಖ್ಯಮಂತ್ರಿ ಆಗುವುದಾದರೆ ಅದು ಕಾಂಗ್ರೆಸ್‌ನಿಂದ ಮಾತ್ರ

ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ಎದಿರೇಟು

ಮೈಸೂರು,ಫೆ.22– ಕುಮಾರಸ್ವಾಮಿ ಹಾಗೂ ದೇವೇಗೌಡರು ಯಾವ ಒಕ್ಕಲಿಗ ನಾಯಕರನ್ನೂ ಬೆಳೆಸಲಿಲ್ಲ. ಅವರ ಕುಟುಂಬ ಹೊರತುಪಡಿಸಿ ಮುಂದೊಂದು ದಿನ ಯಾರಾದರೂ ಒಕ್ಕಲಿಗ ನಾಯಕರು ರಾಜ್ಯದ ಮುಖ್ಯಮಂತ್ರಿಯಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಎನ್ನುವುದನ್ನು ನಾನು ಒತ್ತಿ ಹೇಳುತ್ತಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಬಿಟ್ಟು ಕೊಡುವ ಜಾಯಮಾನದವರಲ್ಲ, ಸಂದಿಗ್ಧ ಸಮಯದಲ್ಲಿ ಜಾತಿ ಹೆಸರು ಎಳೆದು ತಂದಿರುವುದು ಅವರ ಸಂಕುಚಿತ ಮನೋಭಾವ ತೋರಿಸುತ್ತದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದರು.



ಈ ಹಿನ್ನೆಲೆಯಲ್ಲಿ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಸಿಎಂ ಸಿದ್ದರಾಮಯ್ಯ, ನನ್ನ ವಿರುದ್ಧ ಜಾತಿ ರಾಜಕೀಯದ ಆರೋಪ ಮಾಡುತ್ತಿರುವವರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದ್ದಾರೆ.

ಮಾಧ್ಯಮ ಹೇಳಿಕೆ: ಸಾಮಾಜಿಕ ದಿನದ ಆಚರಣೆಯ ಅಂಗವಾಗಿ ಪತ್ರಿಕೆಯೊಂದಕ್ಕೆ ನಾನು ಬರೆದಿದ್ದ ಲೇಖನ ರಾಜ್ಯದ ರಾಜಕೀಯ ವಲಯದಲ್ಲಿ ಬಹುಮುಖಿ ಚರ್ಚೆಗೆ ಒಳಗಾಗಿದೆ. ನೀರು ನಿಂತಲ್ಲಿಯೇ ನಿಂತು ಮಡುಗಟ್ಟಿಹೋದರೆ ಕೆಸರಾಗುತ್ತದೆ, ಹರಿಯುತ್ತಿದ್ದರೆ ಅದು ತಿಳಿಯಾಗುತ್ತಾ ಹೋಗುತ್ತದೆ. ಸಾಮಾಜಿಕ ವ್ಯವಸ್ಥೆ ಕೂಡಾ ಹಾಗೆಯೇ ಪಟ್ಟಭದ್ರವಾಗಿ ಉಳಿಯದೆ ಚಲನಶೀಲತೆ ಪಡೆದುಕೊಂಡರೆ ಅದು ಜನಪರವಾಗಿ ಪರಿವರ್ತನೆಯಾಗುತ್ತದೆ. ಈ ದೃಷ್ಟಿಯಿಂದ ನನ್ನ ಲೇಖನದ ಬಗೆಗಿನ ಚರ್ಚೆಯನ್ನು ನಾನು ಸ್ವಾಗತಿಸುತ್ತೇನೆ.

ಸಾಮಾಜಿಕ ನ್ಯಾಯದ ಬಗ್ಗೆ ನಾನು ಇದೇ ಮೊದಲ ಬಾರಿ ಮಾತನಾಡಿದ್ದಲ್ಲ, ನನ್ನ ನಾಲ್ಕು ದಶಕಗಳ ರಾಜಕೀಯ ಜೀವನವನ್ನು ನೋಡುತ್ತಾ ಬಂದವರಿಗೆ ಇದು ಗೊತ್ತಿರುತ್ತದೆ. ಅಧಿಕಾರ ಇರಲಿ, ಇಲ್ಲದೆ ಇರಲಿ ಸಾಮಾಜಿಕ ನ್ಯಾಯದ ಪರವಾದ ನನ್ನ ನಿಲುವು ಅಚಲ. ನಮ್ಮಲ್ಲಿನ ಜಾತಿ ವ್ಯವಸ್ಥೆ ಬಗ್ಗೆ ನನ್ನನ್ನು ಟೀಕಿಸುತ್ತಿರುವ ರಾಜಕಾರಣಿಗಳಿಗಿಂತ ಹೆಚ್ಚಿನ ಸ್ಪಷ್ಟತೆ ನನಗಿದೆ. ಈ ಬಗ್ಗೆ ನಾನು ಸಾರ್ವಜನಿಕ ಸಂವಾದಕ್ಕೆ ಸಿದ್ಧವಾಗಿದ್ದೇನೆ.

ನನ್ನ ಲೇಖನದ ಬಗ್ಗೆ ಜಾತ್ಯತೀತ ಜನತಾ ದಳದ ನಾಯಕರಾದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿಯವರು ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಓದಿ ಆಶ್ಚರ್ಯವಾಗಿಲ್ಲ, ಸಿದ್ದರಾಮಯ್ಯನವರು ಕುರ್ಚಿಗಾಗಿ ಜಾತಿ ಎಳೆದು ತಂದಿದ್ದಾರೆ ಎಂಬ ಅವರ ಆರೋಪವನ್ನು ತಮಾಷೆಯಾಗಿ ಸ್ವೀಕರಿಸಿದ್ದೇನೆ. ಕುಮಾರಸ್ವಾಮಿಯವರು ಮತ್ತು ಅವರ ಪೂಜ್ಯ ತಂದೆಯವರಾದ ಹೆಚ್.ಡಿ. ದೇವೇಗೌಡರು ಖಂಡಿತಾ ಜಾತಿವಾದಿಗಳಲ್ಲ, ಅವರು ಸ್ವಜಾತಿ ವಿರೋಧಿಗಳು. ಅದಕ್ಕಿಂತಲೂ ಮುಖ್ಯವಾಗಿ ಕುಟುಂಬವಾದಿಗಳು. ಇವರಿಗೆ ■ 6ನೇ ಪುಟಕ್ಕೆ

ಹಾಗಾದರೆ ತತ್‌ಕ್ಷಣ ನೀವು ಕುರ್ಚಿ ಬಿಡಬೇಕಲ್ಲವೇ...!

ಮೈಸೂರು,ಫೆ.22– ಒಕ್ಕಲಿಗರ ಮೇಲೆ ನಿಮ್ಮ ಪ್ರೀತಿ ಪ್ರದರ್ಶನಕ್ಕೆ ಇದು ಸಕಾಲ! ಒಕ್ಕಲಿಗರನ್ನು ಸಿಎಂ ಮಾಡುವುದು ಕಾಂಗ್ರೆಸ್ಸೇ ಎನ್ನುವುದಾದರೆ, ತತ್‌ಕ್ಷಣಕ್ಕೇ ನೀವು ಕುರ್ಚಿ ಬಿಡಬೇಕಲ್ಲವೇ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಟಾಂಗ್ ನೀಡಿದ್ದಾರೆ.



ಮುಖ್ಯಮಂತ್ರಿ ಕುರ್ಚಿ ಜಗ್ಗಾಟದ ನಡುವೆ ಸಿದ್ದರಾಮಯ್ಯ ಜಾತಿ ಎಳೆದು ತಂದಿದ್ದಾರೆಂಬ ತಮ್ಮ ಆರೋಪಕ್ಕೆ ಸುದೀರ್ಘ ಮಾಧ್ಯಮ ಹೇಳಿಕೆ ಮೂಲಕ ತಿರುಗೇಟು ನೀಡಿರುವ ಸಿದ್ದರಾಮಯ್ಯ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ವಿರುದ್ಧ ವಾಗ್ದಾಳಿ ನಡೆಸಿರುವುದಕ್ಕೆ ಕುಮಾರಸ್ವಾಮಿ ಎಕ್ಸ್ ಖಾತೆಯಲ್ಲಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಹೆಚ್‌ಡಿಕೆ ಪ್ರತಿಕ್ರಿಯೆ: ಸಿದ್ದರಾಮಯ್ಯನವರೇ, ನಾನು ಸುತ್ತಿಬಳಸಿ ಮಾತನಾಡಲ್ಲ. ನೇರವಾಗಿ ವಿಷಯಕ್ಕೇ ಬರುತ್ತೇನೆ. ಸಿದ್ದರಾಮಯ್ಯನವರು ಕುರ್ಚಿಗಾಗಿ ಜಾತಿ ಎಳೆದು ತಂದಿದ್ದಾರೆ ಎಂದು ನಾನು ತಮಾಷೆಗೆ ಹೇಳಿದ್ದಲ್ಲ, ಸೀರಿಯಸ್ಸಾಗೇ ಹೇಳಿದ್ದೇನೆ. ತಮಾಷೆಗೆ ಹೇಳಿದ್ದೇನೆ ಎಂದಿಟ್ಟುಕೊಳ್ಳಿ, ಅದಕ್ಕೆ ನೀವು ಇಷ್ಟುದ್ದ ಉತ್ತರ ಬರೆಯುವ ಅಗತ್ಯವಿರಲಿಲ್ಲ. ಈ ಬಗ್ಗೆ ನೀವು ಸೀರಿಯಸ್ ಆಗಿದ್ದೀರಿ ಎಂಬುದನ್ನು ನಾನು ಬಲ್ಲೆ. ಹಾಗಿದ್ದರೂ ನನ್ನ ಹೇಳಿಕೆಯನ್ನು ನೀವು ತಮಾಷೆಯಾಗಿಯೇ ಸ್ವೀಕರಿಸಿ, ಅಭ್ಯಂತರವಿಲ್ಲ.

ಸಾಮಾಜಿಕ ನ್ಯಾಯದ ಸೋಗುಕಾರ, ಸಾಮಾಜಿಕ ನ್ಯಾಯದ ಸಂಹಾರಿ ನೀವು. ನಿಮಗೆ ರಾಜಕೀಯ ಶಕ್ತಿ–ಬದುಕು ಕೊಟ್ಟ ದೇವೇಗೌಡರ ಕಡೆ ಬೆಟ್ಟು ಮಾಡುವುದು ಆಘಾತಕಾರಿ. ಇವತ್ತು ನಿಮಗೆ ಸಿಕ್ಕಿರುವ ಅಧಿಕಾರ, ಸಾಮಾಜಿಕ ನ್ಯಾಯಕಾರ ಎಂಬ ಪೋಷಾಕು ಎಲ್ಲವೂ ದೇವೇಗೌಡರ ದೇಣಿಗೆ. ನೀವೂ ಅವರ ಸಾಮಾಜಿಕ ನ್ಯಾಯದ ಫಲ ಮತ್ತು ಫಲಾನುಭವಿ. ಸ್ವಜಾತಿ, ಕುಟುಂಬ ಎಂದು ಅವರು ಆವತ್ತೇ ಭಾವಿಸಿದ್ದಿದ್ದರೆ ನೀವು ಹಣಕಾಸು ಮಂತ್ರಿ ಆಗುವುದಿರಲಿ, ಅಟ್‌ಲೀಸ್ಟ್ ಒಂದು ನಿಗಮದ ಅಧ್ಯಕ್ಷಗಿರಿಯೂ ದಕ್ಕುತ್ತಿರಲಿಲ್ಲ. ಅಂದು ನಿಮ್ಮನ್ನು ಹಣಕಾಸು ಮಂತ್ರಿ ಮಾಡಲೇಬೇಕೆಂದು ಹಠ ತೊಟ್ಟ ಗೌಡರಿಗೆ ಅವತ್ತಿನ ಅವರ ಸಮಕಾಲೀನರು ನಿಮ್ಮ ಬಗ್ಗೆ ಏನೆಲ್ಲಾ ಗುಣಗಾನ ಮಾಡಿ ಬಣ್ಣಿಸಿದ್ದರೆನ್ನುವುದು ನಿಮಗೆ ತಿಳಿದಿರಬೇಕಲ್ಲವೇ?. ■ 6ನೇ ಪುಟಕ್ಕೆ

ಗುತ್ತಿಗೆದಾರನಿಂದ ಲಂಚ ಪಡೆದ ಆರೋಪ ಪ್ರಕರಣ

ಶಾಸಕ ಚಂದ್ರು ಲಮಾಣಿಗೆ 9 ದಿನ ನ್ಯಾಯಾಂಗ ಬಂಧನ

ಮೂವರು ಆರೋಪಿಗಳೂ ಪರಪ್ಪನ ಅಗ್ರಹಾರ ಜೈಲಿಗೆ

ಬೆಂಗಳೂರು: ಗುತ್ತಿಗೆದಾರನಿಂದ ಲಂಚ ಪಡೆಯುವ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರಿಂದ ಬಂಧನಕ್ಕೊಳಗಾಗಿರುವ ಶಿರಹಟ್ಟಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿಯನ್ನು 9 ದಿನ ನ್ಯಾಯಾಂಗ ಬಂಧನಕ್ಕೊಪ್ಪಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.



ಡಾ.ಚಂದ್ರು ಲಮಾಣಿ

ಶಾಸಕ ಚಂದ್ರು ಲಮಾಣಿ ಮಾಲೀಕತ್ವದ ಲಕ್ಷ್ಮೇಶ್ವರ ಪಟ್ಟಣದ ಬಾಲಾಜಿ ಆಸ್ಪತ್ರೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ಶನಿವಾರ ದಾಳಿ ನಡೆಸಿ, ಗುತ್ತಿಗೆದಾರರಿಂದ 5 ಲಕ್ಷ ರೂ. ಲಂಚ ಪಡೆಯುತ್ತಿದ್ದ ಆರೋಪದಡಿ ಶಾಸಕ ಹಾಗೂ ಇಬ್ಬರು ಆಪ್ತ ಸಹಾಯಕರಾದ ಮಂಜುನಾಥ್ ಹಾಗೂ ಗುರುನಾಯಕ್ ಎಂಬುವರನ್ನು ಬಂಧಿಸಿದ್ದರು.

ಮೂವರನ್ನೂ ಭಾನುವಾರ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರಾದ ಗಜಾನನ ಭಟ್ ಅವರು, ಶಾಸಕರು ಹಾಗೂ ಅವರ ಆಪ್ತರಿಬ್ಬರನ್ನು 9 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೊಪ್ಪಿಸಿ ಆದೇಶಿಸಿದರು. ಈ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ವರ್ಗಾವಣೆ ಮಾಡಲು ಕ್ರಮ ವಹಿಸಲಾಗಿದೆ.

ರಾಜಕೀಯ ಸಂಚಲನ: ಬಿಜೆಪಿ ಶಾಸಕ ಚಂದ್ರು ಬಂಧನವು ರಾಜಕೀಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿದೆ. ಶನಿವಾರ ಲೋಕಾಯುಕ್ತ ದಾಳಿಯ ಸುದ್ದಿ ತಿಳಿಯುತ್ತಿದ್ದಂತೆ ■ 6ನೇ ಪುಟಕ್ಕೆ

ರಾಜ್ಯದಲ್ಲಿ ಮಕ್ಕಳಿಗೆ ಮೊಬೈಲ್ ನಿಷೇಧಕ್ಕೆ ಚಿಂತನೆ

ಬೆಂಗಳೂರು: ರಾಜ್ಯದಲ್ಲಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ.

ವಿಶ್ವವಿದ್ಯಾನಿಲಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ ಚರ್ಚೆ



ಸಾಮಾಜಿಕ ಮಾಧ್ಯಮದ ಬಗ್ಗೆ ಹೆಚ್ಚುತ್ತಿರುವ ಗೀಳು ಮತ್ತು ಯುವ ಮನಸ್ಸುಗಳ ಮೇಲೆ ಅದರ ಪ್ರಭಾವವನ್ನು ಉಲ್ಲೇಖಿಸಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ. ವಿಶ್ವವಿದ್ಯಾನಿಲಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚರ್ಚಿಸಿದರು. ಕ್ಯಾಂಪಸ್‌ಗಳಲ್ಲಿ ಅಪ್ರಾಪ್ತ ವಯಸ್ಕರು ಮೊಬೈಲ್ ಬಳಕೆಯನ್ನು ನಿಷೇಧಿಸಬೇಕೇ ಎಂಬುದರ ಬಗ್ಗೆಯೂ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳಿಂದ ಅವರು ಪ್ರತಿಕ್ರಿಯೆ ಪಡೆದರು.

ಮಕ್ಕಳಿಗೆ ಮೊಬೈಲ್ ಬಳಕೆ ನಿಷೇಧ ಸಂಬಂಧ ಚರ್ಚೆ ನಡೆಸುತ್ತಿದ್ದು, ನೀವೆಲ್ಲರೂ ಕುಲಪತಿಗಳಾಗಿರುವ ಕಾರಣ ನಿಮ್ಮ ಅಭಿಪ್ರಾಯ ಕೇಳುತ್ತೇನೆ. ಮಕ್ಕಳು ಡ್ರಗ್ಸ್‌ಗೆ ಬಲಿಯಾಗುತ್ತಿದ್ದಾರೆ. ಅಲ್ಲದೆ ಆಸ್ಟ್ರೇಲಿಯಾದಂತಹ ವಿವಿಧ ದೇಶಗಳ ವಿದ್ಯಾರ್ಥಿಗಳಲ್ಲೂ ಮೊಬೈಲ್ ನಿಷೇಧಿಸುವ ಚಿಂತನೆ ನಡೆದಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಬೇಕು. ಈ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮಾಧ್ಯಮದ ಬಗ್ಗೆ ಹೆಚ್ಚುತ್ತಿರುವ ಗೀಳಿನಿಂದ ಅವರ ನಡವಳಿಕೆ, ಶಿಕ್ಷಣದ ಫಲಿತಾಂಶಗಳು ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ■ 6ನೇ ಪುಟಕ್ಕೆ

ಜೂನ್ ಒಳಗೆ ಜಿಪಂ, ತಾಪಂ ಚುನಾವಣೆ


ಸಿಎಂ ಸಿದ್ದರಾಮಯ್ಯ ಮಾಹಿತಿ

ಅಂಕೋಲಾ: ಜಿಲ್ಲಾ ಪಂಚಾಯ್ತಿ ಹಾಗೂ ತಾಲೂಕು ಪಂಚಾಯ್ತಿ ಚುನಾವಣೆಯನ್ನು ಜೂನ್ ಒಳಗೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ತಾಲೂಕಿನ ಮಂಜಗುಣಿಯಲ್ಲಿ ಭಾನುವಾರ ಗಂಗಾವಳಿ–ಮಂಜಗುಣಿ ಸೇತುವೆ ಉದ್ಘಾಟಿಸಿ ಮಾತನಾಡಿದ ಅವರು, ಗೋಕರ್ಣ ಪಟ್ಟಣ ಪಂಚಾಯ್ತಿಯಾಗಿ ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಇದೆ. ಆದರೆ, ಜೂನ್ ಒಳಗೆ ಚುನಾವಣೆ ನಡೆಯಲಿದ್ದು, ಜನಗಣತಿಯೂ ಆರಂಭವಾಗಲಿದೆ. ಹೀಗಾಗಿ, ಸದ್ಯ ಹೊಸದಾಗಿ ಪಟ್ಟಣ ಪಂಚಾಯ್ತಿ ರಚನೆ ಸಾಧ್ಯವಾಗದು. ಚುನಾವಣೆಗಳು ಮುಗಿದ ಬಳಿಕ ಗೋಕರ್ಣ ಪಟ್ಟಣ ಪಂಚಾಯ್ತಿ ರಚನೆ ಮಾಡಲಾಗುವುದು ಎಂದರು.

ಟೋಲ್‌ಗಳಲ್ಲಿ ನಗದು ಪಾವತಿ ಏ.1ರಿಂದ ರದ್ದು

● ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲೂ ಇದು ಅನ್ವಯ ● ಫಾಸ್ಟ್ ಟ್ಯಾಗ್, ಯುಪಿಐನಿಂದ ಮಾತ್ರ ಪಾವತಿಗೆ ಅವಕಾಶ ● ಟೋಲ್ ಪ್ಲಾಜಾಗಳ ದುರುಪಯೋಗಕ್ಕೆ ತಡೆ ● ದೇಶದ ಡಿಜಿಟಲ್ ಪೇಮೆಂಟ್‌ಗೆ ಮಹತ್ವ



ಮೈಸೂರು, ಫೆ.22(ಬಿಸಿಟಿ, ಎಜಿ, ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ದೇಶದ ಎಲ್ಲಾ ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳು ಏಪ್ರಿಲ್ 1, 2026ರಿಂದ ನಗದು ರಹಿತವಾಗಲಿದೆ. ಫಾಸ್ಟ್ ಟ್ಯಾಗ್ ಅಥವಾ ಯುಪಿಐ (ಯೂನಿಫೈಡ್ ಪೇಮೆಂಟ್ ಇಂಟರ್ಫೇಸ್) ಮೂಲಕ ಮಾತ್ರ ಪಾವತಿಗಳನ್ನು ಸ್ವೀಕರಿಸಲಿದೆ.

ಈ ಮೂಲಕ ಭಾರತದ ಹಣಕಾಸು ವ್ಯವಹಾರದಲ್ಲಿ ನಗದು ರಹಿತವಾದ ಡಿಜಿಟಲ್ ಪೇಮೆಂಟ್ ಕ್ರಾಂತಿಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಈ ಮಹತ್ವದ ತೀರ್ಮಾನ ಕೂಡ ಸೇರ್ಪಡೆಗೊಳ್ಳಲಿದೆ. ರಾಷ್ಟ್ರೀಯ ಹೆದ್ದಾರಿಯ ಟೋಲ್ ಪ್ಲಾಜಾಗಳ ಪಾವತಿಯಲ್ಲಿ ಪಾರದರ್ಶಕತೆ ಹಾಗೂ ಹಣ ದುರುಪಯೋಗವನ್ನು ಇದು ತಡೆಗಟ್ಟಲಿದೆ.

ದೇಶಾದ್ಯಾಂತ ರಾಷ್ಟ್ರೀಯ ಹೆದ್ದಾರಿಗಳ ಪ್ಲಾಜಾಗಳಲ್ಲಿ ನಗದು ರಹಿತ ವಹಿವಾಟ ಸ್ಥಗಿತಗೊಳಿಸಿ ಫಾಸ್ಟ್ ಟ್ಯಾಗ್ ಅಥವಾ ಯುಪಿಐ ಆಧಾರಿತ ಪಾವತಿಯನ್ನು ಜಾರಿ ಮಾಡಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಳೆದ ಎರಡು ತಿಂಗಳ ಹಿಂದೆಯೇ ಘೋಷಿಸಿತ್ತು. ಈ ಮೂಲಕ ಟೋಲ್ ಪ್ಲಾಜಾಗಳಲ್ಲಿ ಡಿಜಿಟಲ್ ಪೇಮೆಂಟ್ ಅಥವಾ ಫಾಸ್ಟ್ ಟ್ಯಾಗ್ ಪಾವತಿ ಕಡ್ಡಾಯವನ್ನು ಒತ್ತಿ ಹೇಳಿ, ಇದಕ್ಕೆ ಸನ್ನದ್ಧಗೊಳ್ಳುವಂತೆ ಜನರಿಗೆ ಸೂಚನೆ ನೀಡಿತ್ತು.

ಈ ತೀರ್ಮಾನವನ್ನು 'ಮೈಸೂರು ಮಿತ್ರ' ಖಚಿತಪಡಿಸಿದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ವ್ಯಾಪ್ತಿಯಲ್ಲಿರುವ ಮೂರು ಟೋಲ್ ಪ್ಲಾಜಾಗಳಲ್ಲಿ ಈಗಾಗಲೇ ಫಾಸ್ಟ್ ಟ್ಯಾಗ್ ಹಾಗೂ ಯುಪಿಐ ಮೂಲಕ ನಡೆಸಲಾಗುತ್ತಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಗಣಂಗೂರು ಟೋಲ್ ಪ್ಲಾಜಾ, ಬೆಂಗಳೂರು ದಕ್ಷಿಣದ ಬಿಡದಿ ಬಳಿಯ ಕಣಿಮಿಣಿಕೆ ಟೋಲ್ ಪ್ಲಾಜಾ, ರಾಮನಗರದ ಶೇಷಗಿರಿಹಳ್ಳಿ ಟೋಲ್ ಪ್ಲಾಜಾಗಳು ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ವ್ಯಾಪ್ತಿಗೆ ಬರುತ್ತದೆ. ಪ್ರಸ್ತುತ ಈ ಟೋಲ್ ಪ್ಲಾಜಾಗಳಲ್ಲಿ ಶೇಕಡ 1ರಷ್ಟು ಮಾತ್ರ ನಗದು ರೂಪದ ಪಾವತಿ ಇದೆ. ಉಳಿದಂತೆ ಶೇಕಡ 99 ರಷ್ಟು ಪಾವತಿ ಫಾಸ್ಟ್‌ಟ್ಯಾಗ್ ಹಾಗೂ ಯುಪಿಐ ■ 6ನೇ ಪುಟಕ್ಕೆ

ಭ್ರಷ್ಟಾಚಾರದಲ್ಲಿ ದಾಖಲೆ ಬರೆದ ರಾಜ್ಯ ಕಾಂಗ್ರೆಸ್

'ಜನರೊಂದಿಗೆ ಜನತಾದಳ'ದಲ್ಲಿ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ


ಕೆ.ಆರ್.ನಗರ, ಫೆ.22– ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ದಾಖಲೆ ಸೃಷ್ಟಿಸಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ರೇಡಿಯೋ ಮೈದಾನದಲ್ಲಿ ಭಾನುವಾರ ಸಂಜೆ ನಡೆದ 'ಜನರೊಂದಿಗೆ ಜನತಾದಳ' ಹಾಗೂ 'ಸದಸ್ಯತ್ವ ನೋಂದಣಿ ಅಭಿಯಾನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಭಷ್ಟಾಚಾರದಲ್ಲಿ ಮುಳುಗಿದೆ ಎಂದು ಹರಿಹಾಯ್ದರು.

ಕಾಂಗ್ರೆಸ್‌ನವರು ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲಾಗದೇ ಪರಿಶಿಷ್ಟ ಜಾತಿ, ಪಂಗಡದವರ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಹಣವನ್ನು ಬಳಸಿಕೊಂಡಿದ್ದಾರೆ. ಇದೀಗ ಸಿಎಂ ಕುರ್ಚಿಗಾಗಿ ಜಟಾಪಟಿ ನಡೆಸುತ್ತಿದ್ದಾರೆ. ಇದೇ ಕಾಂಗ್ರೆಸ್ ಸರ್ಕಾರದ 3 ವರ್ಷಗಳ ಸಾಧನೆ ಎಂದರು.

> ಕಾಂಗ್ರೆಸ್ ಪಕ್ಷಕ್ಕೆ, ಸರ್ಕಾರಕ್ಕೆ ತಾಕತ್ತಿದ್ದರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಿ, ಆಗ ನಮ್ಮ ತಾಕತ್ತು ಏನೆಂಬುದನ್ನು ತೋರಿಸುತ್ತೇವೆ. ಸಾರ್ವಜನಿಕರ ತೆರಿಗೆ ಹಣ ಲೂಟಿ ಮಾಡುತ್ತಿರುವ ಕಾಂಗ್ರೆಸ್‌ನವರಿಗೆ ನಮ್ಮ ಪಕ್ಷ ಹಾಗೂ ವರಿಷ್ಠರನ್ನು ಟೀಕಿಸುವ ನೈತಿಕತೆ ಇಲ್ಲ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಐದೂವರೆ ಲಕ್ಷ ಕೋಟಿ ಸಾಲ ಮಾಡಿ, ಜನರ ಮೇಲೆ ಸಾಲದ ಹೊರೆ ಹೊರಿಸಿದ್ದಾರೆ.
> -ನಿಖಿಲ್ ಕುಮಾರಸ್ವಾಮಿ

ಪ್ರಾದೇಶಿಕ ಪಕ್ಷ ಜೆಡಿಎಸ್ 18 ಸೀಟು ಬಂದಿದೆ ಎನ್ನುವ ನೀವು, ದೇಶದಲ್ಲಿ ಎಷ್ಟು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದೀರಿ? ಕಾಂಗ್ರೆಸ್ ಹೈಕಮಾಂಡ್ ಯಾರು ಎಂಬುದೇ ಗೊತ್ತಾಗುತ್ತಿಲ್ಲ. ಆದರೆ ಜೆಡಿಎಸ್‌ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಹೈಕಮಾಂಡ್ ಎಂದು 'ಕೈ' ನಾಯಕರಿಗೆ ತಿರುಗೇಟು ನೀಡಿದರು.



ಕೆ.ಆರ್.ನಗರದಲ್ಲಿ ನಡೆದ 'ಜನರೊಂದಿಗೆ ಜನತಾದಳ' ಹಾಗೂ 'ಸದಸ್ಯತ್ವ ನೋಂದಣಿ ಅಭಿಯಾನ' ಕಾರ್ಯಕ್ರಮವನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು.

ಇಂದಿರಾ ಗಾಂಧಿ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರು. ಈಗ ರಾಜ್ಯದ ಗುತ್ತಿಗೆದಾರರ 37 ಸಾವಿರ ಕೋಟಿ ಹಣ ನೀಡದೇ ಅವರು ಆತ್ಮಹತ್ಯೆ ಮಾಡಿಕೊಳ್ಳುವ ದುಸ್ಥಿತಿಗೆ ತಳ್ಳಿದ್ದೀರಿ. ಶಾಸಕರಿಗೆ ಅನುದಾನ ನೀಡುವುದಕ್ಕೂ ನಿಮ್ಮ ಸರ್ಕಾರದಲ್ಲಿ ಹಣವಿಲ್ಲ ಎಂದು ನಿಮ್ಮ ಪಕ್ಷದ ಶಾಸಕರೇ ಆರೋಪಿಸುತ್ತಿದ್ದಾರೆ ಎಂದು ಟೀಕಿಸಿದರು. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಬಗ್ಗೆ ಸುದ್ದಿ ಬಿತ್ತರಿಸುತ್ತಾರೆ ಎಂಬ ಕಾರಣಕ್ಕೆ ಮಾಧ್ಯಮದರಿಗೆ ವಿಧಾನಸೌಧ ಪ್ರವೇಶಕ್ಕೆ ನಿರ್ಬಂಧ ಹೇರಿರುವುದು ಖಂಡನೀಯ ಎಂದು ಇದೇ ವೇಳೆ ಗುಡುಗಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ರಾಜ್ಯದಲ್ಲಿ ಜೆಡಿಎಸ್ ಬಲಿಷ್ಠವಾಗಿದ್ದು, ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟಿಸುವ ಮೂಲಕ ಪಕ್ಷದ ಬೆಳವಣಿಗೆಗೆ ಶ್ರಮಿಸಬೇಕು ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ನಗರ ಪ್ರದೇಶವಲ್ಲದೇ ಗ್ರಾಮೀಣ ಭಾಗದಲ್ಲೂ ಗಾಂಜಾ ಇನ್ನಿತರ ಮಾದಕ ವಸ್ತುಗಳು ಸುಲಭವಾಗಿ ಜನರ ಕೈ ಸೇರುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಮದ್ಯದ ಬೆಲೆ ಹೆಚ್ಚಿಸಿದ್ದರಿಂದ ಮಾದಕ ವಸ್ತುಗಳ ಮಾರಾಟ, ಬಳಕೆ ಹೆಚ್ಚಾಗಿದೆ. ರಾಜ್ಯದ ಜನತೆಗೆ ಗ್ಯಾರಂಟಿ ಯೋಜನೆ ನೀಡುವ ಬಗ್ಗೆ ಅಭ್ಯಂತರವಿಲ್ಲ. ಆದರೆ ಅದಕ್ಕಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದು ಸರಿಯೇ? ಹೀಗಾದರೆ ಅಭಿವೃದ್ಧಿ ಕಾರ್ಯ ಹೇಗೆ ನಡೆಯುತ್ತಿದೆ ಎಂದು ಪ್ರಶ್ನಿಸಿದರು.

ಇದಕ್ಕೂ ಮುನ್ನ ಪಟ್ಟಣಕ್ಕೆ ಆಗಮಿಸಿದ ನಿಖಿಲ್ ಕುಮಾರಸ್ವಾಮಿ, ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಬಳಿಕ ಪಟ್ಟಣದ ಗರುಡಗಂಭ ವೃತ್ತದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಬೃಹತ್ ಗಾತ್ರದ ಕಿತ್ತಳೆ ಹಣ್ಣಿನ ಹಾರ ಹಾಕಿ, ಹೂಮಳೆ ಸುರಿಸಿದರು. ■ 6ನೇ ಪುಟಕ್ಕೆ

ಮಕ್ಕಳಿಗೆ ಶಿಕ್ಷಣದೊಂದಿಗೆ ಸಂಸ್ಕೃತಿ, ಸಂಸ್ಕಾರ ಕಲಿಸಿ

ಸಾಂಸ್ಕೃತಿಕ ಕಾವ್ಯೋತ್ಸವದಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸಲಹೆ

ಮೈಸೂರು,ಫೆ.22(ಜಿಎ)–ಮಕ್ಕಳಿಗೆ ಕೇವಲ ಶಿಕ್ಷಣ ಕಲಿಸಿದರೆ ಪೋಷಕರ ಕರ್ತವ್ಯ ಮುಗಿಯುವುದಿಲ್ಲ. ಮಕ್ಕಳು ಸರಿದಾರಿಯಲ್ಲಿ ಹೋಗುತ್ತಿದ್ದಾರೆಯೇ ಎಂಬುದನ್ನು ಗಮನಿಸಬೇಕು ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಲಹೆ ನೀಡಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಧಾರವಾಡ ಜಿಲ್ಲೆ ಕುಂದಗೋಳದ ಜನ ಸೇವಾ ಫೌಂಡೇಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಲೆಯನ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ಏರ್ಪಡಿಸಿದ್ದ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಕಲಿಸಬೇಕು. ಪ್ರಸ್ತುತ ಸ್ಪರ್ಧಾತ್ಮಕ ಯುಗ. ಹೀಗಾಗಿ ಶಿಕ್ಷಣ ಬಹಳ ಮುಖ್ಯ. ಆದ್ದರಿಂದ ಪ್ರತಿಯೊಬ್ಬರೂ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಬೇಕು. ಇತ್ತೀಚಿಗೆ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ. ಸದಾ



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೊಬೈಲ್‌ನಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಮುಳುಗಿ ರುತ್ತಾರೆ. ಓದದೇ ಯಾವುದೇ ಸಾಧನೆ ಮಾಡಲು ಸಾಧ್ಯವಿಲ್ಲ ಎಂದರು.

ಕೃಷಿ ಕುಟುಂಬದಿಂದ ಬಂದ ನಾನು ಬಿ.ಎಸ್ಸಿ(ಎಜಿ), ಎಂ.ಎಸ್ಸಿ (ಎಜಿ) ನಂತರ ಐಪಿಎಸ್ ಮಾಡಿದೆ. ನಾನು ಕಷ್ಟಪಟ್ಟು ಓದದಿದ್ದರೆ ಇಲ್ಲಿಯುವರೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪೋಷಕರು ಮಕ್ಕಳ ಕಡೆಗೆ ಗಮನ ನೀಡಬೇಕು. ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿ ಯಾಗಿ ಮಾಡಬೇಕು. ಹೀಗಾದರೆ ಅವರು ಮುಂದೆ ದೇಶದ ಆಸ್ತಿಯಾಗುತ್ತಾರೆ ಎಂದರು.

ಪೊಲೀಸ್ ಇಲಾಖೆಯಲ್ಲಿದ್ದರೂ ನಾನು ಯಾವುದೇ ಠಾಣೆಗೆ ಭೇಟಿ ನೀಡಿದರೂ ರೈತರ ಸಮಸ್ಯೆಗಳ ಪರಿಹಾರಕ್ಕೆ ಮೊದಲು ಆದ್ಯತೆ ನೀಡುತ್ತೇನೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮುಂಬೈ, ಹೈದ್ರಾಬಾದ್, ಮದ್ರಾಸ್ ಪ್ರಾಂತ್ಯ, ಮೈಸೂರು ಅರಸರು–ಹೀಗೆ ಬೇರೆ ಬೇರೆಯವರ ಆಳ್ವಿಕೆಗೆ ಒಳಪಟ್ಟಿದ್ದ ಕನ್ನಡಿಗರನ್ನು ಒಂದೆಡೆ ಸೇರುವಂತೆ ಮಾಡಿದ್ದು ಭಾಷೆ. ಆದ್ದರಿಂದ ನಮ್ಮ ಭಾಷೆಗೆ ಎಲ್ಲರೂ ಮಹತ್ವ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪಿ.ವಿಶ್ವನಾಥ್, ಸಿ.ಜಿ. ಗಂಗಾಧರ್, ಟಿ.ತ್ಯಾಗರಾಜ್, ಖಾಜಾ ಹುಸೇನ್ ಇಮಾಮ್ ಹುಸೇನ್ ಗುಳಗುಂದಿ, ನಾಗರಾಜ ವಿ.ಬೈರಿ, ಜಾನಪದ ಕಲಾವಿದರೂ ಮತ್ತು ದುಗ್ಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷರೂ ಆದ ಡಾ.ಬಿ.ಶಂಕರ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಬೆಳಗಾವಿಯ ಶ್ರೀ ಕಾಡಯ್ಯ ಹಿರೇಮಠ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರದೇಶ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಆರಿಫ್ ಬೀರೂರು, ಕರುನಾಡ ಕನ್ನಡ ಕಲಾಸಿರಿ ಬಳಗದ ರಾಜ್ಯಾಧ್ಯಕ್ಷ ಸಿ.ಎಂ.ಅಂಬರೀಶ್, ಹರಪನಹಳ್ಳಿಯ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಗಿರೀಶ ನೆಲ್ಕುದ್ರಿ, ಬೆಂಗಳೂರಿನ ರಾಷ್ಟ್ರೀಯ ಮಹಿಳಾ ವೇದಿಕೆ ಸಂಸ್ಥಾಪಕರಾದ ಜಯಂತಿ ಗೌಡ್, ಕೃಷಿಕ ಸಮಾಜದ ರಾಜ್ಯಾಧ್ಯಕ್ಷೆ ಮಾಣಿಕ್ಯ ಬ.ಚಿಲ್ಲೂರ, ರೈತ ಸಂಘ ಸಂಘಟನಾ ಕಾರ್ಯದರ್ಶಿ ಬಸಪ್ಪ ಸಿದ್ದಪ್ಪ ಸಂಭೋಜಿ ಮತ್ತಿತರರು ಪಾಲ್ಗೊಂಡಿದ್ದರು.

ರಾಮಕೃಷ್ಣ ಪರಮಹಂಸರ ಜಯಂತಿ ಆಚರಣೆ



ಮೈಸೂರು: ಮಹಾನ್ ಸಂತರು ಹಾಗೂ ಆಧ್ಯಾತ್ಮಿಕ ಗುರುಗಳಾದ ರಾಮಕೃಷ್ಣ ಪರಮಹಂಸರ 191ನೇ ಜಯಂತಿ ಅಂಗವಾಗಿ ರಾಮಕೃಷ್ಣ ನಗರ ವೃತ್ತದ ಪರಮಹಂಸರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ರಾಮಕೃಷ್ಣ ಪರಮಹಂಸರು ಭಾರತದ ಆಧ್ಯಾತ್ಮಿಕ ಚಿಂತನೆಯನ್ನು ಜಗತ್ತಿಗೆ ಪರಿಚಯಿಸಿ, ಇಸ್ಲಾಂ ಕ್ರಿಶ್ಚಿಯನ್ ಸೇರಿದಂತೆ ಎಲ್ಲಾ ಧರ್ಮದ ಸಾರವು ಒಂದೇ. ಭಕ್ತಿಯಿಂದ ಮಾತ್ರವೇ ಉನ್ನತಿಯನ್ನು ಸಾಧಿಸಬಹುದು ಎಂದು ಬೋಧಿಸಿದರು. ಸ್ವಾಮಿ ವಿವೇಕಾನಂದರಂತಹ ಮಹಾನ್ ವ್ಯಕ್ತಿಯನ್ನು ಶಿಷ್ಯರನ್ನಾಗಿ ರೂಪಿಸಿ ಜಗತ್ತಿಗೆ ಹಿಂದೂ ಧರ್ಮದ ಮೌಲ್ಯ ಪಸರಿಸಿದರು. ರಾಮಕೃಷ್ಣ ಮಿಷನ್ ಇಂದಿಗೂ ಅವರ ಹಾದಿಯಲ್ಲೇ ನಡೆಯುತ್ತಿದೆ ಅವರ ಕೊಡುಗೆ ಅಪಾರ ಎಂದು ಬಣ್ಣಿಸಿದರು.

ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಜೋಗಿ ಮಂಜು, ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್‌ಭಟ್, ಪಾಲಿಕೆ ಮಾಜಿ ಸದಸ್ಯ ರಾದಜಗದೀಶ್, ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಅಪೂರ್ವ ಸುರೇಶ್, ದೂರ ರಾಜಣ್ಣ, ಎಸ್ ತ್ಯಾಗರಾಜ್, ಶಿವು ಪಟೇಲ್, ರಾಘವೇಂದ್ರ, ಎನ್ ಪ್ರತಾಪ್, ಚಂದನ್ ಗೌಡ, ಮಿರ್ಲೆ ಪನೀಶ್, ಧರ್ಮೇಂದ್ರ, ಆನಂದ, ಸುಚೀಂದ್ರ ಹಾಗೂ ಇನ್ನಿತರರು ಹಾಜರಿದ್ದರು.



ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಕಿರಿಯ ವಕೀಲ ವರುಣ್‌ರಾಜ್ ಆರ್. ಅವರನ್ನು ಮೈಸೂರಿನ ಗಾಂಧಿನಗರದಲ್ಲಿ ಜೈ ಭೀಮ್ ಜನ ಸ್ಪಂದನ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಪ್ರಕಾಶ್, ಶ್ರೀಕಾಂತ್, ಪ್ರತಾಪ್, ಲೋಹಿತ್, ಸಾಗರ್, ರಾಕೇಶ್ ಇನ್ನಿತರರಿದ್ದರು.

ಫೆ.25ರಿಂದ ರಾಷ್ಟ್ರೀಯ ರಂಗೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ರಾಷ್ಟ್ರೀಯ ರಂಗೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು,ಫೆ.22(ಜಿಎ)–ಮೈಸೂರಿನ ಅಭಿಯಂತರರು ರಂಗ ತಂಡದ 33ನೇ ವಾರ್ಷಿಕೋತ್ಸವದ ಅಂಗವಾಗಿ ಫೆ25ರಿಂದ ಮಾ.1ರವರೆಗೆ ರಂಗಾಯಣದ ಕಿರುರಂಗ ಮಂದಿರದಲ್ಲಿ ರಾಷ್ಟ್ರೀಯ ರಂಗೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆ ಮುಖ್ಯಸ್ಥ ಹೆಚ್.ಎಸ್.ಸುರೇಶ್ ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.25ರಂದು ಸಂಜೆ 6.30ಕ್ಕೆ ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ.ಹಿ.ಚಿ.ಬೋರಲಿಂಗಯ್ಯ ರಂಗೋತ್ಸವವನ್ನು ಉದ್ಘಾಟಿಸುವರು. ಹಿರಿಯ ರಂಗಕರ್ಮಿ ಶಶಿಧರ ಬರಿಗತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಮಾತನಾಡಿ, ಫೆ.25ರಂದು ಸಂಜೆ ಉದ್ಘಾಟನೆ ಬಳಿಕ ಕರಾವಳಿಯ ನಿರ್ದಿಗಂತ ತಂಡದಿಂದ 'ರಾಮ ಕೃಷ್ಣ ಶಿವ' ನಾಟಕ, 26ರಂದು ಸಂಜೆ 7ಕ್ಕೆ ಒಡ್ಡೋಲಗ ತಂಡದಿಂದ 'ಶುನಶ್ಯೇಪ', 27ರಂದು ಸಂಜೆ 7ಕ್ಕೆ ದಿ ಇಂಟರ್ ನ್ಯಾಷನಲ್ ಥಿಯೇಟರ್‌ನಿಂದ 'ವೈ' ಹೆಸರಿನ ನಾಟಕ, 28ರಂದು ಸಂಜೆ 7ಕ್ಕೆ ಅಭಿಯಂತರ ತಂಡದಿಂದ 'ಮರಣ ಮೃದಂಗ', ಮಾ.1ರಂದು ಥಿಯೇಟರ್ ನಿಶಾ ತಂಡದಿಂದ 'ಯಯಾತಿ' ನಾಟಕ ಪ್ರದರ್ಶನ ನಡೆಯಲಿವೆ ಎಂದರು.

ಮಾ.7ರಿಂದ 'ನಾರಿ' ರಾಷ್ಟ್ರಮಟ್ಟದ ಮಹಿಳಾ ಸಮಾವೇಶ

ಮೈಸೂರು,ಫೆ.22(ಜಿಎ)–ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ರಾಜ್ಯ ಮಹಿಳಾ ಸಂಘಟನೆಗಳ ಒಕ್ಕೂಟದಿಂದ ಮಾ.7 ಮತ್ತು 8ರಂದು ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ರಾಷ್ಟ್ರ ಮಟ್ಟದ ಮಹಿಳಾ ಸಮಾವೇಶ 'ನಾರಿ' ಆಯೋಜಿಸಿರುವುದಾಗಿ ಸಂಘಟನೆ ಪದಾಧಿಕಾರಿ ಯಮುನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ರಾಜಕೀಯ ಪಕ್ಷ, ಧರ್ಮ, ಜಾತಿಗಳ ಭೇದ ಭಾವವಿಲ್ಲದೇ ಒಂದೇ ವೇದಿಕೆಯಲ್ಲಿ ಮಹಿಳೆಯರನ್ನು ತರುವ ಕಾರ್ಯಕ್ರಮವಾಗಿದ್ದು, ಅತಿಥಿಗಳು ಹಾಗೂ ಸಮಯದ ನಿಗದಿ ಪ್ರಕ್ರಿಯೆ ನಡೆಯುತ್ತಿದೆ. 2 ದಿನಗಳ ಕಾಲ ನಡೆಯುವ ಈ ಸಮಾವೇಶದಲ್ಲಿ ಮಹಿಳೆಯರ ಹಕ್ಕಿಗಾಗಿ ಧ್ವನಿಯೆತ್ತಲಾಗುವುದು, ಕಾನೂನು ಅರಿವು ಸಹಾ ಮೂಡಿಸಲಿದೆ ಎಂದರು. ರಾಷ್ಟ್ರ ಮಟ್ಟದ ಕಲಾವಿದರು, ಮಹಿಳಾ ಚಿಂತಕರು, ಲೇಖಕರು, ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಕುರಿತು ಜಾಗೃತಿ ಮೂಡಿಸಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಿಳಾ ನಾಯಕತ್ವ ಉತ್ತೇಜನ, ಸಂವಿಧಾನಾತ್ಮಕ ಹಕ್ಕುಗಳ ಕುರಿತು ಚರ್ಚೆ, ಮಧ್ಯೆ ಮಧ್ಯೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು.


ನಿಧನ



ನಿವೃತ್ತ ಪ್ರಾಂಶುಪಾಲ ಟಿ.ಎಸ್.ಗೋಪಾಲಕೃಷ್ಣ

ಮೈಸೂರು, ಫೆ.22– ನಗರದ ಶಾರದಾ ವಿಲಾಸ ಬಿ.ಎಡ್. ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಟಿ.ಎಸ್.ಗೋಪಾಲಕೃಷ್ಣ (85) ಅವರು ಶನಿವಾರ ಬೆಳಿಗ್ಗೆ ಅಲ್ಪಕಾಲದ ಅಸ್ವಸ್ಥತೆ ನಂತರ ಮೈಸೂರಿನಲ್ಲಿ ನಿಧನರಾದರು. ಅವರು ಪತ್ನಿ ನಾಗಮಣಿ, ಪುತ್ರ ಜಗನ್ನಾಥ ಹಾಗೂ ಪುತ್ರಿಯರಾದ ಲಾವಣ್ಯ ಮತ್ತು ರೂಪಾ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಅವರ ಪಾರ್ಥಿವ ಶರೀರವನ್ನು ಫೆ.23ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 12.30ರವರೆಗೆ ವಿದ್ಯಾರಣ್ಯಪುರಂನಲ್ಲಿರುವ ಅವರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು. ನಂತರ ಅದೇ ದಿನ ಮೈಸೂರಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಶ್ರೀಮತಿ ಕುಮುದ ಆರ್.ವಿ. ಶ್ರೀನಿವಾಸಮೂರ್ತಿ

ಮೈಸೂರಿನ ಜಯನಗರ 13ನೇ ಕ್ರಾಸ್‌ನ ಶಕ್ತಿ ಪವರ್ ಪ್ರೆಸ್‌ನ ಮಾಲೀಕರಾಗಿದ್ದ ಶ್ರೀಮತಿ ಕುಮುದ ಆರ್.ವಿ. ಶ್ರೀನಿವಾಸ ಮೂರ್ತಿ (96) ಭಾನುವಾರ ಬೆಳಿಗ್ಗೆ ನಿಧನರಾದರು.

ಇವರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಭಾನುವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಗೀತಾ



ಮೈಸೂರು,ಫೆ.22– ತಿ.ನರಸೀಪುರ ತಾಲೂಕಿನ ಸಿದ್ದನಹುಂಡಿ ಗ್ರಾಮದ ನಿವಾಸಿ ಶ್ರೀನಿವಾಸ ಮೂರ್ತಿ ಅವರ ಪತ್ನಿ ವಿ.ಗೀತಾ(46) ಭಾನುವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಹಾಗೂ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಂಗ ತರಬೇತಿ ಶಿಬಿರ

ಮೈಸೂರು: ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ 'ಯುವ ಜನತೆಗಾಗಿ ರಂಗಭೂಮಿ' ಶೀರ್ಷಿಕೆ ಅಡಿಯಲ್ಲಿ ಫೆ.26 ರಿಂದ ಮಾ.18ರವರೆಗೆ ರಂಗ ತರಬೇತಿ ಶಿಬಿರವನ್ನು ಗಂಗೋತ್ರಿ ಲೇಔಟ್‌ನಲ್ಲಿರುವ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್‌ನ ಅನುದಿನ ನಿಲಯದಲ್ಲಿ ಏರ್ಪಡಿಸಲಾಗಿದೆ.

ಶಿಬಿರವು 20 ದಿನಗಳವರೆಗೆ ನಡೆಯಲಿದ್ದು, ಪ್ರತಿದಿನ ಸಂಜೆ 4.30ರಿಂದ 6 ಗಂಟೆಯವರೆಗೆ ಮಾತ್ರ ಇರುತ್ತದೆ. ಹೆಚ್ಚಿನ ಮಾಹಿತಿಗೆ ಆಸಕ್ತರು ದೂರವಾಣಿ 7019441509ಗೆ ಸಂಪರ್ಕಿಸಬಹುದು ಎಂದು ಶಿಬಿರದ ನಿರ್ದೇಶಕ ಕೃಷ್ಣ ಜನಮನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು 'ಗ್ರೇಟರ್ ಮೈಸೂರು–ವೇ ಫಾರ್ವರ್ಡ್' ವಿಚಾರ ಸಂಕಿರಣ

ಮೈಸೂರು,ಫೆ.22(ಜಿಎ)–ಗ್ರೇಟರ್ ಮೈಸೂರಿಗೆ ಸಂಬಂಧಿಸಿದಂತೆ ನರೆಡ್ಕೋ ಮೈಸೂರು ಶಾಖೆ ವತಿಯಿಂದ ಫೆ.23ರಂದು ಸಂಜೆ 4 ಗಂಟೆಗೆ ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ 'ಗ್ರೇಟರ್ ಮೈಸೂರು–ವೇ ಫಾರ್ವರ್ಡ್' ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಆಡಳಿತ ಮಂಡಳಿ ಸದಸ್ಯ ಎನ್.ದಿವ್ಯೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ,



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನರೆಡ್ಕೋ ಮೈಸೂರು ಅಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್ ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್, ವಾಸ್ತುಶಿಲ್ಪ ತಜ್ಞ ಹಾಗೂ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಉಪನ್ಯಾಸಕ ನೆಲ್ಸನ್ ಜೋ ವಿಜೈ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಖೆ ಅಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸುವರು ಎಂದರು.

ಅಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್ ಮಾತನಾಡಿ, ಮೈಸೂರನ್ನು ಬೃಹತ್‌ಗೊಳಿಸುವ ಚಿಂತನೆ ನಡೆದಿದೆ. ಆದರೆ ಇದರ ಬಗ್ಗೆ ಯಾರಿಗೂ ಸಮರ್ಪಕ ಮಾಹಿತಿ ಇಲ್ಲ. ನಮ್ಮ ನಗರ ಹೇಗೆ ಬೆಳವಣಿಗೆ ಆಗ ಬೇಕೆಂಬ ಬಗೆಗಿನ ನಾಗರೀಕರು ಹಾಗೂ ಇನ್ನಿತರ ಭಾಗೀದಾರರ ಚಿಂತನೆ ಏನು ಎಂಬುದರ ಅರಿವಿಗೆ ಈ ವಿಚಾರ ಸಂಕಿರಣ ಆಯೋಜಿಸುತ್ತಿದ್ದು, ಇಲ್ಲಿ ಚರ್ಚಿಸುವ ವಿಚಾರದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ವಿ.ಸಿ. ರವಿಕುಮಾರ್, ಎ.ಪಿ.ನಾಗೇಶ್, ಗಗನ್ ದೀಪ್, ಧೀರೇಂದ್ರಪ್ರಸಾದ್, ಮಾ.ವಿ. ರಾಮಪ್ರಸಾದ್ ಉಪಸ್ಥಿತರಿದ್ದರು.

ಬಿಸಿಯೂಟ ಕಾರ್ಮಿಕರ ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಫೆ.22(ಜಿಎ)–ಬಿಸಿಯೂಟ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿ ಮಾಡಬೇಕು. ರಾಜ್ಯದಲ್ಲಿ ಈಗಾಗಲೇ ಭರವಸೆ ನೀಡಿರುವಂತೆ ಈ ಬಾರಿಯ ಬಜೆಟ್‌ನಲ್ಲಿ ಗೌರವಧನ ಹೆಚ್ಚಿಸಿ ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ವತಿಯಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯಾದ್ಯಂತ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಪೌಷ್ಟಿಕತೆ ನೀಗಿಸಲು, ಮಕ್ಕಳು ವಿದ್ಯಾಭ್ಯಾಸ ಹೊಂದಲು ಅವಕಾಶ ಮಾಡಿಕೊಟ್ಟಿರುವ ಅಕ್ಷರ ದಾಸೋಹ ಯೋಜನೆ ಯಶಸ್ಸಿಗೆ ಬಿಸಿ ಯೂಟ ಕಾರ್ಯಕರ್ತೆಯರು ಶ್ರಮಿಸುತ್ತಿದ್ದಾರೆ. ಆದರೆ ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪಾಲಿಸುತ್ತಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳಿಂದಾಗಿ ಇಂತಹ ಮಹತ್ವಾಕಾಂಕ್ಷಿತ ಯೋಜನೆಯನ್ನು ದೊಡ್ಡ ದೊಡ್ಡ ಸರ್ಕಾರೇತರ ಸಂಸ್ಥೆಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಸೇವೆಯ ಹೆಸರಿನಲ್ಲಿ ನೀಡುವ ಮೂಲಕ ಖಾಸಗೀಕರಣ ಮಾಡಿ ಮಕ್ಕಳ ಭವಿಷ್ಯ ರೂಪಿಸುತ್ತಿದ್ದ ಮಹಾಮಾತೆಯರೆಂದೆನಿಸಿದ ಬಿಸಿಯೂಟ ಕಾರ್ಯಕರ್ತೆಯರ ಬದುಕನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಬಿಸಿಯೂಟ ಕಾರ್ಮಿಕರಿಗೂ ಈ ಬಾರಿಯ ಬಜೆಟ್‌ನಲ್ಲಿ ಗೌರವಧನ ಹೆಚ್ಚಿಸಿ ಘೋಷಿಸುವಂತೆ ಒತ್ತಾಯಿಸಿ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಿ, ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಯಾವುದೇ ಯೋಜನೆಗಳು ಫಲಕಾರಿಯಾಗಬೇಕೆಂದರೆ ಯೋಜನೆಯ ಕೆಳಗಡೆ ಕೆಲಸ ಮಾಡುವ ಕಾರ್ಮಿಕರ ಬದುಕು ಹಸನಾಗಿರಬೇಕು. ಆದರೆ, ಬಿಸಿಯೂಟ ಯೋಜನೆಯಡಿ ಕೆಲಸ ಮಾಡುವ ಅಡುಗೆ ಕಾರ್ಮಿಕರ ಗೌರವಧನ ಅತ್ಯಂತ ಕಡಿಮೆಯಾಗಿದೆ. ಮಾಸಿಕ 4600–4700 ರೂ ಪಡೆದು ಜೀವನ ನಡೆಸುವುದೇ ದುಸ್ತರವಾಗಿದೆ. ಇದೀಗ ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆಯ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಹಂತ ಹಂತವಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದಾಗಿ ಭವಿಷ್ಯದ ಅಭದ್ರತೆ ಕಾಡುತ್ತಿದೆ. ಹೀಗಾಗಿ ಕೂಡಲೇ ಸರ್ಕಾರ ಕೆಲಸದ ಭದ್ರತೆ ನೀಡಿ, ಈ ಬಾರಿಯ ಬಜೆಟ್‌ನಲ್ಲಿ ಗೌರವಧನ ಹೆಚ್ಚಳ ಮಾಡಬೇಕು. ನಮ್ಮೆಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಹಕ್ಕೊತ್ತಾಯಗಳು: ಈಗಾಗಲೇ ವಿವಿಧ ಇಲಾಖೆಗಳಲ್ಲಿ ಅಡುಗೆಯವರಿಗೆ ಕನಿಷ್ಠ ವೇತನವಿದ್ದು ಅದರಂತೆ ಬಿಸಿಯೂಟ ಕಾರ್ಮಿಕರಿಗೂ ಕನಿಷ್ಠ ವೇತನ ಜಾರಿ

ಸೇವೆಯ ಹೆಸರಿನಲ್ಲಿ ಬಿಸಿಯೂಟ ಕಾರ್ಮಿಕರಿಗೆ ಅನ್ಯಾಯ

ಮಾಡಬೇಕು. ಈ ಬಾರಿ ಬಜೆಟ್‌ನಲ್ಲಿ ಗೌರವಧನ ಹೆಚ್ಚಿಸಬೇಕು. ಮಾಸಿಕ ವೇತನವನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಾರ್ಮಿಕರ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು. ಸುರಕ್ಷಿತ ನಿವೃತ್ತಿ ಬದುಕು ಖಾತ್ರಿಪಡಿಸುವುದಕ್ಕಾಗಿ ನಿವೃತ್ತಿ ವೇತನಕ್ಕೆ ಒಳಪಡಿಸಿ, ಅಲ್ಲಿವರೆಗೆ 5 ಲಕ್ಷ ಇಡಿ ಗಂಟು ನೀಡಬೇಕು. ಜೀವ ವಿಮೆಗೆ ಒಳಪಡಿಸಿ ಇಲಾಖೆಯಿಂದ ಪ್ರೀಮಿಯಂ ಪಾವತಿಸಬೇಕು. ಹತ್ತಿ ಬಟ್ಟೆಯ ಸಮವಸ್ತ್ರ ಹಾಗೂ ಕೈಗವಸು, ತಲೆಯ ಸ್ಕಾರ್ಫ್, ಏಪ್ರಾನ್‌ಗಳನ್ನು ನೀಡಬೇಕು. ಬಿಸಿಯೂಟ ಕಾರ್ಮಿಕರಿಗೆ 10 ತಿಂಗಳ ಬದಲಾಗಿ 12 ತಿಂಗಳು ಗೌರವಧನ ನೀಡಬೇಕು. ಬಿಸಿಯೂಟ ಕಾರ್ಮಿಕರನ್ನು ಖಾಯಂಗೊಳಿಸಿ, ಸೇವಾ ಭದ್ರತೆ ಒದಗಿಸಬೇಕು. ಬಿಸಿಯೂಟ ಕಾರ್ಮಿಕರಿಗೆ ಮೊಟ್ಟೆ ಕುದಿಸಿ, ಸಿಪ್ಪೆ ಸುಲಿದ ಹಣವನ್ನು ಪ್ರತಿ ತಿಂಗಳು ಅವರ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಸಂಧ್ಯಾ, ಉಮಾ, ರಾಜ್ಯ ಉಪಾಧ್ಯಕ್ಷೆ ರಾಜೇಶ್ವರಿ, ಮಹದೇವಮ್ಮ, ಮಾಲಮ್ಮ, ಸೌಮ್ಯ, ರಾಜಮ್ಮ ಇತರರಿದ್ದರು.




ಮೈಸೂರಿನ ಅಗ್ರಹಾರದ ಉತ್ತರಾಧಿ ಮಠದ ರಸ್ತೆಯಲ್ಲಿರುವ ಕೆ.ಶ್ರೀನಿವಾಸ್ ಮತ್ತು ಎಸ್.ಅನುರಾಧ ದಂಪತಿ ಪುತ್ರಿ ಎಸ್.ಊಹಾ ಅವರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ಚಿತ್ರವನ್ನು ಪೆನ್ಸಿಲ್ ಸ್ಕೆಚ್‌ನಿಂದ ರಚಿಸಿದ್ದು, ಆಶ್ರಮದಲ್ಲಿ ಶ್ರೀಗಳಿಗೆ ಸಮರ್ಪಿಸಿದರು. ಚಿತ್ರ ವೀಕ್ಷಿಸಿದ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿ, ಆಶೀರ್ವದಿಸಿದರು.

ವಧು–ವರ ಸಮಾವೇಶ

ಮೈಸೂರು: ಬ್ರಾಹ್ಮಣ ಕಂಕಣ ಮಾಹಿತಿ ಸಭಾ, ದಾವಣಗೆರೆ ಜಿಲ್ಲಾ ಬ್ರಾಹ್ಮಣ ಸಂಘ, ತಾಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ವಧು–ವರರ ಸಮಾವೇಶ ಮಾ.1ರಂದು ಬೆಳಗ್ಗೆ 10ರಿಂದ ದಾವಣಗೆರೆ ನಿಜಲಿಂಗಪ್ಪ ಬಡಾವಣೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ ಆಯೋಜಿಸಿದೆ. ಮಾಹಿತಿಗೆ ಮೊ.9342734832

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.2.2026 ಸೋಮವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್, ಪಾರ್ಕಿನ್ ಸನ್ಸ್, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಿಳಿಮುಟ್ಟು, ಯಾವುದೇ ವಿಧವಾದ ತ್ವಚೆಯ ಸಮಸ್ಯೆ ಬಗ್ಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ
- **ಅಮೃತಾಂಶು ಟ್ರಸ್ಟ್, ಮಣಿಪಾಲ್ ಆಸ್ಪತ್ರೆ, ಬೃಂದಾವನ್ ಆಸ್ಪತ್ರೆ, ಜಿಲ್ಲಾ ಅಂದತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆ.ಆರ್.ಆಸ್ಪತ್ರೆ, ಮೈಸೂರು:** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: #2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10 ಗಂಟೆಯಿಂದ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮಹಾಸಂಸ್ಥಾನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಸುಬ್ಬರಾಯನಕೆರೆ:** ಗುರು ವೈಭವೋತ್ಸವ 2026, ಶ್ರೀ ಮಹಾಮೃತ್ಯುಂಜಯ ಹೋಮ (ಅಪಮೃತ್ಯು ಪರಿಹಾರ), ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರೀ ರಸ್ತೆ, ಬೆಳಗ್ಗೆ 7 ಗಂಟೆಗೆ
- **ಮೈಸೂರು ವಿಶ್ವ ವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ :** ಡಾ.ಬಂಜಗೆರೆ ಜಯಪ್ರಕಾಶ್ ಅವರ ಅನುವಾದ ಕೃತಿಗಳ ಚಿಂತನ ಮಂಥನ ಕಾರ್ಯಕ್ರಮ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ, 'ಬೇಗಂಪುರ' ಕೃತಿ ಕಟ್ಟಿ ಕೊಡುವ ಮಾನವೀಯತೆ: ಸಂಸ್ಕೃತಿ ಚಿಂತಕ ಬಿ. ಮಹೇಶ್ ಹರವೆ, 'ಹಿಂದೂಗಳ–ಮತ್ತೊಂದು ಚರಿತ್ರೆ' ಕೃತಿಯ: ಚಿಂತನೆ– ಮಾನವ ಕುಲ ಶಾಸ್ತ್ರಜ್ಞ ಡಾ.ಆರಡಿ ಮಲ್ಲಯ್ಯ.ಪಿ, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ಸಂಜೆ ಅಂಕುರಾರ್ಪಣೆ, ಹಳೇ ಸಂತೇಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಡಾ.ಡಿ.ಸಿ.ಗೀತಾ, 6.15 ಗೀತಾರಾಧನ,6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಶ್ರೇಯಾ. ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ಶಂಕರ್ ಶಾನ್ ಭೋಗ್, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು. ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಮೈಸೂರು ಆಕಾಶವಾಣಿಯ ಸುವರ್ಣ ಮಹೋತ್ಸವ ಸಮಾರಂಭದ ಧ್ವನಿಮುದ್ರಣದಿಂದ ಆಯ್ದ ಅವತರಣಿಕೆಗಳು. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ರಾಜ್‌ಕುಮಾರ್ ಭಾರತಿ–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ** 12.05 ವನಿತಾ ವಿಹಾರ: ಲೇಖಕಿ ಬರಹಗಾರ್ತಿ ಹಾಗೂ ಪ್ರಾಧ್ಯಾಪಕಿ ಡಾಕ್ಟರ್ ಪ್ರಜ್ಞಾ ಮತ್ತಿಹಳ್ಳಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಮಂಜುಳಾ ಪುರಾಣಿಕ. 12.35 ದೇವರ ನಾಮ, 12.45 ನಮ್ಮ ಆರೋಗ್ಯ ಅಜೀರ್ಣಕ್ಕೆ ಆಯುರ್ವೇದ ಪರಿಹಾರ ಕುರಿತು ಪಿರಿಯಾಪಟ್ಟಣ ತಾಲೂಕು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ವೈದ್ಯಾಧಿಕಾರಿ ಡಾ.ಮಧುಮಾಲತಿ .ಬಿ.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಧಾನ ಮಂತ್ರಿ ಎಲ್ಲರಿಗೂ ಸೂರು ಯೋಜನೆ ಕುರಿತು ಮಾತನಾಡುತ್ತಾರೆ ಪ್ರಕಾಶ್. 1.20 ಭಾವಗೀತೆಗಳು–ಕೆ.ಆರ್.ಹರ್ಷದೀಪ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ನಾಗೇಂದ್ರಪ್ಪ ಬಿ–ಕ್ಲ್ಯಾರಿಯೋನೆಟ್ ವಾದನ, 4.00 ಮಹಿಳಾರಂಗ–ಭಾವಸಂಗಮ ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ: ಅನಿತಾ ಅಶೋಕ್, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಡಾ.ಎಸ್.ಪಿ.ವಿದ್ಯಾಕುಮಾರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬೇಸಿಗೆ ಭತ್ತದ ಸಮಗ್ರ ಪೀಡೆ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ.ವಿ.ಬಿ.ಸನತ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ: ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಗಣಿತ Maths/ Computer Science, ಭಾಗವಹಿಸುತ್ತಾರೆ–ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಉಪನ್ಯಾಸಕ ಮಹದೇವ ಪ್ರಭು.ಪಿ.ಎಸ್, ಪ್ರಸ್ತುತಿ–ದಿಗ್ವಿಜಯ್.ಬಿ, 9.30–ಸವಿನೆನಪು, 10.00 ಆಕಾಶವಾಣಿ ಸಂಗೀತ ಸಮ್ಮೇಳನ–ಪ್ರಾದೇಶಿಕ ಜನಪದ ಹಾಗೂ ಲಘು ಸಂಗೀತ, 1. ಶ್ರೀಮತಿ ಅರುಣಾ ಸುಬ್ಬರಾವ್ ಅವರ ಜನಪದ ಸಂಗೀತ, 2.ಶ್ರೀ ಪತ್ರಿ ಕುಮಾರಸ್ವಾಮಿ ಅವರ ಲಘು ಶಾಸ್ತ್ರೀಯ ಹಾಡುಗಾರಿಕೆ.

- **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್:** ರಂಗಭೂಮಿ ಮತ್ತು ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರ–2026 ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಾನಪದ ವಿದ್ವಾಂಸ ಪ್ರೊ. ಡಿ.ಸಿರಾಮಚಂದ್ರಗೌಡ, ಅಧ್ಯಕ್ಷತೆ: ಕನ್ನಡ–ಸಂಸ್ಕೃತಿ ಇಲಾಖೆ ಹಿರಿಯ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಬಿ.ವಿ.ಕಾರಂತರ ರಂಗ ಚಾವಡಿ, ರಂಗಾಯಣ, ಸಂಜೆ 4 ಗಂಟೆಗೆ.

ಮೈಸೂರು ಲಿಟರರಿ ಫೆಸ್ಟ್-2026 7ನೇ ಆವೃತ್ತಿ ಉದ್ಘಾಟನೆ

ಮನರಂಜನೆಯೊಂದಿಗೆ ಆರಂಭವಾಗುವ ಸಾಹಿತ್ಯವು ಬದುಕಿಗೆ ಪ್ರೇರಣೆ, ಜೀವೋತ್ಕರ್ಷ ನೀಡಲಿದೆ

ಖ್ಯಾತ ಶಿಕ್ಷಣ ತಜ್ಞ, ಲೇಖಕ ಡಾ.ಗುರುರಾಜ ಕರಜಗಿ ಅಭಿಮತ

ಮೈಸೂರು, ಫೆ.22(ಎಂಕೆ)- ಸಾಹಿತ್ಯವು ಮನರಂಜನೆಯಿಂದ ಆರಂಭವಾಗಿ ಪ್ರೇರಣೆಯೊಂದಿಗೆ ಬದುಕಿಗೆ ಜೀವೋತ್ಕರ್ಷ ನೀಡಲಿದೆ ಎಂದು ಖ್ಯಾತ ಶಿಕ್ಷಣ ತಜ್ಞ, ಲೇಖಕ ಡಾ.ಗುರುರಾಜ ಕರಜಗಿ ಹೇಳಿದರು.

ಮೈಸೂರು ಮಹಾರಾಜ ಕಾಲೇಜಿನ ಶತ ಮಾನೋತ್ಸವ ಭವನದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್-2026 7ನೇ ಆವೃತ್ತಿ ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯಕ್ಕೆ ವ್ಯಕ್ತಿಯಿಂದ ಸಮಾಜವನ್ನು ಬದಲಾಯಿಸುವ ಶಕ್ತಿಯಿದೆ. ಹಾಸ್ಯದ ಮೂಲಕವೇ ಬದುಕಿನ ಅರ್ಥವನ್ನು ತಿಳಿಸಲಿದೆ ಎಂದರು.

ಮೈಸೂರು ಸದಾ ಸಾಂಸ್ಕೃತಿಕ ಜೀವನದ ಮೇಲೆ ನಂಬಿಕೆ ಇಟ್ಟಿರುವಂತೆ, ಸಾಹಿತ್ಯವು ಸಂಸ್ಕೃತಿಯನ್ನು ಆಧರಿಸಿದೆ. ಇಂದು ನಾವೆಲ್ಲರೂ ಸೇರಿ ಒಂದಾಗಿ ಪದಪುಂಜಗಳ ಸಂಭ್ರಮಾಚರಣೆ ನಡೆಸುತ್ತಿದ್ದೇವೆ. ಪುಸ್ತಕವು ಮನರಂಜನೆಯ ಮೂಲವಾಗಿ ಪ್ರಾರಂಭವಾಗಬಹುದು, ಆದರೆ ಅದು ಅಂತಿಮವಾಗಿ ವೈಯಕ್ತಿಕ ಪರಿವರ್ತನೆಗೆ ಕಾರಣವಾಗುತ್ತದೆ ಮತ್ತು ಓದುಗರ ಜೀವನ ಮತ್ತು ಅನುಭವವನ್ನು ಶ್ರೀಮಂತಗೊಳಿಸುತ್ತದೆ ಎಂದು ಹೇಳಿದರು.

ಸಾಹಿತ್ಯವು ಕೇವಲ ಬುದ್ಧಿಶಕ್ತಿಗೆ ಸೀಮಿತವಾಗದೆ ಹೃದಯವನ್ನು ತಲುಪಲಿದೆ.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಮೈಸೂರು ಲಿಟರರಿ ಫೆಸ್ಟ್-2026 7ನೇ ಆವೃತ್ತಿ'ಯನ್ನು ಖ್ಯಾತ ಶಿಕ್ಷಣ ತಜ್ಞ ಮತ್ತು ಲೇಖಕ ಡಾ. ಗುರುರಾಜ ಕರಜಗಿ ಉದ್ಘಾಟಿಸಿದರು. ಮೈಸೂರು ಲಿಟರರಿ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಅದು ಜೀವನ ಪಾಠಗಳನ್ನು ಕಲಿಸುತ್ತದೆ ಮತ್ತು ಜೀವನವನ್ನು ಬದಲಾಯಿಸುವ ಪ್ರೇರಣೆಯನ್ನು ನೀಡುತ್ತದೆ. ಬಾಲ್ಯದಲ್ಲಿ ಚಂದಮಾಮ, ಪಂಚತಂತ್ರ, ಸಣ್ಣ ಸಣ್ಣ ಹಾಸ್ಯ ಕಥೆಗಳ ಮೂಲಕ ಮನರಂಜನೆ ನೀಡುವ ಸಾಹಿತ್ಯವೂ ಆರ್.ಕೆ.ನಾರಾಯಣ್ ಅವರ 'ಮಾಲ್ಗುಡಿ ಡೇಸ್', ಮಹಾತ್ಮ ಗಾಂಧಿ, ನೆಲ್ಸನ್ ಮಂಡೇಲಾ ಅವರ ಆತ್ಮಕಥೆಗಳು ಹಾಗೂ ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು', ರವೀಂದ್ರನಾಥ ಟ್ಯಾಗೋರ್ ರಚಿತ 'ಗೀತಾಂಜಲಿ', ವಿ.ಸ.ಖಾಂಡೇಕರ್ ಅವರ ಮರಾಠಿ ಭಾಷೆಯ ಪ್ರಸಿದ್ಧ ಕಾದಂಬರಿ 'ಯಯಾತಿ' ಪ್ರೇರಣೆಯನ್ನು ನೀಡಲಿವೆ ಎಂದು ತಿಳಿಸಿದರು.

ಹಾಗೆಯೇ ಜೀವನದ ಉನ್ನತಿಗೆ ಮಹಾಕಾವ್ಯ ಗಳಾದ ರಾಮಾಯಣ ಮತ್ತು ಮಹಾಭಾರತ ದಲ್ಲಿರುವ ಸನ್ನಿವೇಶಗಳು ಜೀವೋತ್ಕರ್ಷ ನೀಡಲಿದೆ. ಸುಖ-ದುಃಖ, ಯಶಸ್ಸು-ಅಪಜಯ, ಲಾಭ-ನಷ್ಟ ಎಲ್ಲವನ್ನೂ ಸಮಾನವಾದ ಅನುಭವಗಳೆಂದು ಸ್ವೀಕರಿಸಿ, ಮಾನಸಿಕವಾಗಿ ಪ್ರಬುದ್ಧರಾಗಿ ಬದುಕಿನಲ್ಲಿ ಉನ್ನತ ಮಟ್ಟಕ್ಕೇರುವುದೇ ಜೀವೋತ್ಕರ್ಷವಾಗಿದೆ. ಸಾಹಿತ್ಯ ಅಧ್ಯಯನವು ಕೊನೆಗೆ ನಿರ್ಲಿಪ್ತತೆ ಭಾವ ನೀಡಲಿದೆ ಎಂದು ಸಾಹಿತ್ಯದ ಮಹತ್ವವನ್ನು ಮನದಟ್ಟು ಮಾಡಿದರು.

7 ಆವೃತ್ತಿ: ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ಸ್ವಾಗತ ಭಾಷಣ ಕೋರಿದ ಮೈಸೂರು ಲಿಟರರಿ ಅಸೋಸಿಯೇಷನ್‌ನ ಸಂಸ್ಥಾಪಕ ಅಧ್ಯಕ್ಷರಾದ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿ, 2016ರಿಂದ ಆರಂಭವಾದ ಸಾಹಿತ್ಯ ಸಂಭ್ರಮ, 2017, 2018 ಮತ್ತು 2019 ರಲ್ಲಿ ಸಾಹಿತ್ಯೋತ್ಸವಗಳನ್ನು ಆಯೋಜಿಸಿತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಳಿಕ 2023ರಿಂದ ಪುನರಾರಂಭಿಸಿ, ಪ್ರಸ್ತುತ 7ನೇ ಆವೃತ್ತಿಯ ಮೂಲಕ ಸಾಹಿತ್ಯವನ್ನು ಪಸರಿಸುವ ಕೆಲಸ ಮಾಡುತ್ತಿದ್ದೇವೆ ಎಂದರಲ್ಲದೆ ಲಿಟರರಿ ಫೆಸ್ಟ್ ಆಯೋಜನೆಗೆ ಬೆಂಬಲ ನೀಡುತ್ತಿರುವ ದಾನಿಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದರು.

ಮೈಸೂರು ಲಿಟರರಿ ಅಸೋಸಿಯೇಷನ್ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಖಜಾಂಚಿ ಚೇತನ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎ.ಕೆ.ಮೊನ್ನಪ್ಪ ಕೆ.ಸಿ.ಹರಿದಾಸ್, ಪ್ರೊ.ಅನಿತಾ ವಿಮ್ಲಾ ಬ್ರ್ಯಾಗ್ಸ್, ಪ್ರೊ.ಸಿ.ನಾಗಣ್ಣ, ಪ್ರೊ.ಶಕೀರಾ ಜಬೀನ್ ಮತ್ತು ಡಾ.ನಿಶಿತಾ ಕೃಷ್ಣಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಓದುಗರಿದ್ದಾರೆ ಎಂದು ಬರೆಯುವುದಲ್ಲ...

ಸಂವಾದದಲ್ಲಿ ಲೇಖಕಿ ಪ್ರೀತಿ ಶೆಣೈ ಅಭಿಪ್ರಾಯ



ಮೈಸೂರು ಲಿಟರರಿ ಫೆಸ್ಟ್-2026 7ನೇ ಆವೃತ್ತಿಯ ಸಂವಾದದಲ್ಲಿ ಲೇಖಕಿ ಪ್ರೀತಿ ಶೆಣೈ ಮಾತನಾಡಿದರು. ಗೀತಾ ಕರಿಯಪ್ಪ ಸಂವಾದ ನಡೆಸಿಕೊಟ್ಟರು.

ಮೈಸೂರು, ಫೆ.22(ಎಂಕೆ)- ಓದುಗರಿದ್ದಾರೆ ಎಂದು ಬರೆಯುವುದಲ್ಲ. ಸಂಶೋಧನೆ ಮೂಲಕ ನಂಬಿಕೆ ಮತ್ತು ವಿಶ್ವಾಸವನ್ನೊಳಗೊಂಡ ಕಥೆ-ಕಾದಂಬರಿಗಳನ್ನು ಓದುಗರ ಮುಂದಿಡುವುದು ಮುಖ್ಯವಾಗಿದೆ ಎಂದು ಲೇಖಕಿ ಪ್ರೀತಿ ಶೆಣೈ ಅಭಿಪ್ರಾಯ ಪಟ್ಟರು.

ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಮೈಸೂರು ಲಿಟರರಿ ಫೆಸ್ಟ್-2026 7ನೇ ಆವೃತ್ತಿಯ ಸಂವಾದದಲ್ಲಿ ತಮ್ಮ ಸಾಹಿತ್ಯ ಕುರಿತು ಮಾತನಾಡಿದ ಅವರು, ಬರವಣಿಗೆ ಓದುಗರಿಗೆ ಪ್ರೇರಣಾದಾಯವಾಗಿ ರಬೇಕು. ಈ ವಿಚಾರದಲ್ಲಿ ನನಗೆ ಪುಸ್ತಕಗಳೇ ಪ್ರೇರಣೆ ಎಂದರು.

ಇದುವರೆಗೆ ನಾನು ಬರೆದಿರುವ ಸ್ಟೋರಿ ಪುಸ್ತಕಗಳು ದೇಶ-ವಿದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಮಾರಾಟವಾಗಿವೆ. ಕಳೆದ 40 ದಿನದಲ್ಲಿ 22 ಪುಸ್ತಕಗಳನ್ನು ಓದಿರುವ ನನಗೆ ಪುಸ್ತಕಗಳೇ ಟೀಚರ್ ಆಗಿವೆ. ಬಾಲ್ಯದಿಂದಲೂ ಬರವಣಿಗೆಯಲ್ಲಿ ನನಗೆ ಆಸಕ್ತಿ. ಅದಕ್ಕೆ ನಮ್ಮ ತಂದೆಯೇ ಪ್ರೇರಣೆ ಎಂದು ಹೇಳಿದರು.

ಕೇಂದ್ರೀಯ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರಿಂದ ವರ್ಗಾವಣೆ ಆದಂತೆ ಬೇರೆ ಬೇರೆ ಸ್ಥಳ, ಅಲ್ಲಿನ ಸಂಸ್ಕೃತಿ ಮತ್ತು ಭಾಷೆಗಳ ಪರಿಚಯ ನನಗಾಯಿತು. ಇದರಿಂದ ಮಲಯಾಳಂ, ಕೊಂಕಣಿ, ತಮಿಳು ಸೇರಿದಂತೆ 6 ಭಾಷೆ ಮಾತನಾಡಲಿದ್ದೇನೆ. ನನ್ನ ಮಗಳೇ ನನ್ನ ಮೊದಲ ಓದುಗಳಾಗಿದ್ದು, ಅವಳೊಂದಿಗೆ ಚರ್ಚಿಸುತ್ತೇನೆ ಎಂದರು.

ಪರಿಸರ ಪ್ರೇಮಿಯಾಗಿರುವ ನಾನು, ಸಣ್ಣ ಸಣ್ಣ ಸನ್ನಿವೇಶಗಳನ್ನು ಉಲ್ಲೇಖಿಸಿ ಬರೆದಿದ್ದೇನೆ. ಹಾಗಾಗಿ ಜೀವನ ನಾನು ಅಂದುಕೊಂಡಂತೆ ರೂಪಿಸಿಕೊಂಡಿದ್ದೇನೆ. ಹೊಸ ಬರಹಗಾರರು ಬರವಣಿಗೆಯಲ್ಲಿ ತೊಡಗುವ ಮುನ್ನ ಸಂಶೋಧಿಸಿ. ಪುಸ್ತಕಗಳ ಅಧ್ಯಯನ ನಡೆಸಿದ ನಂತರ ಬರೆಯಿರಿ ಎಂದು ಸಲಹೆ ನೀಡಿದರು. ಗೀತಾ ಕರಿಯಪ್ಪ ಸಂವಾದ ನಡೆಸಿಕೊಟ್ಟರು.

ದೇಶದಲ್ಲೇ 3ನೇ ಅತಿದೊಡ್ಡ ಪ್ರಜಾಪ್ರಭುತ್ವ ರಾಜ್ಯವಾಗಿದ್ದ ಮೈಸೂರು

'ರೊಮ್ಯಾನ್ಸಿಂಗ್ ಡೆವಲಪ್‌ಮೆಂಟ್: ದಿ ಮೈಸೂರು ಎಪಿಸೋಡ್' ಕುರಿತು ಚರ್ಚೆ

ಮೈಸೂರು, ಫೆ.22(ವಿವಿಹೆಚ್)- 1900 ರಲ್ಲಿ 5 ಮಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದ ಮೈಸೂರು ಭಾರತದಲ್ಲಿ ಮೂರನೇ ಅತಿದೊಡ್ಡ ರಾಜಪ್ರಭುತ್ವದ ರಾಜ್ಯವಾಗಿತ್ತು. ಮಹಾರಾಜರು ರಾಜ್ಯದ ಅತ್ಯಂತ ಶಕ್ತಿಶಾಲಿ ರಾಜಕೀಯ ವ್ಯಕ್ತಿಯಾಗಿದ್ದರು ಎಂದು ವಿದ್ಯಾಶಿಲ್ಪ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್‌ನ ಡೀನ್ ಡಾ.ಚಂದನ್ ಗೌಡ ಪ್ರತಿಪಾದಿಸಿದರು.

ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟ್ರೆಸಿ ಅಸೋಸಿಯೇಷನ್ ವತಿಯಿಂದ ಭಾನುವಾರ ಆಯೋಜಿಸಿದ್ದ ಮೈಸೂರು ಲಿಟ್ರೆಸಿ ಫೆಸ್ಟ್-2026ರಲ್ಲಿ 'ರೊಮ್ಯಾನ್ಸಿಂಗ್ ಡೆವಲಪ್‌ಮೆಂಟ್: ದಿ ಮೈಸೂರು ಎಪಿಸೋಡ್' ಕುರಿತು ಅವರು ಮಾತನಾಡಿದರು.

ಸಾಮ್ರಾಜ್ಯವು, ವಿಶೇಷವಾಗಿ 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆರಂಭದಲ್ಲಿ, ದಕ್ಷಿಣ ಏಷ್ಯಾದ ಅತ್ಯಂತ ಪ್ರಗತಿಪರ, ನಗರೀಕರಣಗೊಂಡ ಮತ್ತು ಆಧುನೀಕರಿಸಲ್ಪಟ್ಟ ಪ್ರದೇಶಗಳಲ್ಲಿ ಒಂದಾಯಿತು, ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಇತರ ಪ್ರದೇಶಗಳನ್ನು ಹೇಗೆ ಮೀರಿಸಿತು ಎಂಬುದನ್ನು ವಿವರಿಸಿದರು.

ಮೈಸೂರು ರಾಜ್ಯದ ಗಣ್ಯರ ಅಭಿವೃದ್ಧಿಯ ಪರಿಕಲ್ಪನೆಯು ಫ್ರೆಡ್ರಿಕ್ ಲಿಸ್ಟ್ ಅವರ ನವ-ವಾಣಿಜ್ಯವಾದ, ಸಾಮಾಜಿಕ



'ರೊಮ್ಯಾನ್ಸಿಂಗ್ ಡೆವಲಪ್‌ಮೆಂಟ್: ದಿ ಮೈಸೂರು ಎಪಿಸೋಡ್' ಕುರಿತು ಡಾ.ಚಂದನ್ ಗೌಡ ಮಾತನಾಡಿದರು.

ವಿಕಾಸವಾದ ಮತ್ತು ಆದಿಮಾನವತಾವಾದದಂತಹ ವೈವಿಧ್ಯಮಯ ಬೌದ್ಧಿಕ ಎಳೆಗಳ ಮಿಶ್ರಣವಾಗಿತ್ತು. ಅದರಲ್ಲೂ ಪ್ರಮುಖವಾಗಿ ಕೈಗಾರಿಕಾ ಬೆಳವಣಿಗೆ, ಶಿಕ್ಷಣ ಮತ್ತು ಸಾಮಾಜಿಕ ಮೂಲ ಸೌಕರ್ಯವನ್ನು ಬೆಳೆಸಲು ಮೈಸೂರು ರಾಜಮನೆತನದ ಒಡೆಯರು, ಮಂತ್ರಿಗಳು, ದಿವಾನರು ಮತ್ತು ಯೋಜಕರ ಸೈದ್ಧಾಂತಿಕ, ಆದರ್ಶೀಕರಿಸಿದ ಪ್ರಯತ್ನಗಳು ಮತ್ತು ಸಾಮಾಜಿಕ ನಿಲುವುಗಳ ಬಗ್ಗೆ ಅಂದಿನ ಕಾಲದಲ್ಲಿ ಉಲ್ಲೇಖಿಸಲಾದ ಪ್ರತಿಗಳು, ದೇಶ, ವಿದೇಶಿಗಳ ಹೇಳಿಕೆಗಳನ್ನು ಎಲ್ಲರ ಮುಂದಿಟ್ಟರು.

ಮೈಸೂರಿನಲ್ಲಿ ಆಧುನೀಕರಣವನ್ನು ಹೇಗೆ ಕಲ್ಪಿಸಿಕೊಳ್ಳಲಾಯಿತು ಮತ್ತು ಕಾರ್ಯಗತಗೊಳಿಸಲಾಯಿತು ಎಂಬುದರ ಬಗ್ಗೆ ವಿಮರ್ಶಾತ್ಮಕ ಅಧ್ಯಯನ ಬಗ್ಗೆ ತಿಳಿಸಿದರು.

1881 ರಿಂದ 1947 ರವರೆಗಿನ ಮೈಸೂರಿನ ಪರೋಕ್ಷ ಆಳ್ವಿಕೆಯ ಅವಧಿಯಲ್ಲಿ, ಮೈಸೂರಿನ ಮಹಾರಾಜರು ಮತ್ತು ದಿವಾನರು "ಭಾರತದಾದ್ಯಂತ ರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ವೀರರಾಗಿದ್ದರು. ಅವರು ಭಾರತೀಯರು ತಮ್ಮನ್ನು ತಾವು ಎಷ್ಟು ಅದ್ಭುತವಾಗಿ ಆಳಿಕೊಳ್ಳಬಹುದು ಎಂಬುದಕ್ಕೆ ಪುರಾವೆಗಳನ್ನು ಒದಗಿಸಿದರು ಎಂದು ರಾಜಕೀಯ ವಿಜ್ಞಾನಿ ಜೇಮ್ಸ್ ಮ್ಯಾನರ್ ಉಲ್ಲೇಖಿಸಿದ್ದಾರೆ. ಗಾಂಧಿಯವರು 1894 ರಲ್ಲಿ ನಟಾಲ್ ಶಾಸಕಾಂಗ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಮೈಸೂರು ರಾಜ್ಯವು ಪ್ರಸ್ತುತ ಬ್ರಿಟಿಷ್ ಸಂಸತ್ತಿನ ನಿಖರವಾದ ಮಾದರಿಯಲ್ಲಿ ಮೈಸೂರು ಅಸೆಂಬ್ಲಿ ಎಂದು ಕರೆಯಲ್ಪಡುವ ಪ್ರತಿನಿಧಿ ಸಂಸತ್ತನ್ನು ಹೊಂದಿದೆ ಎಂದು ಹೇಳಿದ್ದರು. ಇನ್ನು 1917 ರಲ್ಲಿ, ದಿವಾನ್ ವಿಶ್ವೇಶ್ವರಯ್ಯ ನಮು ನಾವು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ತಿಳಿದುಕೊಳ್ಳಲು ಬಯಸಿದರೆ, ನಾವು ಪ್ರಗತಿಪರ ದೇಶಗಳ ಅನುಭವದೊಂದಿಗೆ ನಮ್ಮನ್ನು ಹೋಲಿಸಿ ಕೊಳ್ಳಬೇಕು ಮತ್ತು ಮಾರ್ಗದರ್ಶನ ಪಡೆಯಬೇಕು ಎಂದು ಮಹನೀಯರ ಹೇಳಿಕೆಗಳನ್ನು ಉಲ್ಲೇಖಿಸಿ ಮೈಸೂರು ಪ್ರಗತಿ ಬಗ್ಗೆ ವಿವರಿಸಿದರು.

ಕೇರಳದ ಸಾಂಪ್ರದಾಯಿಕ ಕಥಕ್ಕಳಿ ಕಲೆಯ ಪಾತ್ರಗಳು ಅರ್ಥಗರ್ಭಿತ

- ಭಾಷೆ ತಿಳಿಯದವರಿಗೂ ನಟನೆ, ಸನ್ನೆ, ಹಂಸ ಮುದ್ರೆ ಮೂಲಕ ಅರ್ಥ ಮಾಡಿಸುತ್ತದೆ
- ಕೇರಳ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಡಾ.ಬಿ.ಹರಿಹರನ್ ಅಭಿಪ್ರಾಯ

ಮೈಸೂರು, ಫೆ.22(ಬಿಎಲ್‌ಯು)- 400 ವರ್ಷಗಳ ಇತಿಹಾಸವಿರುವ ಕೇರಳದ ವಿಶ್ವವಿಖ್ಯಾತ ಶಾಸ್ತ್ರೀಯ ನೃತ್ಯ ನಾಟಕ ಕಲೆಯಾದ ಕಥಕ್ಕಳಿಯ ನಟನೆ, ಸನ್ನೆ, ಹಂಸ ಮುದ್ರೆ ಹಾಗೂ ಮುಖ ಭಾವವು ಸಾರ್ವತ್ರಿಕ ಭಾಷೆಯಾಗಿದ್ದು, ವಿಶ್ವದ ಯಾವುದೇ ದೇಶದ ಜನರು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು ಎಂದು ಕೇರಳದ ತಿರುವಂತಪುರಂನ ಕೇರಳ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ ಡಾ.ಬಿ.ಹರಿಹರನ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್‌ನ 7 ನೇ ಆವೃತ್ತಿ ಸಂವಾದ ಕಾರ್ಯಕ್ರಮದಲ್ಲಿ "ಹೊಸ ಅನುವಾದಗಳಲ್ಲಿ ಡಾನ್ ಕ್ವಿಕ್ಸೋಟ್‌ನ ಜೀವನ" ಕುರಿತು ಮಾತನಾಡಿದ ಅವರು, ಕಥಕಳಿಯ ಕಲಾವಿದರು ವರ್ಣರಂಜಿತವಾದ ವೇಷಭೂಷಣ, ಮೇಕಪ್, ನವರಸದ ಮುಖ ಭಾವ ಹಾಗೂ ಹಂಸ ಮುದ್ರೆ ಮೂಲಕವೇ ಕಥಾ ವಸ್ತುವನ್ನು ಅರ್ಥಗರ್ಭಿತವಾಗಿ ಪ್ರಚುರ ಪಡಿಸುತ್ತಾರೆ ಎಂದರು.



ಡಾ. ಬಿ.ಹರಿಹರನ್

ಕಥಕಳಿಯು ರಾಮಾಯಣ, ಮಹಾಭಾರತದ ಕಥೆಯನ್ನು ಪಾತ್ರಗಳ ಮೂಲಕ ವಿವರಿಸುತ್ತದೆ. ಯೂರೋಪಿಯನ್ ರಂಗಭೂಮಿಯಲ್ಲಿ ಪ್ರದರ್ಶನಕ್ಕೂ ಮುನ್ನ ತಾಲೀಮು ಅತ್ಯವಶ್ಯವಾಗಿರುತ್ತದೆ. ಆದರೆ ಕೇರಳದ ಸಾಂಪ್ರದಾಯಿಕ ಕಲೆ ಕಥಕಳಿಯಲ್ಲಿ ಪ್ರದರ್ಶನ ಮಾಡುವ ಮುನ್ನ ಕಲಾವಿದರಿಗೆ ತಾಲೀಮು ಅಥವಾ ಪೂರ್ವಾಭ್ಯಾಸದ ಅವಶ್ಯಕತೆಯೇ ಇರುವುದಿಲ್ಲ. ಅಷ್ಟರ ಮಟ್ಟಿಗೆ ಪಾತ್ರಗಳು ಅವರಲ್ಲಿ ಮಿಳಿತವಾಗಿರುತ್ತದೆ. ಕಥಕ್ಕಳಿ ಕಲಾವಿದರು ಯಾವುದೇ ಪಾತ್ರವನ್ನು ನಿರಾಯಾಸವಾಗಿ, ನಿರರ್ಗಳವಾಗಿ ಪ್ರದರ್ಶಿಸುವಲ್ಲಿ ಯಶಸ್ವಿಯಾಗುತ್ತಾರೆ ಎಂದು ಡಾ.ಹರಿಹರನ್ ಹೇಳಿದರು.

ಕಥಕ್ಕಳಿ ಒಂದು ಪ್ರಾಚೀನವಾದ ರಂಗಭೂಮಿ ಪ್ರಕಾರವಾಗಿದೆ. ಇದಕ್ಕೆ ತನ್ನದೇ ಆದ ಕಟ್ಟುನಿಟ್ಟಾದ ಶಿಸ್ತು ಇದೆ. ವಿಶ್ವದ ಹಲವು ರಂಗಭೂಮಿಯಲ್ಲಿ ಕಲಾವಿದ ತನ್ನ ಪಾತ್ರ ಮಾಡುವಾಗ ಗೊಂದಲಕ್ಕೀಡಾಗಬಹುದು, ಉಚ್ಚರಣೆಯಲ್ಲಿ ಎಡಗಬಹುದು. ಆದರೆ ಕಥಕ್ಕಳಿಯಲ್ಲಿ ಇಂತಹ ಯಾವುದೇ ಲೋಪಗಳು ಎದುರಾಗುವುದಿಲ್ಲ. ವೇದಿಕೆಯಲ್ಲಿ ಕಥಕ್ಕಳಿಯ ಕಲಾವಿದರು ಶಿಸ್ತು ಬದ್ಧರಾಗಿ ತಮ್ಮ ಪಾತ್ರವನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೆ. ಇದರಿಂದಲೇ ಕಥಕ್ಕಳಿ ಕಲೆ ಭಾಷೆ ಅರಿಯದರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ ಎಂದು ಹೇಳಿದರು.

ಕೇರಳಕ್ಕೆ ಯೂರೋಪಿಯನ್ ರಂಗಭೂಮಿ ಪ್ರವೇಶಿಸಿತು. ಆ ವೇಳೆ ಅಲ್ಲಿನ ಭಾಷೆಯ ಅನುವಾದ ಇಲ್ಲಿ ತೆರೆದಿಟ್ಟುಕೊಂಡಿತು. ಸಾಹಿತ್ಯ ಹಾಗೂ ಪಠ್ಯಗಳ ಅನುವಾದಗಳು ಮೂಲ ಪಠ್ಯದೊಂದಿಗೆ ಪದಕ್ಕೆ ಪದ, ಸಾಲಿಗೆ ಸಾಲು ಹೊಂದಿಕೆಯಾಗುವಂತೆ ಅನುವಾದಗೊಂಡಿತು ಎಂದರು.

ವಿಶ್ವದಲ್ಲಿನ ಎಲ್ಲಾ ಕಥೆ, ಕಾದಂಬರಿಗಳು ಪರಿಚಿತ ಹಾಗೂ ಪರಿಚಯವಿಲ್ಲದ ಎರಡು ವಿಭಿನ್ನ ಪಾತ್ರಗಳನ್ನು ವಿವರಿಸುತ್ತದೆ. ಆದರೆ ಕೇರಳದ ಕಥಕ್ಕಳಿ ಕಲೆಯ ಭಾಷೆ ತಿಳಿಯದಿದ್ದವರಿಗೂ ಪಾತ್ರಗಳನ್ನು ಅರ್ಥಗರ್ಭಿತವಾಗಿ ಪರಿಚಯಿಸುತ್ತದೆ, ತಿಳಿಸಿ ಹೇಳುತ್ತದೆ. ಈ ಮೂಲಕ ಇದು ವಿಶ್ವದ ಶ್ರೀಮಂತ ಕಲೆ ಎನ್ನಬಹುದು ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಕಾದಂಬರಿಯ ಚಿಹಾನೋ ಹಾಗೂ ಕ್ವಿಕ್ಸೋಟ್ ಪಾತ್ರಗಳನ್ನು ವಿವರಿಸುತ್ತಾ ಇಡೀ ಕಾದಂಬರಿಯ ಸೂಚ್ಯವಾಗಿ ವಿವರಿಸಿದರು. ಕಾದಂಬರಿ ಹಾಗೂ ಕಾದಂಬರಿಯ ಪಾತ್ರಗಳನ್ನು ಸವಿವಿವರವಾಗಿ ವಿವರಿಸಿದ ಡಾ.ಹರಿಹರನ್ ಅವರು, ವಿಡಂಬನೆ, ಹಾಸ್ಯ, ವ್ಯಂಗ್ಯ ಸೇರಿದಂತೆ ಬಹಳಷ್ಟು ಅಂಶಗಳನ್ನು ಇದು ವಿವರಿಸುತ್ತದೆ ಎಂದು ಡಾ.ಹರಿಹರನ್ ಹೇಳಿದರು.

ಭಾರತದಲ್ಲಿ ಸಿನಿಮಾ, ಸಾಕ್ಷ್ಯಚಿತ್ರಗಳು ಫ್ಯಾಂಟಸಿಯೊಂದಿಗೆ ಪ್ರಾರಂಭವಾಗಿಲ್ಲ

ಬರಹಗಾರ ಎಂ.ಕೆ.ರಾಘವೇಂದ್ರ ಅಭಿಪ್ರಾಯ


ಮೈಸೂರು, ಫೆ.22(ವಿವಿಹೆಚ್)- ಭಾರತದಲ್ಲಿ ಸಿನಿಮಾ, ಸಾಕ್ಷ್ಯಚಿತ್ರ ಫ್ಯಾಂಟಸಿಯೊಂದಿಗೆ ಪ್ರಾರಂಭವಾಗಲಿಲ್ಲ. ಅದು ಪೌರಾಣಿಕ ಚಿತ್ರದೊಂದಿಗೆ ಪ್ರಾರಂಭವಾಗಿದೆ ಎಂದು ಬರಹಗಾರ ಎಂ.ಕೆ.ರಾಘವೇಂದ್ರ ಅಭಿಪ್ರಾಯಪಟ್ಟರು.

ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟ್ರೆಸಿ ಅಸೋಸಿಯೇಷನ್ ವತಿಯಿಂದ ಭಾನುವಾರ ಆಯೋಜಿಸಿದ್ದ ಮೈಸೂರು ಲಿಟರಲಿ ಫೆಸ್ಟ್-2026ರಲ್ಲಿ ಭಾರತೀಯ ಸಿನಿಮಾ ಮತ್ತು ಮಿಮೆಟಿಕ್ ಅರ್ಜ್‌ನಲ್ಲಿ ನಿರೂಪಣೆ ಕುರಿತು ಅವರು ಮಾತನಾಡಿದರು.

ಮೊದಲೆಲ್ಲಾ ಗುಹೆ ವರ್ಣಚಿತ್ರಗಳು ವಿಶಾಲವಾಗಿ ಪ್ರಪಂಚದ ನೈಜ ವಸ್ತುಗಳ ಹೋಲಿಕೆಯನ್ನು ಉತ್ಪಾದಿಸುವ ಕಲೆಯ ಪ್ರವೃತ್ತಿಗಳಾಗಿತ್ತು ಬದಲಾದ ಕಾಲಘಟ್ಟದಲ್ಲಿ ಛಾಯಾಗ್ರಹಣ ಮತ್ತು ಸಿನಿಮಾದ ಆಗಮನವಾಗಿ, ನೈಜತೆಯನ್ನು ಅನುಕರಿಸುವ ಯಾಂತ್ರಿಕ ಸಾಧನಗಳು ಪರಿಚಯಗೊಂಡವು ಎಂದರು.

ಸಿನಿಮಾ ಸಾಕ್ಷ್ಯಚಿತ್ರದೊಂದಿಗೆ ಪ್ರಾರಂಭವಾಯಿತು. ಜಾದೂಗಾರ ಜಾರ್ಜ್ ಮೆಲಿಸ್ ಒಬ್ಬ ವೀಕ್ಷಕರಾಗಿದ್ದು, ಅವರು ಸಿನಿಮಾದ ಭ್ರಮೆಯ ಸಾಮರ್ಥ್ಯವನ್ನು ನೋಡಿದ್ದರು. ಭ್ರಮೆ ಎಂದರೆ ಕೇವಲ ಅವಾಸ್ತವವಲ್ಲ; ಅದು ಕಲ್ಪಿಸಿಕೊಂಡದ್ದು. ಆದ್ದರಿಂದ ಸಿನಿಮಾದಲ್ಲಿನ ಭ್ರಮೆಯ ಅಂಶವು ಅಭಿವ್ಯಕ್ತಿಯಾಯಿತು ಎಂದು ತಿಳಿಸಿದರು.

ರಾಜಾ ಹರಿಶ್ಚಂದ್ರ ಚಿತ್ರವನ್ನು ಡಿ.ಜಿ. ಫಾಲ್ಕೆ



ಮೈಸೂರು ಲಿಟರಲಿ ಫೆಸ್ಟ್-2026ರಲ್ಲಿ ಬರಹಗಾರ ಎಂ.ಕೆ.ರಾಘವೇಂದ್ರ ಮಾತನಾಡುತ್ತಿರುವುದು.

ನಿರ್ಮಿಸಿದ್ದರು. ಜನರು ಅದನ್ನೇ ಸತ್ಯವೆಂದು ತಿಳಿದು, ಆ ಚಿತ್ರವು ನಿಜ ಎಂದು ನಂಬಲಾರಂಭಿಸಿದರು. 'ಸತ್ಯ' ಎಂಬುದು ಆಂತರಿಕ (ಮಾನಸಿಕ) ಅಥವಾ ಬಾಹ್ಯ (ವಾಸ್ತವಿಕ) ವಾಗಿರಲಿಲ್ಲ, ಬದಲಾಗಿ ಅರ್ಥಕ್ಕೆ ಸಂಬಂಧಿಸಿದೆ. ಹರಿಶ್ಚಂದ್ರನ ಕಥೆಯು ಪವಿತ್ರ ಅರ್ಥವನ್ನು ಒಳಗೊಂಡಿರುವುದರಿಂದ ಅದು ಸತ್ಯವಾಗಿತ್ತು. ಪ್ರತಿಯೊಂದು ನಿರೂಪಣೆಯ ಸತ್ಯಗಳು ಜೀವನಕ್ಕೆ ಸಂಬಂಧಿಸಿದ ಸಾರ್ವತ್ರಿಕ (ಸತ್ಯಗಳು) ಆಗಿದ್ದು ಅವು ಸಂದರ್ಭೋಚಿತವಾಗಿರುವುದಿಲ್ಲ ಎಂದು ಪ್ರತಿಪಾದಿಸಿದರು.

ಭಾರತೀಯ ಜನಪ್ರಿಯ ಸಿನಿಮಾ, ಜೀವನಕ್ಕೆ ಸಂಬಂಧಿಸಿದ ಸತ್ಯಗಳನ್ನು ಪ್ರಸಾರ ಮಾಡುವುದರಿಂದ, ಕಲೆಯ ಅನಿಶ್ಚಿತ ಉದ್ದೇಶ ಮತ್ತು ಅನುಕರಣೆಯಿಂದಾಗಿ, ಆಡಂಭರವಿಲ್ಲದ ಮತ್ತು ಸಂಕೀರ್ಣವಾದದ್ದನ್ನು ಅರ್ಥೈಸಲಾಗಿದೆ ಎಂದು ವಿವರಿಸಿದರು.

ಮೈಸೂರಲ್ಲಿ ಕಿರು, ಸಾಕ್ಷ್ಯಚಿತ್ರಗಳ ಉತ್ಸವ 'ಪರಿದೃಶ್ಯ' ಸಮಾರೋಪ

ಅನ್ಯ ದೇಶಿಯರು ಬರೆದ ಇತಿಹಾಸವನ್ನೇ ಈಗಲೂ ಅಧ್ಯಯನ

ಮೈಸೂರು,ಫೆ.22(ಎಸ್‌ಪಿಎನ್)- ಕರ್ನಾಟಕದ ಇತಿಹಾಸ ಅತ್ಯಂತ ಶ್ರೇಷ್ಠವಾಗಿದೆ. ಆದರೆ, ಬ್ರಿಟಿಷರು, ಅನ್ಯ ದೇಶಿಯರು ಬರೆದ ಇತಿಹಾಸವನ್ನೇ ಇಂದಿಗೂ ನಿಜವೆಂದು ಅಧ್ಯಯನ ಮಾಡುತ್ತಿದ್ದೇವೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜ ಕ್ರೀಡಾಂಗಣದಲ್ಲಿ ಮೈಸೂರು ಫಿಲಂ ಸೊಸೈಟಿ ವತಿಯಿಂದ ನಡೆದ 4ನೇ ವರ್ಷದ ಅಂತಾರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳ ಉತ್ಸವ 'ಪರಿದೃಶ್ಯ' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು, ಮಾತನಾಡಿದರು.

ನಮ್ಮ ಇತಿಹಾಸವನ್ನು ನಾವು ಸಂಪೂರ್ಣವಾಗಿ ರಚಿಸಲು ಸಾಧ್ಯವಾಗಿಲ್ಲ. ವಿಜಯನಗರ ಸಾಮ್ರಾಜ್ಯ ಕುರಿತು ಅನ್ಯರು ಬರೆದ ಇತಿಹಾಸವನ್ನು ಓದುತ್ತಿದ್ದೇವೆ. ಆ ಸಾಮ್ರಾಜ್ಯದ ಕುರಿತು ಕನ್ನಡದಲ್ಲಿ ಯಾವುದೇ ಬರಹಗಳು ದೊರೆತಿಲ್ಲ. ಭಾರತೀಯರ ಇತಿಹಾಸವನ್ನು ನಾವೇ ರಚಿಸಿಕೊಳ್ಳಬೇಕಿದ್ದು, ಅದು ಚಲನಚಿತ್ರಗಳ ಮೂಲಕವಾದರೂ ಸಾಕಾರವಾಗಲಿ ಎಂದು ಅವರು, ಆಶಯ ವ್ಯಕ್ತಪಡಿಸಿದರು.

ನಾನಾ ಕಾರಣಗಳಿಗಾಗಿ ಸಿನಿಮಾ ಕ್ಷೇತ್ರ ಸಂಕಷ್ಟದಲ್ಲಿದೆ. ಈ ಸಮಯದಲ್ಲೂ ಸಾಮಾಜಿಕ ಜಾಲತಾಣಗಳ ರೀಲ್ಸ್ ಕಂಟೆಂಟ್‌ಗಳ ಕಡೆ ಜನರು ಒಲವು ತೋರುತ್ತಿದ್ದಾರೆ. ಆದ್ಯಾಗೂ ಇಂತಹ ಉತ್ಸವಗಳನ್ನು ಮೈಸೂರಿನಲ್ಲಿ ಆಯೋಜಿಸಿರುವುದು ಪ್ರಶಂಸನೀಯ. ಭಾರತೀಯ ಚಿತ್ರರಂಗವನ್ನು ಸ್ವದೇಶಿ ದೃಷ್ಟಿಕೋನದಿಂದ ನೋಡಬೇಕು. ಅದೇ ದೃಷ್ಟಿಕೋನದಲ್ಲಿ ಅಭಿವ್ಯಕ್ತಿಯಾಗಿ ಹೊರಹೊಮ್ಮಬೇಕು. ಈ ನಿಟ್ಟಿನಲ್ಲಿ ಚಿತ್ರರಂಗ ಸಾಗಬೇಕಿದೆ ಎಂದು ಸಲಹೆ ನೀಡಿದರು.



4ನೇ ವರ್ಷದ ಅಂತಾರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳ ಉತ್ಸವ 'ಪರಿದೃಶ್ಯ' ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಸಂಸದರಾದ ಡಾ.ಸಿ.ಎನ್.ಮಂಜುನಾಥ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ನಾಲ್ವಡಿ ಕುರಿತು ಸಿನಿಮಾವಾಗಬೇಕು: ಸಂಸದ ಡಾ.ಸಿ.ಎನ್.ಮಂಜುನಾಥ್ ಮಾತನಾಡಿ, ಮೈಸೂರಿನಲ್ಲೇ ಕನ್ನಡ ಚಿತ್ರರಂಗ ಹುಟ್ಟಿದ್ದು, ಈ ಮಣ್ಣಿನಲ್ಲಿ ಕಲೆಯನ್ನು ಪ್ರೋತ್ಸಾಹಿಸುವ ಗುಣವಿದೆ. ಕನ್ನಡದಲ್ಲಿ ಇದುವರೆಗೂ ಹಲವಾರು ಚಲನಚಿತ್ರಗಳು ಬಂದಿವೆ. ಆದರೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಾದ ಚಲನಚಿತ್ರ ನಿರ್ಮಾಣ ವಾಗಬೇಕು. ಇದು ನಿಜವಾಗಿಯೂ ಮೈಸೂರಿಗೆ ನಾವು ನೀಡುವಂತಹ ಧನ್ಯತಾ ಭಾವ. ಭಾರತದಲ್ಲಿ ರಾಜ ಮನೆತನಗಳನ್ನು ಸಿನಿಮಾದ ಮೂಲಕ ಸ್ಮರಿಸುವ, ಗೌರವಿಸುವ ಕೆಲಸವಾಗಬೇಕು ಎಂದು ಅಭಿಪ್ರಾಯಪಟ್ಟರು.

ಜನರಿಗೆ ಮನರಂಜನೆ ಅವಶ್ಯವಿದೆ. ಚಲನಚಿತ್ರ, ಕಿರುಚಿತ್ರ, ಸಾಕ್ಷ್ಯಚಿತ್ರಗಳು ವೀಕ್ಷಣೆಯಿಂದ ಸಮಾಜ ಪರಿವರ್ತನೆಯಾಗಬೇಕು. ಶುದ್ಧೀಕರಣವಾಗಬೇಕು. ಇತ್ತೀಚಿನ ದಿನಗಳಲ್ಲಿ ಹಳೆಯ ಚಿತ್ರಮಂದಿರಗಳನ್ನು ಕೆಡವುತ್ತಿದ್ದಾರೆ. ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತುತ್ತಿವೆ. ಹಳೆಯ ಚಿತ್ರಗಳಲ್ಲಿ ಸಾಹಿತ್ಯ, ಸಂಗೀತ ಸ್ಪಷ್ಟವಾಗಿ ಕೇಳುತ್ತಿತ್ತು. ಇಂದು ಕೇವಲ ಶಬ್ದಗಳೇ, ಅರ್ಭಟಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಳೆಯ ಸಿನಿಮಾಗಳು ಜನರಿಗೆ ಒಂದೊಂದು ಸಂದೇಶ ನೀಡಿವೆ. ರಾಮಾಯಣ, ಮಹಾಭಾರತ ಎಲ್ಲರೂ ಓದಿಲ್ಲ. ಆದರೆ, ಅದನ್ನು ಚಲನಚಿತ್ರದ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸಿನಿಮಾ ಶಕ್ತಿಯುತ ಮಾಧ್ಯಮವಾಗಿರುವುದರಿಂದ ಸಮಾಜ ಬೆಸೆಯುವ ಕೆಲಸವಾಗಬೇಕು. ತಂತ್ರಜ್ಞಾನ ಯುಗದಲ್ಲಿ ಜನರ ಬದುಕು ಒತ್ತಡದಿಂದ ಕೂಡಿದೆ. ಹಿಂದೆ ಗಂಟೆಗಟ್ಟಲೇ ಮನೆಮಂದಿ ಕೂತು ಸಿನಿಮಾ ನೋಡುವ ತಾಳ್ಮೆಯಿತ್ತು. ಇಂದು ಜನರಲ್ಲಿ ಆ ತಾಳ್ಮೆ ಇದೆಯೇ? ಎಂದು ಪ್ರಶ್ನಿಸಿದ ಅವರು, ಸಿನಿಮಾ ವಿಸ್ತೀರ್ಣ ಸಂಕುಚಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಿರುಚಿತ್ರಗಳು, ರೀಲ್ಸ್‌ಗಳಿಗೆ ಜನರಿಗೆ ಬೇಡಿಕೆ ಹೆಚ್ಚಾಗುತ್ತಿರಬಹುದು ಎಂದು ಅಭಿಪ್ರಾಯಪಟ್ಟರು.

> ಮೈಸೂರಿನಿಂದಲೇ ನನ್ನ ಸಿನಿಮಾ ಬದುಕು ಆರಂಭವಾಗಿದ್ದು, ಚಿತ್ರರಂಗದಲ್ಲಿ ಗುರುತಿಸಿಕೊಳ್ಳಲು ಇವತ್ತು ಕಿರುಚಿತ್ರಗಳು ಮುಖ್ಯ ವೇದಿಕೆಯಾಗಿದೆ. ಪ್ರಸ್ತುತ ಚಿತ್ರರಂಗ ಅತ್ಯಾಧುನಿಕವಾಗಿ ಅಭಿವೃದ್ಧಿಯಾಗುತ್ತಿದ್ದು, ತಂತ್ರಜ್ಞಾನದ ಜತೆ ಸಾಗುತ್ತಿದೆ. ಕೃತಕ ಬುದ್ಧಿಮತ್ತೆ(ಎಐ) ಮೂಲಕ ಕುಳಿತಲ್ಲೇ ಸಿನಿಮಾ ಕಟ್ಟುವ ಅವಕಾಶವಿದೆ.
>
> -ಡಾಲಿ ಧನಂಜಯ್, ನಾಯಕ ನಟ,

ಈ ಉತ್ಸವದಲ್ಲಿ 120ಕ್ಕೂ ಹೆಚ್ಚಿನ ರಾಷ್ಟ್ರಗಳಿಂದ 3 ಸಾವಿರಕ್ಕೂ ಅಧಿಕ ಕಿರುಚಿತ್ರ ಚಲನಚಿತ್ರ, ಸಾಕ್ಷ್ಯಚಿತ್ರಗಳು ಪ್ರದರ್ಶನಗೊಂಡಿವೆ. ಈ ವೇಳೆ 30ಕ್ಕೂ ಉತ್ತಮ ಚಲನಚಿತ್ರ, ಕಿರುಚಿತ್ರ, ಸಾಕ್ಷ್ಯಚಿತ್ರಗಳಿಗೆ ಪ್ರಶಸ್ತಿ ಘೋಷಿಸಲಾಯಿತು.

ವೇದಿಕೆಯಲ್ಲಿ ಕನ್ನಡ ಚಲನಚಿತ್ರ ಮಂಡಳಿಯ ಉಪಾಧ್ಯಕ್ಷ ಹಾಗೂ ಹಿರಿಯ ನಟ ಸುಂದರ್‌ರಾಜ್, ಹಿರಿಯ ನಿರ್ದೇಶಕ ಡಾ.ರಾಜೇಂದ್ರ ಸಿಂಗ್ ಬಾಬು, ಹಿರಿಯ ನಟಿ ಗಿರಿಜಾ ಲೋಕೇಶ್, ನಟಿಯರಾದ ಲಾಸ್ಯಶೆಟ್ಟಿ, ರೋಶಿಣಿ ಪ್ರಕಾಶ್, ಮೈಸೂರು ಫಿಲಂ ಸೊಸೈಟಿ ಅಧ್ಯಕ್ಷ ಡಾ.ಚಂದ್ರಶೇಖರ್, ಗೌರವಾಧ್ಯಕ್ಷ ಎಂ.ಚೇತನ್, ಕಾರ್ಯದರ್ಶಿ ಪದ್ಮಾವತಿ ಎಸ್.ಭಟ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಸೋಮು : ಅದ್ಯಾಕೋ ಗುಂಡ ಆಪರೇಷನ್ ಥಿಯೇಟರ್‌ನಿಂದ ಹೀಗೆ ಓಡಿ ಬರ್ತಿದಿಯಾ?

ಗುಂಡ : 'ಹೆದರ ಬೇಡಿ ಇದೊಂದು ಸಣ್ಣ ಆಪರೇಷನ್ ಅಷ್ಟೆ. ಏನೂ ಆಗೋಲ್ಲ' ಅಂತ ನರ್ಸ್ ಹೇಳ್ತಾ ಇದ್ಲು

ಸೋಮು : ಅದರಲ್ಲಿ ಭಯಪಡೋಕೆ ಏನಿದೆ?

ಗುಂಡ : ಅವಳು ಹೇಳ್ತಾ ಇದ್ದಿದ್ದು ಡಾಕ್ಟ್ರಗೆ!

ಮೈಸೂರು ಮಿತ್ರ

ಸೋಮವಾರ, ಫೆಬ್ರವರಿ 23, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಮ್ಮ ಬದುಕು ಬದಲಾಗಬೇಕಾದರೆ, ಮೊದಲು ನಮ್ಮ ಆದ್ಯತೆಗಳು ಬದಲಾಗಬೇಕು. –ಮಾರ್ಕ್ ಟ್ವೇನ್

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಮಾಡಿದ್ದುಣ್ಣೋ ಮಾರಾಯ

ನಿಮ್ಮ ಪತ್ರಗಳು

ಬಜೆಟ್ ಮುನ್ನ ಕ್ಷೇತ್ರ ತೊರೆದು ವಿದೇಶ ಯಾತ್ರೆ!

ಮಾನ್ಯರೆ,

ಮುಂದಿನ ಮಾರ್ಚ್ ತಿಂಗಳಲ್ಲಿ ರಾಜ್ಯ ಸರ್ಕಾರ ಬಜೆಟ್ ಮಂಡಿಸಲಿದ್ದು, ಪ್ರತಿಯೊಬ್ಬ ಶಾಸಕರೂ ತಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಪಡೆಯಲು ಹೋರಾಡಬೇಕಾದ ಪ್ರಮುಖ ಅವಧಿ. ಆದರೆ ಇಂತಹ ಅತ್ಯಂತ ಮಹತ್ವದ ಸಮಯದಲ್ಲಿ ಆಡಳಿತರೂಢ ಪಕ್ಷದ ಶಾಸಕರು ಗುಂಪಾಗಿ ವಿದೇಶ ಪ್ರಯಾಣ ಮಾಡಿರುವುದು ಬಹಳ ವಿಷಾದನೀಯ ಮತ್ತು ಅಸಮಂಜಸ ಕ್ರಮವಾಗಿದೆ. ಇದು ಅವರು ಕ್ಷೇತ್ರದ ಜನತೆಗೆ ಮಾಡಿದ ಅನ್ಯಾಯವಾಗುತ್ತದೆ.

ಬೇರೆ ದೇಶಗಳ ಅಭಿವೃದ್ಧಿ ಮಾದರಿ, ತಂತ್ರಜ್ಞಾನ ಹಾಗೂ ಆಡಳಿತ ವ್ಯವಸ್ಥೆಗಳ ಅಧ್ಯಯನಕ್ಕಾಗಿ ಶಾಸಕರು ವಿದೇಶ ಪ್ರವಾಸ ಕೈಗೊಂಡಿದ್ದರೆ ಅದಕ್ಕೆ ಯಾವುದೇ ವಿರೋಧವಿರುವುದಿಲ್ಲ. ಆದರೆ ಯಾವುದೇ ಸ್ಪಷ್ಟ ಉದ್ದೇಶವಿಲ್ಲದೆ, ಗುಂಪು ಗುಂಪಾಗಿ ವಿದೇಶ ಪ್ರಯಾಣ ಮಾಡಿರುವುದು ಜನಪ್ರತಿನಿಧಿಗಳ ಕರ್ತವ್ಯಕ್ಕೆ ವಿರುದ್ಧವಾಗಿದೆ

ಈ ವಿದೇಶ ಪ್ರವಾಸದ ಕುರಿತು ಪಕ್ಷದ ವಿವಿಧ ಶಾಸಕರು, ಪಕ್ಷದ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳು ಪರಸ್ಪರ ವಿಭಿನ್ನ ಹೇಳಿಕೆಗಳನ್ನು ನೀಡುತ್ತಿರುವುದು ಜನಸಾಮಾನ್ಯರಲ್ಲಿ ಗೊಂದಲ ಸೃಷ್ಟಿಸುತ್ತಿದೆ. ರಾಜ್ಯದ ಆಡಳಿತ ಇಲಾಖೆ 15 ದಿನಗಳ ಕಾಲ ಗುಂಪು ವಿದೇಶ ಪ್ರವಾಸಕ್ಕೆ ಅನುಮತಿ ನೀಡಿರುವುದು ಆಶ್ಚರ್ಯಕರ ಹಾಗೂ ಪ್ರಶ್ನಾರ್ಹವಾಗಿದೆ. ಸಾರ್ವಜನಿಕ ಹಣದಿಂದ ಸಂಬಳ ಹಾಗೂ ಭತ್ಯೆಗಳನ್ನು ಪಡೆಯುತ್ತಿರುವ ಜನಪ್ರತಿನಿಧಿಗಳು, ತಮ್ಮ ಕರ್ತವ್ಯ ನಿರ್ವಹಿಸಬೇಕಾದ ಸಮಯದಲ್ಲಿ ದೇಶ ಬಿಟ್ಟು ತೆರಳುವುದು ಸರಿಯೇ ಎಂಬ ಪ್ರಶ್ನೆಗೆ ಸರ್ಕಾರ ಸ್ಪಷ್ಟ ಉತ್ತರ ನೀಡಬೇಕು.

–ವಿನೋದ್ ಶಂಕರ್, ಅವಿಯಾನ ಫೌಂಡೇಶನ್, ಕುವೆಂಪುನಗರ ಮೈಸೂರು.

ಎಸ್‌ಐಆರ್: ರಾಜ್ಯಗಳಿಗೆ ಸುಪ್ರೀಂಕೋರ್ಟ್ ಎಚ್ಚರಿಕೆ



ಮಾನ್ಯರೆ,

ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ '(ಎಸ್‌ಐಆರ್) ಕಾರ್ಯ ಅತ್ಯಗತ್ಯವಾದುದೇ ಆಗಿದೆ. ಹಾಗಾಗಿ ಆ ಕಾರ್ಯಕ್ಕೆ ರಾಜ್ಯ ಸರಕಾರಗಳು ಯಾವ್ರುದೇ ರೀತಿಯಲ್ಲಿಯೂ ಅಡ್ಡಿಪಡಿಸಬಾರದು ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿರುವುದು ತುಂಬಾ ಶ್ಲಾಘನೀಯ.

ಮತದಾರರು ಅಧಿಕೃತ ವಿಳಾಸದಲ್ಲಿ ಇಲ್ಲದೇ ಇರುವ ಬಗ್ಗೆ ಚುನಾವಣಾ ಆಯೋಗ ಕಳುಹಿಸಿದ್ದ ನೋಟೀಸ್‌ಗಳಿಗೆ ಉತ್ತರಿಸದೇ ಕೆಲವರು ಅದನ್ನು ಸುಟ್ಟು ಹಾಕಿದ್ದಾರೆ. ಅಂತಹ ಕಿಡಿಗೇಡಿಗಳ ವಿರುದ್ಧ ಈವರೆಗೂ ಎಫ್‌ಐಆರ್ ದಾಖಲಾಗಿಸಿಲ್ಲ ಎಂದು ಆರೋಪಿಸಿ, ಚುನಾವಣಾ ಆಯೋಗ ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರವನ್ನು ಗಮನಿಸಿರುವುದಾಗಿ ಹೇಳಿದ ಪೀಠ, ಈ ಬಗ್ಗೆ ಆದಷ್ಟು ಬೇಗ ಪ್ರಮಾಣ ಪತ್ರ ಸಲ್ಲಿಸುವಂತೆ ಪಶ್ಚಿಮಬಂಗಾಳ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿರುವುದು ಸ್ವಾಗತಾರ್ಹ. ದೇಶದ ಎಲ್ಲಾ ರಾಜ್ಯಗಳಿಗೂ ಭಾರತದ ಸಂವಿಧಾನ ಒಂದೇ ರೀತಿ ಅನ್ವಯವಾಗುತ್ತದೆ ಎಂಬ ಸಂದೇಶ ತಲುಪಬೇಕು ಎಂದು ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅರಿಕೆ ಮಾಡಿರುವುದು ಒಳ್ಳೆಯ ಬೆಳವಣಿಗೆ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಕನ್ನಡ ಫಲಕಗಳಿದ್ದರೂ, ಕೆಲಸ ಮಾಡುವವರು ಮಾತ್ರ ಕನ್ನಡಿಗರಲ್ಲ

ಮಾನ್ಯರೆ,

ಮೈಸೂರಿನ ಜಯಲಕ್ಷ್ಮಿಪುರಂನಿಂದ ಹಾದು ಹೋಗುವ ಗೋಕುಲಂನ ಮುಖ್ಯ ರಸ್ತೆಯಲ್ಲಿ ಕೆಲ ರೆಸ್ಟೋರೆಂಟ್‌ಗಳು, ಕೆಫೆ, ಪಿಜ್ಜಾ ಹಾಗೂ ಬರ್ಗರ್ ಸೆಂಟರ್‌ಗಳು ಇವೆ. ಇವುಗಳಿಗೆ ಕನ್ನಡ ಫಲಕಗಳು ಹಾಕಿರುವುದು ಶ್ಲಾಘನೀಯ ವಿಷಯ. ಆದರೆ ಇಲ್ಲಿ ಕೆಲಸ ಮಾಡುವವರು ಮಾತ್ರ ಕನ್ನಡಿಗರಲ್ಲ ಎಂಬುದು ವಿಪರ್ಯಾಸದ ಸಂಗತಿ. ಅಂತರರಾಜ್ಯ ಹಾಗೂ ವಿದೇಶಿಗರಿಗೆ ಇಲ್ಲಿ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಇಲ್ಲಿಗೆ ಬರುವ ಗ್ರಾಹಕರಿಗೆ ಅನ್ಯ ಭಾಷಿಗರೊಂದಿಗೆ ಏನು ಮಾತಾಡಬೇಕು, ಏನನ್ನು ಕೇಳಿ ಪಡೆದುಕೊಳ್ಳಬೇಕು ಎಂಬ ಗೊಂದಲಕ್ಕೆ ಒಳಗಾಗಿದ್ದಾರೆ. ಜೊತೆಗೆ ತಮಗಿಷ್ಟ ಬಂದಂತಹ ತಿಂಡಿ ತಿನಿಸುಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಇಂತಹ ಅಂಗಡಿ ಮುಂಗಟ್ಟುಗಳಲ್ಲಿ ಗ್ರಾಹಕರು ಹರಸಾಹಸ ಪಡುವಂತಾಗಿದೆ. ಅಂತರರಾಜ್ಯ ಹಾಗೂ ವಿದೇಶಿಗರು ಸಕ್ರಿಯವಾಗಿ ಕೆಲಸ ಮಾಡುತ್ತಾರೆ ಎಂದು ತೆಗೆದುಕೊಂಡಿರುವುದು ತಪ್ಪಲ್ಲ. ಆದರೆ ಇದರ ಜೊತೆಗೆ ಗ್ರಾಹಕರಿಗೆ ಅನುಕೂಲವಾಗುವಂತೆ ಕನ್ನಡಿಗರಿಗೂ ಹೆಚ್ಚು ಅವಕಾಶ ಕೊಡಬೇಕೆಂಬುದು ಮಾತ್ರ ಮನವಿ. ಈ ಮೂಲಕ ಸಾಮಾಜಿಕ ಕಾಳಜಿಯನ್ನು ವಹಿಸಿದಂತಾಗುತ್ತದೆ.

–ಸಾಯಿ ಸಂದೇಶ್ ಬಿ.ಎಸ್, ಮೈಸೂರು.

ಬಜೆಟ್: ಜನರಿಗೆ ಹೊರೆ ಬೇಡ

ಮಾನ್ಯರೆ,

ಬರುವ ಮಾರ್ಚ್ 6ರಂದು ತಮ್ಮ ದಾಖಲೆ ಬಜೆಟ್ ಮಂಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತಯಾರಿ ನಡೆಸುತ್ತಿದ್ದಾರೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಬಜೆಟ್ ಕೂಡ ಯಾವ ರಿಯಾಯಿತಿಯನ್ನು ನೀಡದಿದ್ದರೂ ಕೆಲ ವಸ್ತುಗಳನ್ನು ಹೊರತುಪಡಿಸಿ ತೆರಿಗೆ ಏರಿಕೆ ಮಾಡಿಲ್ಲ.

ಇದೀಗ ರಾಜ್ಯ ಬಜೆಟ್ ಮೇಲೆ ಜನರ ನಿರೀಕ್ಷೆ ಇದೆ. ಕೇಂದ್ರ ಸರ್ಕಾರ ತೆರಿಗೆ ಏರಿಕೆ ಮಾಡಿಲ್ಲ ಎನ್ನುವುದನ್ನು ನೆಪ ಮಾಡಿಕೊಂಡು ರಾಜ್ಯ ಸರ್ಕಾರ ಎಲ್ಲಿ ತೆರಿಗೆ ಏರಿಕೆ ಮಾಡಿಬಿಡುತ್ತದೋ ಎನ್ನುವ ಶಂಕೆ ಇದೆ. ಈಗಾಗಲೇ, ಮದ್ಯ, ತಂಬಾಕು ವಸ್ತುಗಳು ತೆರಿಗೆ ಭಾರದಿಂದ ನಲುಗುತ್ತಿವೆ. ಇದರ ನಡುವೆ ರಾಜ್ಯ ಸರ್ಕಾರ, ಆಸ್ತಿ ನೋಂದಣಿ ಶುಲ್ಕ ವನ್ನು ಈಗಾಗಲೇ ಏರಿಸಿದೆ. ಆದ್ದರಿಂದ ಜನರಿಗೆ ಯಾವುದೇ ಹೊರೆಯಾಗದಂತೆ ಹಾಗೂ ಹೆಚ್ಚು ತೆರಿಗೆ ಇರುವ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವತ್ತ ಸರ್ಕಾರ ಗಮನ ಹರಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮರೆಯಲಾಗದ ಮೈಸೂರಿನ ಅಸಾಮಾನ್ಯರು





ಜನಪ್ರಿಯ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಪ್ರತಿ ವಾರ ಮೈಸೂರಿನ ಮಹಾಮಹಿಮರ ಕುರಿತಾಗಿ ಹಿರಿಯ ಪತ್ರಕರ್ತರು, ಮಹಾ ಚಿಂತಕರೂ ಆದ ಶ್ರೀ ಗೌರಿ ಸತ್ಯ ಅವರು ಸತತವಾಗಿ 50 ಲೇಖನಗಳನ್ನು ಬರೆದಿದ್ದರು. ಅವೆಲ್ಲವುಗಳನ್ನೊಳಗೊಂಡ ಶ್ರೀಯುತ ಗೌರಿ ಸತ್ಯ ಅವರ 'ಮೈಸೂರಿನ ಅಸಾಮಾನ್ಯರು' ಕೃತಿಯು ಇತ್ತೀಚೆಗೆ ಬಿಡುಗಡೆಯಾಯಿತು. ಇದೊಂದು ಅಮೋಘ ಕೃತಿ. ಈ ಕೃತಿಯ ಪರಿಚಯಾತ್ಮಕ ಲೇಖನವಿದು.

– ಡಾ. ಸಿ.ಜಿ. ಬೆಟಸೂರಮಠ.

ಡಾ. ಸಿ.ಜಿ.ಬೆಟಸೂರಮಠ
ಶಿಕ್ಷಣ ತಜ್ಞರು, ಕಾರ್ಯನಿರ್ವಾಹಕ ಕಾರ್ಯದರ್ಶಿಗಳು
ಜೆಎಸ್‌ಎಸ್ ಮಹಾ ವಿದ್ಯಾಪೀಠ, ಮೈಸೂರು.

(ನಿನ್ನೆ ಸಂಚಿಕೆಯಿಂದ)

ಅರಮನೆ ವತಿಯಿಂದ ಕಾರ್ಯಕ್ರಮ ಆಯೋಜನೆಯ ಜವಾಬ್ದಾರಿ. ನಾಲ್ವಡಿಯವರ ಮದುವೆ, ಬ್ರಿಟನ್ನಿನ ರಾಜವಂಶಸ್ಥರು ಮೈಸೂರಿಗೆ ಭೇಟಿ ನೀಡಿದ ವೇಳೆ ಅತಿಥ್ಯ ಶ್ಲಾಘನೀಯವಾದುದು.

ಶ್ರೀ ಹತ್ತನೇ ಚಾಮರಾಜ ಒಡೆಯರ್‌ರವರ ಸಹಪಾಠಿಗಳು, ಮಹಾರಾಜರ ಕುಟುಂಬದ ಆಫೀಸರ್ ಇನ್ ಚಾರ್ಜ್ ಮತ್ತು ಮಹಾರಾಜರ ದರ್ಬಾರ್ ಭಕ್ಷಿಯಾಗಿ ಎರಡೂ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಎಚ್. ಲಿಂಗರಾಜ ಅರಸ್‌ರವರ ನೇತೃತ್ವದಲ್ಲಿ ನಡೆದ ಮಹತ್ವದ ಕಾರ್ಯಕ್ರಮವೆಂದರೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮದುವೆ ಕಾರ್ಯಕ್ರಮ.

ಬ್ರಿಟನ್ನಿನ ವೇಲ್ಸ್‌ನ ಯುವರಾಜ ಮತ್ತು ಯುವ ರಾಣಿಯವರು ಮೈಸೂರಿಗೆ ಬಂದ ಸಂದರ್ಭದಲ್ಲಿ ಯಾವುದೇ ಕೊರತೆಯಾಗದಂತೆ ವ್ಯವಸ್ಥೆಗಳನ್ನು ಮಾಡಿ ಮೈಸೂರು ಮಹಾರಾಜರಿಂದ ಶಹಬಾಸ್‌ಗಿರಿ ಪಡೆದವರು ಶ್ರೀ ಬಿ.ಎಸ್. ವೆಂಕಟಾಚಾರಿಯರ್‌ರವರು.

9. ಮೈಸೂರು ಮಹಾರಾಜರು ದೇಶಿ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದುದರ ದ್ಯೋತಕ ಕುಸ್ತಿ. ಕುಸ್ತಿ ಕಲೆಯಲ್ಲಿ ಮೈಸೂರು ತನ್ನದೇ ಆದ ಸ್ಥಾನವನ್ನು ಹೊಂದಿತ್ತು. ಎಲ್ಲಾ ಕಡೆಗಳಲ್ಲು ಗರಡಿಮನೆಯನ್ನು ಕಾಣಬಹುದಿತ್ತು. ಕುಸ್ತಿ ಕಂಠೀರವ ಪೈಲ್ವಾನ್ ಶ್ರೀ ಪಾಪಯ್ಯನವರು ಕರ್ನಾಟಕ ಕುಸ್ತಿ ಕಂಠೀರವ ಎಂದೇ ಕೀರ್ತಿ ಗಳಿಸಿದವರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿದ್ದವರು. ಕುಸ್ತಿ ಕಲೆಯಲ್ಲಿ ಅದ್ವಿತೀಯರಾಗಿದ್ದ ಇವರ ಬಗ್ಗೆ ಆಕಾಶಕ್ಕೆ ಏಣಿ ಇಲ್ಲ, ಪೈಲ್ವಾನ್ ಪಾಪಯ್ಯನವರಿಗೆ ಸಾಟಿ ಇಲ್ಲ ಎನ್ನುವ ಮಾತು ಪ್ರತೀತಿ.

10. ಮೈಸೂರು ಸಂಸ್ಥಾನದಲ್ಲಿ ವೇದಶಾಸ್ತ್ರದಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದ ವಿದ್ವಾಂಸರುಗಳು ಇದ್ದರು. ರಾಷ್ಟ್ರಪತಿಗಳಿಂದ ಗೌರವಿಸಲ್ಪಟ್ಟ ಮೇಧಾವಿಗಳಿದ್ದರು.

ಸನ್ಯಾಸಿಗಳಿಗೆ, ಮಹಾರಾಜರಿಗೆ ಗುರುಗಳಾಗಿ, ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ, ಯುರೋಪಿನ ದೇಶಗಳಿಗೆ ಭೇಟಿ ನೀಡಿ ವೇದಾಂತದ ಬಗ್ಗೆ ಉಪನ್ಯಾಸಗಳನ್ನು ನೀಡಿದ ಕೀರ್ತಿ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರವರಿಗೆ ಸಲ್ಲುತ್ತದೆ.

ಆದಿ ಶಂಕರಾಚಾರ್ಯರ ಪರಮ ಭಕ್ತರು, ಮೈಸೂರಿನಲ್ಲಿ ಶ್ರೀ ಶಂಕರ ಮಂದಿರ ಹಾಗೂ ಬೆಂಗಳೂರಿನಲ್ಲಿ ಕೈವಲ್ಯಾಶ್ರಮವನ್ನು ಸ್ಥಾಪಿಸಿದ ಶ್ರೀ ವೇದಾಂತಂ ಶಿವರಾಮಶಾಸ್ತ್ರಿಯವರು.

ವೇದಶಾಸ್ತ್ರಗಳಲ್ಲಿ ಅತ್ಯುಚ್ಚ ಶ್ರೇಣಿಗೆ ಸೇರಿದ ವೇದಾಧ್ಯಯನದ ಪಾರಂಗತರೆಂದು ಗುರುತಿಸಿ ರಾಷ್ಟ್ರಪತಿಗಳಾಗಿದ್ದ ಶ್ರೀ ಶಂಕರ ದಯಾಳ ಶರ್ಮರವರು ಇವರಿಗೆ ರಾಷ್ಟ್ರಪತಿ ಸನ್ಮಾನವನ್ನು ಸ್ವೀಕರಿಸಿದವರು ವೇದರತ್ನಂ ಶ್ರೀಕಂಠ ಘನಪಾಠಿಯವರು.

11. ಮೈಸೂರು ಸಂಸ್ಥಾನದಲ್ಲಿ ಹೆಸರಾಂತ ಕಲಾವಿದರು ಪ್ರವರ್ಧಮಾನಕ್ಕೆ ಬಂದರು. ಮಹಾರಾಜರ ಪ್ರೋತ್ಸಾಹ ಇವೆಲ್ಲದಕ್ಕೂ ಕಾರಣ. ಕಲೆ, ಸಾಹಿತ್ಯ, ಭಾಷೆ, ಸಂಗೀತ, ಮೈಸೂರು ಶೈಲಿಯ ಭರತನಾಟ್ಯ, ನಾಟಕ, ನೃತ್ಯ, ಯಕ್ಷಗಾನ ವಿಶೇಷವಾದುದು.

ಕನ್ನಡ ಭಾಷೆಯ ಪುನರುತ್ಥಾನಕ್ಕೆ ಅದ್ವಿತೀಯ ಕೊಡುಗೆ ನೀಡಿದ ಪ್ರಮುಖರಾದ ಶ್ರೀ ಎಂ.ಎ. ರಾಮಾನುಜೈಯ್ಯಂಗಾರ್‌ರವರು ಹಳಗನ್ನಡ ಮತ್ತು ನಡುಗನ್ನಡದ ಕಾವ್ಯಗಳನ್ನು ರಚಿಸಿ, ರಾಜ್ಯದೆಲ್ಲೆಡೆ ಸುತ್ತಾಡಿ ತಾಳೇಗರಿ ಗ್ರಂಥಗಳನ್ನು ಸಂಗ್ರಹಿಸಿದರು.

ಶ್ರೀ ಹತ್ತನೇ ಚಾಮರಾಜ ಒಡೆಯರ್‌ರವರ ಆಸ್ಥಾನದಲ್ಲಿದ್ದ ಖ್ಯಾತ ಸಂಗೀತಗಾರರಲ್ಲೊಬ್ಬರಾದ, ಸಂಗೀತ ಶಾಸ್ತ್ರಜ್ಞರೂ, ವಾಗ್ಗೇಯಕಾರರೂ ಆಗಿದ್ದ ಗಾನಕಲಾ ಧುರಂಧರ ಶ್ರೀ ಮೈಸೂರು ಕರಿಗಿರಿರಾಯರು ಹಲವು ವರ್ಣಗಳನ್ನೂ, ಕೀರ್ತನೆಗಳನ್ನೂ, ತಿಲ್ಲಾನಗಳನ್ನೂ, ದೇವರನಾಮಗಳನ್ನೂ ರಚಿಸಿದರು.

ಕನ್ನಡ ಸಾಹಿತ್ಯ ಕೃತಿಗಳ ರಚನೆಯ ಕಾರ್ಯದಲ್ಲಿ ತೊಡಗಿಸಿಕೊಂಡು, ಪವಿತ್ರ ಗ್ರಂಥಗಳನ್ನು ಪೂರ್ಣ ಪ್ರಮಾಣದಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಿದ ಹಿರಿಮೆ ದೇವಶಿಖಾಮಣಿ ಶ್ರೀ ಅಳಸಿಂಗರಾಚಾರ್ಯರಿಗೆ ಸಲ್ಲುತ್ತದೆ.



ಗೌರಿ ಸತ್ಯ

ಶ್ರೀ ಬಿ.ಆರ್. ಪಂತಲು ಅವರ ಸ್ಕೂಲ್ ಮಾಸ್ಟರ್ ಚಿತ್ರಕ್ಕೆ ಸರಳವೂ, ಸುಂದರವೂ ಆದ ಸ್ವಾಮಿ ದೇವನೆ ಲೋಕಪಾಲನೆ ಹಾಡಿನ ರಚನೆ ಮಾಡಿದ ಶ್ರೀ ಸೋಸಲೆ ಅಯ್ಯಾ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಸಾಕಷ್ಟು ಹೆಸರು ಮಾಡಿ, ಹಲವಾರು ಗ್ರಂಥಗಳನ್ನು ರಚಿಸಿ ಕವಿ ತಿಲಕ ಬಿರುದನ್ನು ಗಳಿಸಿದವರು.

ಅಧ್ಯಾಪಕ ವೃತ್ತಿಯಲ್ಲಿದ್ದುಕೊಂಡು ಶಿಕ್ಷಣ ಕ್ಷೇತ್ರದ ಉನ್ನತಿಗೆ ಶ್ರಮಿಸಿದ, ಸ್ವಾಮಿ ವಿವೇಕಾನಂದ, ಮಹರ್ಷಿ ಅರಬಿಂದೋ ಸಂತರಿಂದ ಪ್ರಭಾವಿತರಾಗಿ ಬದುಕನ್ನು ಅಧ್ಯಾತ್ಮಿಕ ಹಾದಿಯಲ್ಲಿ ನಡೆಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿ ನಿವೃತ್ತಿ ಹೊಂದಿದ ಶ್ರೀ ಎಂ.ಎ.ನಾರಾಯಣ ಐಯ್ಯಂಗಾರ್‌ರವರು.

ಶ್ರೀ ಹತ್ತನೇ ಚಾಮರಾಜ ಒಡೆಯರ್‌ರ ಕಾಲದವರು. ನಾಟಕ, ಗಮಕ ಕಲೆಗಳಲ್ಲಿ ಪ್ರಸಿದ್ಧರಾಗಿದ್ದ, ಚಲನಚಿತ್ರದಲ್ಲೂ ಆಸಕ್ತಿ ಹೊಂದಿದ್ದ ಗಮಕದ ಗೌರೀದೇವುಡು ನರಸಿಂಹಶಾಸ್ತ್ರಿಗಳು ಸದಾರಮೆ ಚಿತ್ರದ ಚಿತ್ರಕತೆ ಬರೆದಿದ್ದಾರೆ. ಮೈಸೂರು ಶೈಲಿಯ ಭರತನಾಟ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ ಶ್ರೀಮತಿ ಜಟ್ಟಿ ತಾಯಮ್ಮನವರಿಗೆ ರಾಷ್ಟ್ರಪತಿಗಳಾಗಿದ್ದ ಡಾ.ಸರ್ವೇಪಲ್ಲಿ ರಾಧಾಕೃಷ್ಣನ್‌ರಿಂದ ನಾಟ್ಯ ಸರಸ್ವತಿ ಎಂಬ ಬಿರುದು ನೀಡಿ, ಗೌರವಿಸಿದರು. **(ಮುಂದುವರೆಯುವುದು)**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಪ್ರಶಸ್ತಿಗಿಂತ ಪ್ರಾಶಸ್ತ್ಯ ಮುಖ್ಯ ಅಲ್ಲವೇ...?

ಜನರು ತಾವು ಮುಖ್ಯ ಎಂದು ಬಯಸುತ್ತಿರುವ ಕಾರಣಕ್ಕೆ ಈ ಪ್ರಪಂಚದಲ್ಲಿ ಅನೇಕ ತೊಂದರೆಗಳು ಉಂಟಾಗುತ್ತಿವೆ? ಎಂದು ಆಂಗ್ಲ ಕವಿ ಟಿ.ಎಸ್.ಎಲಿಯಟ್ ಹೇಳಿದ್ದಾರೆ. ಇಂದಿನ ಕಾಲಘಟ್ಟಕ್ಕೆ ಈ ಮಾತು ಅನ್ವಯವಾಗುತ್ತದೆ. ಅನೇಕರು ತಾವು ಎಷ್ಟು ಮುಖ್ಯವಾದ ವ್ಯಕ್ತಿ ಎಂಬುದನ್ನು ತಮ್ಮ ಶಕ್ತಿ, ಯುಕ್ತಿ, ಕೌಶಲ್ಯ, ಪ್ರತಿಭೆಯಿಂದ ಅಷ್ಟೇ ಅಲ್ಲ, ಅದಕ್ಕೆ ಪೂರಕವಾಗಿ ಪ್ರಶಸ್ತಿಗಳನ್ನು ಗಿಟ್ಟಿಸಿ ಬೀಗುವ ಜಾಯಮಾನದಲ್ಲಿ ಇದ್ದಾರೆ.

ಈ ಮನೋಭಾವಕ್ಕೆ ತದ್ವಿರುದ್ಧವಾಗಿ ಒಲಿದು ಬಂದ ಪ್ರಶಸ್ತಿಯನ್ನು ನಯವಾಗಿ ತಿರಸ್ಕರಿಸುವವರು ಸಹ ಇದ್ದಾರೆ. ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿಯು ಜ್ಞಾನ ದಾಸೋಹಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಘೋಷಣೆಯಾದಾಗ ಅವರು ಸೌಜನ್ಯಪೂರ್ಣವಾಗಿ ನಿರಾಕರಿಸಿ, ಪ್ರಶಸ್ತಿಗೂ ಮೀರಿದ ಮೇರು ವ್ಯಕ್ತಿಯಾಗಿ ನಿಂತರು. ಅವರ ನಡೆ ಅನೇಕರಿಗೆ ಒಂದು ಪಾಠವಾಗಬೇಕು.

ಪ್ರಶಸ್ತಿಗಳಿಗಾಗಿ ಹಪಹಪಿಸಿ, ರಾಜಕಾರಣಿಗಳ ಮನೆಗಳ ಕದ ತಟ್ಟುವ, ಅಧಿಕಾರಿಗಳನ್ನು ಓಲೈಸುವ, ಸಂಘ ಸಂಸ್ಥೆಗಳ ಪದಾಧಿಕಾರಿಗಳ ಮುಂದೆ ಹಲ್ಲುಗಿಂಜಿ ನಿಲ್ಲುವವರ ಸಂಖ್ಯೆಗೇನು ಕಡಿಮೆ ಇಲ್ಲ. ಅರ್ಹರಿಗೆ ಪ್ರಶಸ್ತಿ ಬಂದಾಗ ಪ್ರಶಸ್ತಿಗೆ ಒಂದು ಮೌಲ್ಯ ಬಂತು ಎಂಬ ಸಮಾಧಾನವಾಗುತ್ತದೆ. ಆದರೆ ಭಾರತದಲ್ಲಿ ಪ್ರಶಸ್ತಿಗೆ ಕೇವಲ ಪ್ರತಿಭೆ, ಸಾಧನೆ, ತ್ಯಾಗ, ನಿಸ್ವಾರ್ಥ ಮನೋಭಾವ ಸಾಲುವುದಿಲ್ಲ, ಬದಲಿಗೆ ಧರ್ಮ, ಜಾತಿ, ಪಕ್ಷ, ರಾಜ್ಯ, ಜಿಲ್ಲೆ, ತಾಲ್ಲೂಕು ಇವುಗಳು ಸಹ ಮುಖ್ಯ ಪಾತ್ರ ವಹಿಸುವ ಕಾರಣಕ್ಕೆ ಅಪಾತ್ರರಿಗೂ ಪ್ರಶಸ್ತಿಗಳು ಘೋಷಣೆಯಾಗುವುದು ಖೇದಕರ ಸಂಗತಿ.

ಎಷ್ಟೋ ಜನ ಸಾಧಕರು ಯಾವ ಪ್ರಶಸ್ತಿ ಪುರಸ್ಕಾರಗಳನ್ನು ಅಪೇಕ್ಷಿಸದೆ, ತಮ್ಮ ಕಾಯಕ, ಕಲೆ, ವೃತ್ತಿಯನ್ನು ನಿಯತ್ತಿನಿಂದ, ಶ್ರದ್ಧೆಯಿಂದ ಮಾಡುತ್ತಾ ಎಲೆಮರೆ ಕಾಯಿಯಾಗಿ ಬದುಕುತ್ತಿದ್ದಾರೆ. ಇವರುಗಳ ನಡುವೆಯೇ ಯಾವುದೇ ಸಾಧನೆ ಮಾಡದೆ, ವಿಶೇಷ ಕಲೆಯನ್ನು ಒಲಿಸಿಕೊಳ್ಳದೆ, ರಾಜಕಾರಣಿಗಳನ್ನು ಓಲೈಸುವ ಕಲೆಯನ್ನು ಕರಗತ ಮಾಡಿಕೊಂಡು ಪ್ರಶಸ್ತಿಯನ್ನು ಬೇಡಿ ಪಡೆಯುವ ದೊಡ್ಡ ಪಡೆಯೇ ಇದೆ. ಇವರಿಗೆ ಯಾವುದೇ ಪ್ರತಿಭೆ ಅಷ್ಟಾಗಿ ಸಿದ್ಧಿಸದೇ ಹೋಗಿದ್ದರೂ, ಪ್ರಶಸ್ತಿ ಗಿಟ್ಟಿಸುವ ಪ್ರತಿಭೆ ಇರುತ್ತದೆ.

ಹುಚ್ಚನ ಮದುವೇಲಿ ಉಂಡವನೇ ಜಾಣ ಎಂಬ ನಾಣ್ನುಡಿಯಂತೆ ಈ ವಿಚಿತ್ರ ಕಾಲಮಾನದಲ್ಲಿ ಯಾವುದೂ ಅಸಾಧ್ಯವಲ್ಲ, ಎಲ್ಲರೂ ಸನ್ಯಾಸಿಗಳಲ್ಲ ಎಂಬ ಮಾತು ಪ್ರಶಸ್ತಿ ಪುರಸ್ಕೃತರಿಗೂ ಅನ್ವಯಿಸುತ್ತದೆ. ಪ್ರಶಸ್ತಿ ಪಡೆಯುವ ಭರಾಟೆ ಯಾವ ಮಟ್ಟಕ್ಕೆ ಇದೆ ಎಂದರೆ ಬೆತ್ತಲೆ ಜಗತ್ತಿನಲ್ಲಿ ಬಟ್ಟೆ ಧರಿಸಿದವನೇ ಬೆಪ್ಪ ಎನ್ನುವಂತಾಗಿದೆ. ಅಂದರೆ ಪ್ರಶಸ್ತಿ ಪುರಸ್ಕೃತರಾಗದೇ ಹೋದರೆ ಸ್ನೇಹ ಬಳಗ, ಬಂಧು ಬಾಂಧವರ ಮುಂದೆ ಕೀಳರಿಮೆ ಅನುಭವಿಸಬೇಕಾಗುತ್ತದೆ ಎಂದು ಭಾವಿಸಿ ಎಷ್ಟೋ ಮಂದಿ ಪ್ರಶಸ್ತಿ ಪಡೆಯಲು ಲಾಬಿ ನಡೆಸುತ್ತಾರೆ.

ಪ್ರಶಸ್ತಿ ಪಡೆಯಲು ಅರ್ಜಿ ಹಾಕಬೇಕು ಎಂಬುದೇ ಒಂದು ನಾಚಿಕೆ ಸಂಗತಿ. ಪ್ರಶಸ್ತಿ ಕೊಡಬೇಕಾದ ಸರ್ಕಾರಕ್ಕೆ, ಸಂಘ ಸಂಸ್ಥೆಗಳಿಗೆ ಅರ್ಹ ಸಾಧಕರನ್ನು ಗುರುತಿಸಿ ಕೊಟ್ಟರೆ ಅದೊಂದು ದೊಡ್ಡ ಗೌರವ. ಎಷ್ಟೋ ಜನ ಸಜ್ಜನರು, ಗೌರವಾನ್ವಿತರು ಅರ್ಜಿ ಹಾಕಿ ಪ್ರಶಸ್ತಿ ಪಡೆಯಬೇಕೆಂದರೆ ಆ ಪ್ರಶಸ್ತಿಯೇ ಬೇಡ ಎಂದು ದೂರ ಸರಿದಿದ್ದಾರೆ. ಕೆಲವರು ಸ್ನೇಹಿತರ ಒತ್ತಡಕ್ಕೆ ಮಣಿದು ಅರ್ಜಿ ಹಾಕಿ ಪ್ರಶಸ್ತಿಗೆ ಭಾಜನರಾಗುತ್ತಾರೆ. ಮುಜುಗರದಿಂದಲೇ ಪ್ರಶಸ್ತಿ ಸ್ವೀಕರಿಸುತ್ತಾರೆ.

ಕೆಲವು ಪ್ರಶಸ್ತಿಗಳನ್ನು ಪಡೆಯುತ್ತಿರುವ ಮಹಾನುಭಾವರನ್ನು, ಅವರ ಆಟ, ಪಾಠ, ಚಟ, ಕೂಟ, ಮಾಟ..... ಕಂಡಾಗ ಪ್ರಶಸ್ತಿ ಪಡೆಯದೇ ಇರುವುದೇ ಮರ್ಯಾದೆ ಕಾಪಾಡಿಕೊಂಡಂತೆ ಎಂದು ಭಾಸವಾಗುತ್ತದೆ. ಕ್ರಿಮಿನಲ್ ಹಿನ್ನೆಲೆಯುಳ್ಳವರಿಗೂ ಪ್ರಶಸ್ತಿಗಳು ಘೋಷಣೆಯಾಗಿರುವುದುಂಟು. ಅವರ ಸಾಲಿನಲ್ಲಿ ಕುಳಿತು ಪ್ರಶಸ್ತಿ ಪಡೆಯಬೇಕಲ್ಲ ಎಂದು ಸಜ್ಜನ ಸಾಧಕರು ಪ್ರಶಸ್ತಿ ಸ್ವೀಕರಿಸಲು ಹೋಗದೇ ಇರುವುದುಂಟು.

ಸರ್ಕಾರದ ಕೆಲವು ಕೃಪಾಪೋಷಿತ ಸಾಹಿತಿಗಳು, ಬುದ್ಧಿಜೀವಿಗಳು ಭಾಷಣಗಳಲ್ಲಿ ಸರ್ಕಾರವನ್ನು ಹೊಗಳಿ, ಸರ್ಕಾರದ ಸಾಧನೆಗಳನ್ನು ವೈಭವೀಕರಿಸಿ ಪ್ರಶಸ್ತಿ ಗಿಟ್ಟಿಸಲು ತುಚ್ಛವಾದ ಗಿಮಿಕ್ ಮಾಡುತ್ತಾರೆ. ಅದೇ ರೀತಿ ಕೆಲವು ಬುದ್ಧಿವಂತರು ಸರ್ಕಾರದ ನೀತಿ ನಿಯಮಾವಳಿಗಳನ್ನು ವಿರೋಧಿಸಲು ಪ್ರಶಸ್ತಿಗಳನ್ನು ಹಿಂತಿರುಗಿಸುವ ನಾಟಕವನ್ನೂ ಆಡುತ್ತಾರೆ. ಪ್ರಶಸ್ತಿ ಪತ್ರ, ಫಲಕ ಹಿಂತಿರುಗಿಸುವ ಆ ಮಹಾನುಭಾವರು, ಪ್ರಶಸ್ತಿ ಜೊತೆಗೆ ನೀಡಿದ್ದ ನಗದು, ನಿವೇಶನ ಇತ್ಯಾದಿ ಕೊಡುಗೆಗಳನ್ನು ಹಿಂತಿರುಗಿಸದೆ ಜಾಣ ನಡೆ ಪ್ರದರ್ಶಿಸುತ್ತಾರೆ. ಒಟ್ಟಾರೆ ಈ ಪ್ರಶಸ್ತಿ ಪ್ರದಾನ ಪ್ರಕ್ರಿಯೆ ಎಂಬುದು ಒಂದು ಪ್ರಹಸನದಂತೆ ನಡೆಯುತ್ತಿರುವುದು ಒಂದು ವಿಡಂಬನೆಯೇ ಸರಿ.



> ಅರ್ಹ ಸಾಧಕರಿಗೆ ಪ್ರಶಸ್ತಿ ಲಭಿಸಿದರೆ ಸಮಾಧಾನ ಇರುತ್ತದೆ. ಅದರಿಂದ ಪ್ರಶಸ್ತಿಗೆ ಒಂದು ಗೌರವ ಲಭಿಸುತ್ತದೆ. ಆದರೆ ಕೆಲವು ಅನರ್ಹ ಪ್ರಶಸ್ತಿ ಪುರಸ್ಕೃತರು ತಮ್ಮ ಸಣ್ಣತನದಿಂದ, ದುರಾಸೆಯಿಂದ, ಲಜ್ಜೆಗೇಡಿತನದಿಂದ ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಪ್ರಶಸ್ತಿ ಗಳಿಸಿ ಬೀಗುವುದಕ್ಕಿಂತ ನಾಲ್ಕು ಜನ ನೀಡುವ ಪ್ರಾಶಸ್ತ್ಯ ಯಾವ ಪ್ರಶಸ್ತಿಗೂ ಕಡಿಮೆ ಇಲ್ಲ ಎಂದು ಭಾವಿಸಬೇಕು. ಪ್ರಶಸ್ತಿಯಿಂದ ಸಾಧಕರಿಗೆ ಜನ ಬೆಲೆ ಕೊಡಬಹುದು. ಆದರೆ ಮೌಲ್ಯಯುತವಾಗಿ ಗೌರವಿಸುವುದೇ ನಿಜವಾದ ಪ್ರಶಸ್ತಿ ಎಂದು ತಿಳಿದರೆ ಸಮಾಧಾನವಾಗುತ್ತದೆ. ಪ್ರಶಸ್ತಿಗಳಿಗಾಗಿ ಹಪಹಪಿಸಬಾರದು, ತಾನಾಗಿಯೇ ಒಲಿದು ಬಂದರೆ ಬರಲಿ ಎಂಬ ಮನೋಭಾವ ಇರಬೇಕು. ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ? ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತನ್ನು ಸ್ಮರಿಸಬೇಕು.

ಎಷ್ಟೋ ಮಹಾತ್ಮರಿಗೆ ಮರಣೋತ್ತರ ಪ್ರಶಸ್ತಿಯನ್ನು ನೀಡಲಾಗುತ್ತದೆ. ಆ ಸಾಧಕರು ಬದುಕಿದ್ದಾಗ ಅವರ ಸಾಧನೆಯನ್ನು ಗುರುತಿಸದ ಸರ್ಕಾರ/ಸಂಘಟನೆಗಳು, ಅವರು ಗತಿಸಿದ ನಂತರ ಅವರ ಸಾಧನೆಯನ್ನು ಹಾಡಿ ಹೊಗಳಿ, ದೇಶಕ್ಕೆ ತುಂಬಲಾರದ ನಷ್ಟ ಎಂದು ಭಾಷಣ ಮಾಡಿ ಅವರ ಕುಟುಂಬದವರಿಗೆ ಪ್ರಶಸ್ತಿ ಪ್ರದಾನ ಮಾಡುವುದು ಸಹ ಒಂದು ಪ್ರಹಸನ ಎನಿಸದೆ ಇರದು. ಅವರು ಬದುಕಿದ್ದಾಗಲೇ ಪ್ರಶಸ್ತಿ ನೀಡಿದ್ದರೆ ಆ ಜೀವ ಎಷ್ಟು ಖುಷಿಪಡುತ್ತಿತ್ತೋ ಏನೋ? ಎಂದೆನಿಸದೆ ಇರದು. ಪ್ರಶಸ್ತಿ ನೀಡುವುದರ ಹಿಂದೆಯೂ ಒಂದು ದೂರದೃಷ್ಟಿ ಇರುವುದು ಈಗ ಗುಟ್ಟಾಗಿ ಉಳಿದಿಲ್ಲ. ಓಟು ರಾಜಕಾರಣಕ್ಕೆ ಪ್ರಶಸ್ತಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ತೆರೆದ ರಹಸ್ಯವಾಗಿದೆ.

ಇನ್ನು ಪ್ರಶಸ್ತಿ ಪ್ರದಾನ ಸಮಾರಂಭಗಳು ಎಷ್ಟು ಅಯೋಮಯವಾಗಿರುತ್ತದೆ ಎಂಬುದನ್ನು ಕೆಲವು ಸಾಲುಗಳಲ್ಲಿ ಬಣ್ಣಿಸಲು ಸಾಧ್ಯವಿಲ್ಲ. ನೈಜತೆಗಿಂತ ನಾಟಕೀಯತೆಯೇ ಹೆಚ್ಚಾಗಿರುತ್ತದೆ. ಪ್ರಶಸ್ತಿ ಪುರಸ್ಕೃತರನ್ನು ಕರೆತರಲು ಕೆಲವು ಕಡೆ ವಾಹನ ವ್ಯವಸ್ಥೆ ಮಾಡಿರುತ್ತಾರೆ. ಅವರಿಗೆ ಊಟ–ತಿಂಡಿ ವ್ಯವಸ್ಥೆಯೂ ಇರುತ್ತದೆ. ಪ್ರಶಸ್ತಿ ಪ್ರದಾನ ಮಾಡುವಾಗ ಮಂತ್ರಿ ಮಹೋದಯರಿಗೆ ಸಾಧಕರನ್ನು ಕಂಡು ಅಭಿಮಾನವಾಗಲಿ, ನೈಜ ಗೌರವವಾಗಲಿ ಇರುವುದಿಲ್ಲ. ಯಾಂತ್ರಿಕವಾಗಿ ಶಾಲು, ಹಾರ ಹಾಕಿ, ಫಲಕಗಳನ್ನು ಕೈಗೆ ಇರಿಸಿ, ಫೋಟೋ ಪೋಸು ಕೊಟ್ಟು ಔಪಚಾರಿಕವಾಗಿ ಒಂದೆರಡು ಮಾತನಾಡಿ ತೆರಳುತ್ತಾರೆ. ಕಾರ್ಯಕ್ರಮದ ನಂತರ ಪ್ರಶಸ್ತಿ ಪುರಸ್ಕೃತರನ್ನು ಕೇಳುವವರೇ ಇರುವುದಿಲ್ಲ. ಅಧಿಕಾರಿಗಳು ತಮ್ಮ ಜವಾಬ್ದಾರಿ ಮುಗಿಸಿ ಓಡಿರುತ್ತಾರೆ. ಪುರಸ್ಕೃತರನ್ನು ಮನೆಗೆ ವಾಪಸ್ ಕಳುಹಿಸುವ ವ್ಯವಸ್ಥೆಯನ್ನು ಸರಿಯಾಗಿ ಮಾಡಿರುವುದಿಲ್ಲ. ಸಮಾರಂಭದಲ್ಲಿ ಅವರಿಗೆ ಗೌರವಕ್ಕಿಂತ ಅಗೌರವವೇ ಹೆಚ್ಚಾಗಿರುತ್ತದೆ. ಸಾಧಕರಿಗೆ ಪ್ರಶಸ್ತಿ ಪಡೆದ ಖುಷಿ ಕೆಲವೇ ನಿಮಿಷಗಳಲ್ಲಿ ಕಳೆದು ಹೋಗಿರುತ್ತದೆ. ಆಗ ಸಾಧಕರು ಪ್ರಶಸ್ತಿ ನೀಡಿದಂತೆ ನಮಗೆ ಪ್ರಾಶಸ್ತ್ಯವನ್ನು ಸಹ ನೀಡಬೇಕಿತ್ತು ಎಂದು ಭಾವಿಸುತ್ತಾರೆ.

ಇನ್ನೊಂದು ವಿಡಂಬನೆ ಏನೆಂದರೆ ಎಷ್ಟೋ ಮಂದಿ ಪ್ರಶಸ್ತಿ ಪುರಸ್ಕೃತರಿಗೆ ತಮ್ಮ ಮನೆಯಲ್ಲಿಯೇ ಸರಿಯಾದ ಪುರಸ್ಕಾರವಿರುವುದಿಲ್ಲ. ಇಡೀ ಸಮಾಜ ಅವರನ್ನು ಬಹುಮುಖ್ಯರಂತೆ ಕಂಡು ಗೌರವದಿಂದ ಕಾಣುತ್ತಿರುವ ಕಾಲದಲ್ಲಿಯೇ ಅವರು ಅವರ ಮನೆಯಲ್ಲಿ ಅಮುಖ್ಯರಾಗಿ ಕಾಣುತ್ತಿರುತ್ತಾರೆ. ಇಂತಹ ಸಾಧಕರ ಬದುಕು ದೇವರಿಗೆ ಪ್ರೀತಿ. ಅವರು ಪ್ರಪಂಚಕ್ಕೆ ಸಾಧಕರಂತೆ ಕಂಡರೂ ಮನೆಯವರಿಗೆ ಬಾಧಕರಂತೆ ಕಾಣುತ್ತಿರುತ್ತಾರೆ. ಆಗ ಅವರ ಮನಸ್ಸಿನಲ್ಲಿ ಸರ್ಕಾರದ, ಸಂಘ ಸಂಸ್ಥೆಗಳ ಪ್ರಶಸ್ತಿಗಿಂತ ಮನೆಮಂದಿ ನೀಡುವ ಪ್ರಾಶಸ್ತ್ಯ ಮುಖ್ಯ ಎಂಬ ಭಾವ ಮೂಡದೇ ಇರದು.

ಪ್ರಶಸ್ತಿ ವಿಚಾರದಲ್ಲಿ ಮತ್ತೊಂದು ಮಜವಾದ ಸಂಗತಿ ಇದೆ. ಕೆಲವು ಸಂಘಟನೆಗಳವರು ದೂರವಾಣಿ ಕರೆ ಮಾಡಿ, ನಿಮ್ಮ ಈ ಕ್ಷೇತ್ರದ ಸಾಧನೆಯನ್ನು ಗುರುತಿಸಿ ನಿಮಗೆ ಪ್ರಶಸ್ತಿ ನೀಡುತ್ತಿದ್ದೇವೆ ಎಂದು ತಿಳಿಸಿ ಅಚ್ಚರಿ ಮೂಡಿಸುತ್ತಾರೆ. ಅನಾಯಾಸವಾಗಿ ಬಂದ ಪ್ರಶಸ್ತಿಯನ್ನು ಬೇಡ ಎನ್ನಲು ಮನಸ್ಸಿಲ್ಲದೆ ಆ ಸಾಧಕರು ಪ್ರಶಸ್ತಿ ಸ್ವೀಕರಿಸಲು ಒಪ್ಪುತ್ತಾರೆ. ಅವರ ಸಾಧನೆಯ ವಿವರ, ಫೋಟೋ ಪಡೆಯುವ ಸಂಘಟಕರು, ಒಂದೊಳ್ಳೆ ಸ್ಮರಣಿಕೆ ಮಾಡಿಸಿ, ಕಾರ್ಯಕ್ರಮವೊಂದರಲ್ಲಿ ಶಾಲು, ಹಾರ, ಫಲಕ ನೀಡಿ ಫೋಟೋ/ವಿಡೀಯೋ ಮಾಡಿಸಿ ಅವರನ್ನು ಖುಷಿಪಡಿಸುತ್ತಾರೆ. ಅವರ ಸಾಧನೆಗೆ ಉಪ್ಪುಖಾರ ಸೇರಿಸಿ ಅಗತ್ಯಕ್ಕಿಂತ ಹೆಚ್ಚು ಹೊಗಳಿ, ಗೌರವ ಕೊಟ್ಟು ಸನ್ಮಾನಿಸುತ್ತಾರೆ. ಆ ನಂತರ ಕಾರ್ಯಕ್ರಮಕ್ಕೆ ಇಂತಿಷ್ಟು ಖರ್ಚಾಯಿತು, ನೀವು ಸಹ ಹಣ ನೀಡಬೇಕು ಎಂದು ಪ್ರಶಸ್ತಿ ಪುರಸ್ಕೃತರಿಂದಲೇ ಹಣ ಪೀಕುವುದುಂಟು. ಕೆಲವು ಡೋಂಗಿ ಸಂಘ–ಸಂಸ್ಥೆಗಳಿಗೆ ಇದೊಂದು ಹಣ ಮಾಡುವ ದಂಧೆಯಾಗಿದೆ. ಇನ್ನು ಕೆಲವು ಬುದ್ಧಿವಂತರು ಯಾವುದೋ ಒಂದು ಪ್ರಶಸ್ತಿಗೆ ಶಿಫಾರಸ್ಸು ಮಾಡಿಸಿ, ಅದನ್ನು ಕೊಡಿಸಿ, ಪ್ರಶಸ್ತಿ ಸ್ವೀಕರಿಸಿದವರಿಂದ ಬಹುದೊಡ್ಡ ಸಹಾಯವನ್ನು ಪಡೆಯುತ್ತಾರೆ. ಆಗ ಪ್ರಶಸ್ತಿ ಎನ್ನುವುದು ಸಹ ಒಂದು ರೀತಿಯ ಸ್ಕೀಂ ಎಂದು ಪುರಸ್ಕೃತರಿಗೆ ಅರಿವಾಗುತ್ತದೆ. ಹಾಗಾಗಿ ಪ್ರಶಸ್ತಿ ಸ್ವೀಕರಿಸಿದ ನಂತರ ಹತ್ತು ಬಾರಿ ಚಿಂತಿಸುವುದಕ್ಕಿಂತ, ಪ್ರಶಸ್ತಿ ಸ್ವೀಕರಿಸುವ ಮುನ್ನವೇ ಹತ್ತು ಬಾರಿ ಚಿಂತನೆ ಮಾಡುವುದು ಒಳಿತು.

ಗೌರವ ಡಾಕ್ಟರೇಟ್ ಎಂಬ ಪುರಸ್ಕಾರಕ್ಕೆ ಗೌರವ ಹಾಳು ಮಾಡುತ್ತಿರುವ ಕೆಲವು ವಿಶ್ವವಿದ್ಯಾನಿಲಯಗಳು ಇವೆ. ಇವುಗಳಿಗೆ ಹಣ ಪಡೆದು ಡಾಕ್ಟರೇಟ್ ನೀಡುವುದೇ ಒಂದು ಸಾಧನೆಯಾಗಿದೆ. 15ರಿಂದ 20 ಸಾವಿರ ಕೊಟ್ಟರೆ ಯಾರಿಗೆ ಬೇಕಾದರೂ ಡಾಕ್ಟರೇಟ್ ಪ್ರದಾನ ಮಾಡುತ್ತಾರೆ. ಖಾಸಗಿ ಹೋಟೆಲ್‌ನಲ್ಲಿ ಸಮಾರಂಭ ಏರ್ಪಡಿಸಿ, ಗೌನ್ ಹಾಕಿಸಿ, ಒಂದು ಸ್ಮರಣಿಕೆ, ಪತ್ರ ಕೊಟ್ಟು ಫೋಟೋ ತೆಗೆಯಿಸಿ ಖುಷಿಪಡಿಸುತ್ತಾರೆ. ಕೆಲವು ಮಹನೀಯರು ಈ ದುಡ್ಡಿನ ಡಾಕ್ಟರೇಟ್ ಗೌರವವನ್ನು ತಮ್ಮ ಹೆಸರಿನ ಮುಂದೆ ರಾಜಾರೋಷವಾಗಿ ಹಾಕಿಕೊಳ್ಳುತ್ತಾರೆ. ನಾಲ್ಕಾರು ವರ್ಷಗಳು ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮಾಡಿ, ಪ್ರಬಂಧ ಮಂಡಿಸಿ, ಡಾಕ್ಟರೇಟ್ ಪಡೆದ ಪ್ರಾಧ್ಯಾಪಕರು ಇವರ ಆಟೋಟಾಪ ಕಂಡು ತಮ್ಮ ಹೆಸರಿನ ಮುಂದೆ ಪ್ರೊಫೆಸರ್ ಎಂದು ನಮೂದಿಸುತ್ತಿದ್ದಾರೆ.

ಪ್ರಶಸ್ತಿಗಿಂತ ಪ್ರಾಶಸ್ತ್ಯ ಮುಖ್ಯ ಅಲ್ಲವೇ? ಏನೇ ಸಾಧನೆ ಮಾಡಿದರೂ, ಅನೇಕ ಸಾಧಕರು ತಮ್ಮ ಸಣ್ಣತನದಿಂದ, ದುರಾಸೆಯಿಂದ, ಲಜ್ಜೆಗೇಡಿತನದಿಂದ ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಪ್ರಶಸ್ತಿ ಗಳಿಸಿ ಬೀಗುವುದಕ್ಕಿಂತ ನಾಲ್ಕು ಜನ ನೀಡುವ ಪ್ರಾಶಸ್ತ್ಯ ಯಾವ ಪ್ರಶಸ್ತಿಗೂ ಕಡಿಮೆ ಇಲ್ಲ ಎಂದು ಭಾವಿಸಬೇಕು. ಪ್ರಶಸ್ತಿಯಿಂದ ಸಾಧಕರಿಗೆ ಜನ ಬೆಲೆ ಕೊಡಬಹುದು. ಆದರೆ ಮೌಲ್ಯಯುತವಾಗಿ ಗೌರವಿಸುವುದೇ ನಿಜವಾದ ಪ್ರಶಸ್ತಿ ಎಂದು ತಿಳಿದರೆ ಸಮಾಧಾನವಾಗುತ್ತದೆ. ಪ್ರಶಸ್ತಿಗಳಿಗಾಗಿ ಹಪಹಪಿಸಬಾರದು. ತಾನಾಗಿಯೇ ಒಲಿದು ಬಂದರೆ ಬರಲಿ ಎಂಬ ಮನೋಭಾವ ಇರಬೇಕು. ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ? ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತನ್ನು ಸ್ಮರಿಸಬೇಕು.

ಹೂರಣ: ಪ್ರಾಶಸ್ತ್ಯ ಕೊಡುವ ಖುಷಿಯನ್ನು ಯಾವ ಪ್ರಶಸ್ತಿಯೂ ಕೊಡುವುದಿಲ್ಲ. !

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಪಾದಚಾರಿ ಸಾವು

ರಸ್ತೆ ಡುಬ್ಬ ನಿರ್ಮಾಣಕ್ಕೆ ಆಗ್ರಹಿಸಿ ಸ್ಥಳೀಯರಿಂದ ಪ್ರತಿಭಟನೆ

ಚಾಮರಾಜನಗರ: ಚಾಮರಾಜನಗರ'ದಿಂದ ಗುಂಡ್ಲುಪೇಟೆಗೆ ಸಂಪರ್ಕ ಕಲ್ಪಿಸುವ ಮಾರ್ಗ ಮಧ್ಯೆದಲ್ಲಿರುವ ಕಡುವಿನಕಟ್ಟೆ ಹುಂಡಿ(ಕೆಕೆ ಹುಂಡಿ) ಬಳಿ ಭಾನುವಾರ ರಾತ್ರಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಪಾದಚಾರಿಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ಮೃತನನ್ನು ಕಬ್ಬಳ್ಳಿ ಗ್ರಾಮದ ಸುಭಾಷ್ (33) ಎಂದು ಗುರುತಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಸ್ನೇಹಾರಾಜ್ ಸೇರಿದಂತೆ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಸ್ತೆ ಡುಬ್ಬ ನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ: ಈ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗಿ ನಡೆಯುತ್ತಿದ್ದು, ರಸ್ತೆ ಡುಬ್ಬ ನಿರ್ಮಾಣ ಮಾಡಬೇಕು ಎಂದು ಘಟನಾ ಸ್ಥಳದಲ್ಲಿ ಸ್ಥಳಿಯರು ಪ್ರತಿಭಟನೆ ನಡೆಸಿದರು.

ಇಸ್ಪೀಟ್ ಅಡ್ಡೆ ಮೇಲೆ ದಾಳಿ; 56,530 ರೂ. ವಶ

ಮೈಸೂರು,ಫೆ.22(ಪಿಎಂ)– ಇಸ್ಪೀಟ್ ಅಡ್ಡೆ ಮೇಲೆ ಮೈಸೂರು ದಕ್ಷಿಣ ಪೊಲೀಸ್ ಠಾಣೆ ಪೊಲೀಸರು ದಾಳಿ ನಡೆಸಿ, 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿ, ಪಣಕ್ಕಿರಿಸಲಾಗಿದ್ದ 56,530 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಗೊರೂರು ಗ್ರಾಮದ ಬಳಿ ಹಣವನ್ನು ಪಣವಾಗಿ ಕಟ್ಟಿಕೊಂಡು ಅಂದರ್ ಬಾಹರ್ ಇಸ್ಪೀಟ್ ಆಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಶುಕ್ರವಾರ ದಾಳಿ ನಡಸಲಾಯಿತು.

ಉಚಿತ ಮಧುಮೇಹ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿಗೆ ಚಿಕಿತ್ಸೆ



ಮೈಸೂರು,ಫೆ.22(ಎಂಟಿವೈ)– ಮೈಸೂರಿನ ಶ್ರೀರಾಂಪುರದ ಸರ್ಕಾರಿ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ನಡೆದ ಉಚಿತ ಮಧುಮೇಹ ತಪಾಸಣಾ ಮತ್ತು ಚಿಕಿತ್ಸಾ ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡು ಚಿಕಿತ್ಸೆ ಪಡೆದುಕೊಂಡರು.

ಆಯುಷ್ಮಾನ್ ಭಾರತ್ ಯೋಜನೆಯ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಆಯೋಜಿಸಿದ್ದ ಉಚಿತ ಮಧುಮೇಹ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರದಲ್ಲಿ ಮಧುಮೇಹ ರೋಗಿಗಳಿಗೆ ತಪಾಸಣೆ ಮಾಡಿ, ಅಗತ್ಯ ಚಿಕಿತ್ಸೆ ನೀಡಲಾಯಿತು. ಮಧುಮೇಹ ಮುಕ್ತಗೊಳಿಸುವ ನಿಟ್ಟಿನಲ್ಲಿ ಉಚಿತ ಮಧುಮೇಹ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಆಯೋಜಿಸಿದ್ದ ಹಿನ್ನೆಲೆಯಲ್ಲಿ ಸುತ್ತುಮುತ್ತಲಿನ ಬಡಾವಣೆಗಳ ನಿವಾಸಿಗಳು ಬಂದು ಚಿಕಿತ್ಸೆ ಪಡೆದುಕೊಂಡರು.

ಇದೇ ವೇಳೆ ಆರೋಗ್ಯ ಕೇಂದ್ರದ ವೈದ್ಯರಾದ ಡಾ.ಹೆಚ್.ಎಸ್.ಕುಮಾರಿ ಮಾತನಾಡಿ, ಮಧುಮೇಹ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಿ ಕಾಯಿಲೆಯ ನಿಯಂತ್ರಣಕ್ಕೆ ಕಾರ್ಯಕ್ರಮ ರೂಪಿಸಲಾಗಿದೆ. ತಪಾಸಣಾ ಶಿಬಿರ ಆಯೋಜಿಸಿ ಮಧುಮೇಹ ರೋಗ ಪತ್ತೆ ಮಾಡುವುದರೊಂದಿಗೆ ಅದನ್ನು ನಿವಾರಣೆ ಮಾಡಲು ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಯೋಗ ಮಾಡುವುದರಿಂದ ಆಹಾರ ಪದ್ಧತಿಯಿಂದಲೂ ಮಧುಮೇಹ ನಿಯಂತ್ರಿಸಬಹುದಾಗಿದೆ. ಆಯುಷ್ ಕೇಂದ್ರದಲ್ಲಿ ಸಿಗುವ ಉಚಿತ ಚಿಕಿತ್ಸೆಗಳ ಬಗ್ಗೆ ಮಾಹಿತಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುಂತೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಶಿಬಿರದಲ್ಲಿ ನೂರಕ್ಕೂ ಹೆಚ್ಚು ಮಂದಿ ಉಚಿತ ಮಧುಮೇಹ ಪರೀಕ್ಷಾ ಶಿಬಿರದಲ್ಲಿ ಪಾಲ್ಗೊಂಡು ಮಧುಮೇಹ ಪರೀಕ್ಷೆಗೆ ಒಳಪಟ್ಟು ಡಯಾಬಿಟಿಸ್ ಇರುವವರಿಗೆ ಸ್ಥಳದಲ್ಲಿಯೇ ಚಿಕಿತ್ಸೆಯೂ ನೀಡಲಾಯಿತು. ಶಿಬಿರದಲ್ಲಿ ಯೋಗ ಶಿಕ್ಷಕರಾದ ಮಹೇಶ ಎಂ. ಭಾಗ್ಯಲಕ್ಷ್ಮಿ ಹೆಚ್. ಹಾಗೂ ಶ್ರೀರಾಂಪುರದ ನಿವಾಸಿಗಳಾದ ಕೆ.ಎಲ್.ಶಾಂತ, ಉಷಾ ಹಾಗೂ ಮುಂತಾದವರು ಪಾಲ್ಗೊಂಡಿದ್ದರು.

ಪಡುವಾರಹಳ್ಳಿಯಲ್ಲಿ ಶ್ರೀ ಜೋಡಿ ಮಾರಮ್ಮ ಜಾತ್ರೆಯ ಸಂಭ್ರಮ



ಜಾತ್ರೆ ಹಿನ್ನೆಲೆಯಲ್ಲಿ ಹೂವಿನಿಂದ ಅಲಂಕೃತಗೊಂಡಿರುವ ಪಡುವಾರಹಳ್ಳಿ (ವಿನಾಯಕನಗರ) ಶ್ರೀ ಜೋಡಿ ಮಾರಮ್ಮ ದೇವಸ್ಥಾನ. ಜೊತೆಗೆ ದೇವಸ್ಥಾನದ ಆವರಣದಲ್ಲಿ ಬಾಳೆಗೊನೆ ಕಟ್ಟಿಸುವ ಮೂಲಕ ಭಕ್ತರು ಹರಕೆ ತೀರಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.22(ಪಿಎಂ)– ಮೈಸೂರಿನ ಪಡುವಾರಹಳ್ಳಿ (ವಿನಾಯಕ ನಗರ) ಶ್ರೀ ಜೋಡಿ ಮಾರಮ್ಮ ಜಾತ್ರೆಗೆ ಶನಿವಾರ ರಾತ್ರಿ ವಿದ್ಯುಕ್ತ ಚಾಲನೆ ದೊರೆತಿದ್ದು, ಸೋಮವಾರ (ಫೆ.23) ರಾತ್ರಿಯವರೆಗೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ದೊಂದಿಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಶನಿವಾರ ಮಧ್ಯರಾತ್ರಿ 2 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವಡ್ಡಬಾಯಿ ಸೇರಿದಂತೆ ನಾನಾ ಆಚರಣೆಗಳು ನೆರವೇರಿದವು. ಶನಿವಾರ ಮಧ್ಯರಾತ್ರಿ ದೇವಸ್ಥಾನದ ಆವರಣದಲ್ಲಿ ವಡ್ಡಬಾಯಿ ಆಚರಣೆಯು ವರ್ಣರಂಜಿತವಾಗಿ ನಡೆಯಿತು. ಊರಿನ ಹತ್ತಾರು ಮಂದಿ ಪುರುಷರು ವಿವಿಧ ವೇಷಗಳನ್ನು ಧರಿಸಿ ಮಾರಿಗುಡಿಯ ಸುತ್ತಲೂ ಮೂರು ಸುತ್ತು ಪ್ರದಕ್ಷಣೆ ಹಾಕಿ ಬಳಿಕ ತಮ್ಮ ವೇಷದ ಸಾಮಗ್ರಿಗಳನ್ನ ಬೆಂಕಿಯಲ್ಲಿ ಸುಟ್ಟರು. ನಂತರ ವಡ್ಡಬಾಯಿ ಸಾರುವ ವಿಧಿವಿಧಾನವು ನೆರವೇರಿತು.

ಭಾನುವಾರ ಮಧ್ಯರಾತ್ರಿ ದೇವಸ್ಥಾನ ಆವರಣದಿಂದ ತಂಪಿನ ಮೆರವಣಿಗೆಗೆ ಚಾಲನೆ ನೀಡಲಾಯಿತು. ಅಲಂಕೃತ ಕಳಶ ಕನ್ನಡಿ ಹೊಂದಿರುವ ಕನ್ನಂಕಾಡಿ ಹೊತ್ತ ಬಾಲಕಿಯರು ಮುಂದೆ ಸಾಗಿದರೆ, ಅವರ ಹಿಂದೆ ತಂಬಿಟ್ಟು ಹೊತ್ತ ಮಹಿಳೆಯರು ಸಾಲಿನಲ್ಲಿ ಸಾಗಿದರು. ಆ ಮೂಲಕ ಜೋಡಿ ಮಾರಮ್ಮ ತಾಯಿಗೆ ಭಕ್ತಿಯ ಪರಾಕಾಷ್ಠೆ ಮೆರೆಯಲಾಯಿತು.

ಫೆ.23ರ ಸೋಮವಾರ ಮಧ್ಯಾಹ್ನ 3ಕ್ಕೆ ಬಾಯಿಬೀಗದ ಮೆರವಣಿಗೆ ನಡೆಯಲಿದೆ. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿ ಸಂಜೆ ವೇಳೆಗೆ ದೇವಸ್ಥಾನಕ್ಕೆ ಮರಳಲಿದೆ. ಬಾಯಿ ಬೀಗವನ್ನು ದೇವಸ್ಥಾನದ ಆವರಣದ ಅರಳಿಕಟ್ಟೆಯ ಹತ್ತಿರ ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಇದಾದ ಬಳಿಕ ರಾತ್ರಿ 9 ಗಂಟೆಗೆ ದೇವಸ್ಥಾದ ಆವರಣದಲ್ಲಿ 'ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ' ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ.

ಭಾರತ ಗೆಲುವಿನ ನಾಗಾಲೋಟಕ್ಕೆ ದಕ್ಷಿಣ ಆಫ್ರಿಕಾ ಬ್ರೇಕ್

ಅಹ್ಮದಾಬಾದ್ ಫೆ.22(ವಿವಿಹೆಚ್)– ಡೇವಿಡ್ ಮಿಲ್ಲರ್ ಹಾಗೂ ಡೆವಾಲ್ಡ್ ಬ್ರೇವಿಸ್ ಭರ್ಜರಿ ಬ್ಯಾಟಿಂಗ್ ಬಲದಿಂದ ದಕ್ಷಿಣ ಆಫ್ರಿಕಾ, ಅತಿಥೇಯ ಭಾರತ ತಂಡವನ್ನು 76 ರನ್‌ಗಳ ಭಾರೀ ಅಂತರದಿಂದ ಮಣಿಸಿದೆ. ಆ ಮೂಲಕ ಐಸಿಸಿ ಟಿ20 ವಿಶ್ವಕಪ್‌ನಲ್ಲಿ ಅಜೇಯ 12 ಗೆಲುವುಗಳೊಂದಿಗೆ ಮುನ್ನುಗ್ಗುತ್ತಿದ್ದ ಭಾರತದ ಓಟಕ್ಕೆ ಹರಿಣ ಪಡೆ ಬ್ರೇಕ್ ಹಾಕಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಸೂಪರ್ 8 ಸುತ್ತಿನ ಮೂರನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 187 ರನ್ ಕಲೆಹಾಕಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಟೀಂ ಇಂಡಿಯಾ 18.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 111 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಡೆವಾಲ್ಡ್ ಬ್ರೆವಿಸ್ ಹಾಗೂ ಡೇವಿಡ್ ಮಿಲ್ಲರ್ 50 ಎಸೆತಗಳಲ್ಲಿ 97 ರನ್‌ಗಳ ಜತೆಯಾಟವನ್ನಾಡಿದರು. ಬ್ರೆವಿಸ್ 29 ಎಸೆತಗಳಲ್ಲಿ 3 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 45 ರನ್ ಬಾರಿಸಿದರೆ, ಡೇವಿಡ್ ಮಿಲ್ಲರ್ 35 ಎಸೆತಗಳಲ್ಲಿ 7 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 63 ರನ್ ಚಚ್ಚಿದರು. ಬಳಿಕ ಬಂದ ಟ್ರಿಸ್ಟನ್ ಸ್ಟಬ್ಸ್ 24 ಎಸೆತಗಳಲ್ಲಿ 1 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಅಜೇಯ 44 ರನ್ ಕಲೆಹಾಕಿದರು.

ಇನ್ನು ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಭಾರತಕ್ಕೆ ಉತ್ತಮ ಜೊತೆಯಾಟ ಕಂಡು ಬರಲೇ ಇಲ್ಲ. ಶಿವಂ ದುಬೆ ಹೊರತುಪಡಿಸಿ ಮತ್ಯಾವ ಬ್ಯಾಟರ್ 20ರನ್ ಗಡಿ ದಾಟಲೇ ಇಲ್ಲ. ದುಬೆ 37 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಸಹಿತ 42 ರನ್ ಗಳಿಸಿದ್ದೆ ತಂಡದ ಪರ ಗರಿಷ್ಟ ರನ್ ಆಗಿತ್ತು. ಹರಿಣ ಪಡೆ ದಾಳಿಗೆ ನಲುಗಿದ ಭಾರತ ತವರಿನಲ್ಲಿಯೇ ಮುಖಭಂಗ ಅನುಭವಿಸಿತು.

ಭೀಕರ ಕಾರು ಅಪಘಾತ: ಮಾಜಿ ಶಾಸಕ ಸುರೇಶ್‌ಗೌಡ ಪ್ರಾಣಾಪಾಯದಿಂದ ಪಾರು




ಮಂಡ್ಯ, ಫೆ.22–ಮಾಜಿ ಶಾಸಕ ಹಾಗೂ ಜೆಡಿಎಸ್ ಮುಖಂಡ ಕೆ.ಸುರೇಶ್‌ಗೌಡ ಪ್ರಯಾಣಿಸುತ್ತಿದ್ದ ಕಾರು ಶನಿವಾರ ತಡರಾತ್ರಿ ಭೀಕರ ಅಪಘಾತಕ್ಕೆ ತುತ್ತಾಗಿದ್ದು, ಮಾಜಿ ಶಾಸಕರು ಗಂಭೀರವಾಗಿ ಗಾಯಗೊಂಡು ಪ್ರಾಣಾಪಾಯದಿಂದ ಪಾರಾದರೆ, ವಾಹನ ಚಲಾಯಿಸುತ್ತಿದ್ದ ಚಾಲಕನಿಗೂ ಗಂಭೀರ ಗಾಯಗಳಾಗಿವೆ.

ಶನಿವಾರ ರಾತ್ರಿ ಜೆಡಿಎಸ್ ಕಾರ್ಯಕರ್ತರೊಬ್ಬರ ಕುಟುಂಬದ ಮದುವೆ ಮುಗಿಸಿಕೊಂಡು ಮದ್ದೂರು ತಾಲೂಕಿನ ಹೊಸಗಾವಿಯಿಂದ ತಾಲೂಕಿನ ಬಸರಾಳು ಮಾರ್ಗವಾಗಿ ನಾಗಮಂಗಲಕ್ಕೆ ತೆರಳುವ ಮಾರ್ಗ ಮಧ್ಯೆ ರಾತ್ರಿ 12.30ರ ಸಮಯದಲ್ಲಿ ಬಸರಾಳು ಬಳಿಯ ಬೊಂತೆಕೊಪ್ಪಲಿನಲ್ಲಿ ಈ ದುರ್ಘಟನೆ ಸಂಭವಿಸಿದೆ.

ಘಟನೆಯ ವಿವರ: ಶನಿವಾರ ರಾತ್ರಿ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಹೊಸಗಾವಿ ಗ್ರಾಮದ ಮಹದೇಶ್ವರ ದೇಗುಲದಲ್ಲಿ ಕ್ಷೇತ್ರದ ಮುಖಂಡರೊಬ್ಬರ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಾಗಮಂಗಲದಲ್ಲಿರುವ ತಮ್ಮ ನಿವಾಸಕ್ಕೆ ವಾಪಸ್ಸಾಗುತ್ತಿದ್ದರು. ಕೊಪ್ಪ ಮಾರ್ಗವಾಗಿ ಬಸರಾಳು ಮೂಲಕ ನಾಗ ಮಂಗಲ ತಲುಪುವ ಮಾರ್ಗ ಮಧ್ಯೆ ಬೊಂತೆಕೊಪ್ಪಲು ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿದ (ಕೆ.ಎ–03, ಎನ್.ವಿ–3699) ಸಂಖ್ಯೆಯ ಫಾರ್ಚೂನರ್ ಕಾರು ಪಲ್ಟಿಯಾಗಿದೆ.

ಪಲ್ಟಿಯಾದ ರಭಸಕ್ಕೆ ಕಾರಿನ ಮುಂಭಾಗ ಮತ್ತು ಹಿಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಸುರೇಶ್‌ಗೌಡ ಅವರ ಕೈ, ಮುಖ, ತಲೆಗೆ ಪೆಟ್ಟಾಗಿದೆ. ವಾಹನ ಚಲಾಯಿಸುತ್ತಿದ್ದ ಶೇಖರ್‌ಗೆ ಗಂಭೀರ ಗಾಯಗಳಾಗಿದ್ದು, ಕೂಡಲೇ ಮಾಜಿ ಶಾಸಕರ ಗನ್ ಮ್ಯಾನ್ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ.

ತಕ್ಷಣ ಸ್ಥಳಕ್ಕೆ ಬಂದ ಪೊಲೀಸರು ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನು ಬೆಳ್ಳೂರು ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಸುರೇಶ್‌ಗೌಡರನ್ನು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ರವಾನಿಸಿದ್ದು, ಸದ್ಯ ಮಾಜಿ ಶಾಸಕರ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದು ಬಂದಿದೆ.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಹಲವು ಗಣ್ಯರು ಸುರೇಶ್‌ಗೌಡ ಅವರ ಆರೋಗ್ಯ ವಿಚಾರಿಸಿದರು.

ಕಾವೇರಿ ನದಿಯಲ್ಲಿ ಈಜಲು ಹೋದ ಬೆಂಗಳೂರಿನ ಯುವಕ ಸಾವು



ಹಲಗೂರು: ಸಮೀಪದ ಮುತ್ತತ್ತಿ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಹರಿಯುವ ಕಾವೇರಿ ನದಿಯಲ್ಲಿ ಈಜಾಡುತ್ತಿದ್ದ ವೇಳೆ ನೀರಿನ ಬಲವಾದ ಸೆಳೆತಕ್ಕೆ ಸಿಲುಕಿ ಯುವಕನೊಬ್ಬ ಮೃತಪಟ್ಟ ಘಟನೆ ಶನಿವಾರ ನಡೆದಿದೆ.

ಮೃತಪಟ್ಟ ಯುವಕ ಬೆಂಗಳೂರಿನ ಪಾಪಯ್ಯ ಗಾರ್ಡನ್ ನಿವಾಸಿ ಆರ್. ವಿಜಯ್ ಕುಮಾರ್ ಅವರ ಪುತ್ರ ಭಾರ್ಗವ್ (22) ಎಂದು ಗುರುತಿಸಲಾಗಿದೆ.

ಬೆಂಗಳೂರಿನ ಬನಶಂಕರಿಯ ಖಾಸಗಿ ಶಾಲೆಯೊಂದರಲ್ಲಿ ಬಸ್ ಚಾಲಕರಾಗಿ ಕೆಲಸ ಮಾಡುತ್ತಿದ್ದ ಭಾರ್ಗವ್, ಶನಿವಾರ ತನ್ನ ಎಂಟು ಮಂದಿ ಸ್ನೇಹಿತರೊಂದಿಗೆ ಆಟೋ ಮತ್ತು ಕಾರಿನಲ್ಲಿ ಮುತ್ತತ್ತಿಗೆ ಪ್ರವಾಸಕ್ಕೆ ಬಂದಿದ್ದರು. ದೇವಸ್ಥಾನದಲ್ಲಿ ದರ್ಶನ ಪಡೆದು ಊಟ ಮುಗಿಸಿದ ಬಳಿಕ ಕಾವೇರಿ ನದಿಯಲ್ಲಿ ಈಜಲು ತೆರಳಿದ ಸಂದರ್ಭದಲ್ಲಿ ಆಕಸ್ಮಿಕವಾಗಿ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾನೆ.

ಸ್ಥಳೀಯ ನುರಿತ ಈಜುಗಾರರ ಸಹಾಯದಿಂದ ಭಾನುವಾರ ಮಧ್ಯಾಹ್ನ ಯುವಕನ ಮೃತದೇಹವನ್ನು ನದಿಯಿಂದ ಹೊರತೆಗೆಯಲಾಯಿತು. ಈ ಕುರಿತು ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಬೂದನೂರಿನಿಂದ ಇಂಡುವಾಳುವರೆಗೆ ವರ್ತುಲ ರಸ್ತೆ: ರವಿಕುಮಾರ್




ಬೂದನೂರು ಉತ್ಸವದ ಸಮಾರೋಪ ಸಮಾರಂಭದಲ್ಲಿ ಶಾಸಕ ರವಿಕುಮಾರ್ ಅವರನ್ನು ಸನ್ಮಾನಿಸಲಾಯಿತು(ಎಡಚಿತ್ರ). ಸರ್ಕಾರದ 'ಪಂಚ ಗ್ಯಾರಂಟಿ' ಯೋಜನೆಗಳ ಕುರಿತು ಆಕರ್ಷಕ ರಂಗೋಲಿ ಬಿಡಿಸಿದ ಮಹಿಳೆಯರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದ ವೈಯುಕ್ತಿಕ ನಗದು ಬಹುಮಾನಗಳನ್ನು ವಿತರಿಸಲಾಯಿತು.

ಮಂಡ್ಯ, ಫೆ.22–ಬೂದನೂರಿನಿಂದ ಇಂಡುವಾಳುವರೆಗೂ ವರ್ತುಲ ರಸ್ತೆ ನಿರ್ಮಾಣ ಮಾಡಲು ಕೇಂದ್ರ, ರಾಜ್ಯ ಸರ್ಕಾರದಿಂದ 350 ಕೋಟಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಶಾಸಕ ರವಿಕುಮಾರ್ ತಿಳಿಸಿದ್ದಾರೆ.

ಹೊಸ ಬೂದನೂರು ಶ್ರೀ ಕಾಶಿವಿಶ್ವನಾಥಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಭಾನುವಾರ ನಡೆದ ಬೂದನೂರು ಉತ್ಸವ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವರ್ತುಲ ರಸ್ತೆ ನಿರ್ಮಾಣದ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಕಾರ್ಯಗತ ಗೊಳಿಸುವುದಾಗಿ ಹೇಳಿದರು. ಕೇವಲ ಬೂದನೂರು ಅಭಿವೃದ್ಧಿಗಾಗಿಯೇ 25 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬೂದನೂರು ಕೆರೆಗೆ ಮುಂದಿನ ವಾರ ಅಡಿಗಲ್ಲು ಹಾಕಲಿದ್ದೇವೆ ಎಂದು ಪ್ರಕಟಿಸಿದರು.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಮಾದರಿ ಕೆರಗೋಡಿನ ಪಂಚಲಿಂಗೇಶ್ವರ ದೇವಸ್ಥಾನವನ್ನು ಅಭಿವೃದ್ಧಿ ಪಡಿಸಲಾಗುವುದು ಮುಂದಿನ ವಾರ ಇದರ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಮುಂದಿನ ಐವತ್ತು ವರ್ಷಗಳ ಕಾಲ ಜಿಲ್ಲೆಯ ಜನರಿಗೆ ನೀರಿನ ಸಮಸ್ಯೆ ಉಂಟಾಗದಂತೆ 250 ಕೋಟಿ ವೆಚ್ಚದಲ್ಲಿ ನಾಲೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು

ಚಿಕ್ಕಬಳ್ಳಾಪುರಿನ ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, ಯುವಜನತೆ ಬದುಕಿನಲ್ಲಿ ಸಾಧನೆ ಮಾಡಲು ಧೈರ್ಯ ಮತ್ತು ಏಕಾಗ್ರತೆ ಅಗತ್ಯ, ಯುವ ಜನತೆ ಪ್ರೀತಿ ಪ್ರೇಮ ಎಂಬ ಪಾಶದಿಂದ ದೂರ ಉಳಿದು ಉತ್ತಮ ಬದುಕು ಕಟ್ಟಿಕೊಳ್ಳ ಬೇಕು. ಪೋಷಕರು ವಯೋಮಾನ ಕಾಲದ ಅಗತ್ಯಕ್ಕೆ ಅನುಗುಣವಾಗಿ ಹಣವನ್ನು ಸಂಗ್ರಹಿಸಿ ಇಟ್ಟುಕೊಳ್ಳಿ, ಔಷಧಿ ಮತ್ತು ಮಾತ್ರೆಗಳಿಗೆ ಇನ್ನೊಬ್ಬರನ್ನು ಕೇಳುವ ಪ್ರಸಂಗ ಉಂಟಾಗಬಾರದು ಎಂದು ಹೇಳಿದರು.

ಐವತ್ತು ವರ್ಷಗಳಿಂದಲೂ ಬಾಕಿ ಇದ್ದ ಬೂದನೂರು ವಸತಿ ರಹಿತರಿಗೆ ಹಕ್ಕುಪತ್ರಗಳನ್ನು ವಿತರಿಸಲಾಯಿತು.

ಬೂದನೂರು ಉತ್ಸವದ ಅಂಗವಾಗಿ ನಡೆಸಿದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಶಾಸಕರಾದ ವಿಜಯಾನಂದ ಕಾಶಪ್ಪ ನವರ್, ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ರಾಜ್ಯ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನಾಗೇಶ್, ಉದ್ಯಮಿ ರುದ್ರೇಗೌಡ, ಮೈ ಶುಗರ್ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ಶಿವಾನಂದ, ಮೈಸೂರು ವಿಮಾನ ನಿಲ್ದಾಣದ ಪ್ರಾಧಿಕಾರದ ಸದಸ್ಯರಾದ ಬಸರಾಳು ರವಿ, ಜಿ.ಪಂ. ಮಾಜಿ ಸದಸ್ಯ ಯೋಗೇಶ್, ನಟ ಲೋಕೇಶ್, ಮನ್‌ಮುಲ್ ಅಧ್ಯಕ್ಷ ಶಿವಪ್ಪ, ಜಿಲ್ಲಾಧಿಕಾರಿ ಡಾ. ಕುಮಾರ, ಜಿ.ಪಂ. ಸಿಇಓ ಕೆ.ಆರ್ ನಂದಿನಿ, ಎಸ್‌ಪಿ ಶೋಭಾರಾಣಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು

ಭಿನ್ನಾಭಿಪ್ರಾಯ ಬದಿಗೊತ್ತಿ ಸ್ಥಳೀಯ ಚುನಾವಣೆಯಲ್ಲಿ ಅಧಿಕಾರಕ್ಕೆ ತನ್ನಿ



ರೀ ಮಾಡೆಲಿಂಗ್ ಕಾಮಗಾರಿಗೆ ಚಲುವರಾಯ ಸ್ವಾಮಿ ಭೂಮಿ ಪೂಜೆ ನೆರವೇರಿಸಿದರು.

ನಾಗಮಂಗಲ, ಫೆ.22–ಮುಂದಿನ ದಿನಗಳಲ್ಲಿ ಜಿಪಂ, ತಾಪಂ ಹಾಗೂ ಗ್ರಾಪಂ ಚುನಾವಣೆ ಜರುಗಲ್ಲಿದ್ದು ಈಗಿನಿಂದಲೇ ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ ಅಭ್ಯರ್ಥಿಗಳ ಗೆಲುವಿಗೆ ಕಾರ್ಯಕರ್ತರು ಹಾಗೂ ಮುಖಂಡರು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಕಾವೇರಿ ನೀರಾವರಿ ನಿಗಮ ಯೋಜನೆ ಅಡಿಯಲ್ಲಿ ತಾಲೂಕಿನ ಬಿಂಡಿಗನವಿಲೆ ಹೋಬಳಿಗೆ ಸೇರಿದ ಸೆಣಬಗೇಟ್ ಬಳಿ 630 ಕೋಟಿ ರೂ. ವೆಚ್ಚದಲ್ಲಿ ರೀ ಮಾಡೆಲಿಂಗ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಸ್ಥಳೀಯ ನಾಯಕರ ನಡುವೆ ಭಿನ್ನಾಭಿಪ್ರಾಯಗಳಿದ್ದರೆ ನನ್ನ ಗಮನಕ್ಕೆ ತನ್ನಿ ಕೂಡಲೇ ಪರಿಹರಿಸುತ್ತೇನೆ. ನೀವುಗಳೆಲ್ಲರೂ ಸ್ಥಳೀಯ ಚುನಾವಣೆಯಲ್ಲಿ ಒಗ್ಗಟ್ಟಾಗಿ ಶ್ರಮಿಸಿದರೆ ಮಾತ್ರ ನೆಮ್ಮದಿಯಿಂದ ಇರಲು ಸಾಧ್ಯ ಎಂದರು. ಹಿಂದೆ ಮಾಡಿದ್ದ ತಪ್ಪನ್ನೇ ಮುಂದಿನ ಚುನಾವಣೆಯಲ್ಲಿ ಮಾಡಿದರೆ ಜೀವನದಲ್ಲಿ ಮತ್ತೆ ಒಳ್ಳೆಯ ದಿನಗಳನ್ನು ನೀವು ನೋಡಲು ಸಾಧ್ಯವಿಲ್ಲ. ಅದರಿಂದ ಮುಂಬರುವ ಗ್ರಾಪಂ. ಚುನಾವಣೆಗಳಲ್ಲಿ ಎಲ್ಲರೂ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈಗಿನಿಂದಲೇ ಬುದ್ಧಿವಂತರಾಗಿ ಒಗ್ಗಟ್ಟಾಗಿ ದುಡಿದು ಪಕ್ಷಕ್ಕೆ ಬಲ ತುಂಬಬೇಕೆಂದು ತಿಳಿಸಿದರು.

ನಾಗತಿಹಳ್ಳಿ, ಬೆಳ್ಳೂರು ಹಾಗೂ ಕರಡಹಳ್ಳಿ ಗ್ರಾಮದಲ್ಲಿ ಕೇಂದ್ರ ಸಚಿವರು ಮಾಡಿರುವ ಭೂಮಿಪೂಜೆ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಯಲ್ಲ ಅದು ಕಂಪನಿಯವರು ನೀಡಿರುವ ಸಿಎಸ್‌ಆರ್ ಅನುದಾನಕ್ಕೆ ಭೂಮಿ ಪೂಜೆ ನೆರವೇರಿಸಿದ್ದಾರೆ. ಅದಕ್ಕೆ ನನ್ನ ತಕರಾರಿಲ್ಲ ಒಟ್ಟಾರೆ ತಾಲೂಕಿನ ಅಭಿವೃದ್ಧಿ ಕೆಲಸಗಳು ಆಗಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೂಡ್ಲಿಗೌಡ, ಕನ್ನಾಘಟ್ಟ ವೆಂಕಟೇಶ್, ಬ್ಯಾಕ್ ಕಾಂಗ್ರೆಸ್ ಅಧ್ಯಕ್ಷ ಎನ್ ಜೆ ರಾಜೇಶ್, ಸುನಿಲ್ ಲಕ್ಷ್ಮಿಕಾಂತ್, ಎಲೆಕೊಪ್ಪ ದಿನೇಶ್, ಕಮಿಟಿ ಅಧ್ಯಕ್ಷ ಕೃಷ್ಣೆಗೌಡ, ಅಳೀಸಂದ್ರ ದಿನೇಶ್, ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಯದುಕೃಷ್ಣ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಕ್ಕಿಹೆಬ್ಬಾಳು ಡೇರಿಗೆ ಶಂಕರೇಗೌಡ ಅಧ್ಯಕ್ಷ



ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶಂಕರೇಗೌಡ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಟಿ ಎನ್ ನಾಗರಾಜು ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಬಯಸಿ ನಿರ್ದೇಶಕ ಶಂಕರೇಗೌಡ ಅವರನ್ನು ಹೊರತುಪಡಿಸಿ ಉಳಿದ ಯಾವ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಶಂಕರೇಗೌಡರವರೇ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾ ಅಧಿಕಾರಿ ಎವಿ ಯೋಗೇಶ್ ಘೋಷಿಸಿದರು.

ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿ ವಿತರಣೆ ಮಾಡಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರಾಜನಾಯಕ್ ನಮ್ಮ ಹಾಲು ಉತ್ಪಾದಕರ ಸಹಕಾರ ಸಂಘವು ರೈತರ ಜೀವ ನಾಡಿ. ನೂರಾರು ಕುಟುಂಬಗಳಿಗೆ ಆಸರೆಯಾಗಿರುವ ಡೇರಿಯ ಅಭಿವೃದ್ಧಿಗೆ ನೂತನ ಆಡಳಿತ ಮಂಡಳಿ ಪ್ರಾಮಾಣಿಕವಾಗಿ ಕೆಲಸ ಮಾಡಿ ಗ್ರಾಮಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಕಿವಿಮಾತು ಹೇಳಿದರು

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಟಿ.ಎನ್.ದಿವಾಕರ್, ಉಪಾಧ್ಯಕ್ಷ ಗುರುಮೂರ್ತಿ, ನಿರ್ದೇಶಕರಾದ ಕಾಯಿ ನಾಗರಾಜು, ಜಯಮಾಲ, ವಸುಮತಿ, ರಾಜಮ್ಮ, ಶಿವಮ್ಮ, ರಾಮಯ್ಯ, ಎಂ.ವಿ. ಹರೀಶ್, ವಿಸ್ತರಣಾಧಿಕಾರಿ ಮಧು, ಮುಖಂಡರಾದ ಜಿಲ್ಲಾ ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷ ಶ್ರೀನಿವಾಸ್ ವಿಎಸ್‌ಎಸ್‌ಎನ್ ನಿರ್ದೇಶಕ ಎಎಸ್ ಮಹಾಲಿಂಗು, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಕೃಷ್ಣೇಗೌಡ ಮಾಜಿ ನಿರ್ದೇಶಕರು ಟಿಎನ್ ರಾಜೇಶ್, ಹಾಲು ಪರೀಕ್ಷಕಿ ರೇಣುಕಾ, ಹಾಲು ಸಹಾಯಕರಾದ ಸ್ವಾಮಿ ಇತರರಿದ್ದರು.

ಒಂದನೇ ಪುಟದಿಂದ

ಅದು ಕಾಂಗ್ರೆಸ್‌ನಿಂದ ಮಾತ್ರ

ತಮ್ಮ ಜಾತಿ ಒಂದು ಓಟ್ ಬ್ಯಾಂಕ್ ಅಷ್ಟೆ, ತಂದೆ ಮತ್ತು ಮಕ್ಕಳು ತಮ್ಮ ಕುಟುಂಬದ ಸ್ವಾರ್ಥಕ್ಕಾಗಿ ರಾಜಕೀಯ ಕ್ಷೇತ್ರದಲ್ಲಿ ಉಳಿದವರನ್ನು ಬಿಟ್ಟುಬಿಡಿ, ಸ್ವಜಾತಿ ನಾಯಕರು ಕೂಡಾ ಬೆಳೆಯದಂತೆ ಒಬ್ಬೊಬ್ಬರನ್ನೇ ಮುಗಿಸುತ್ತಾ ಬಂದವರು. ಹಿಂದೆ, ಇಂದು ಮತ್ತು ಮುಂದೆ ಜಾತ್ಯತೀತ ಜನತಾದಳದ ತುತ್ತತುದಿಯ ನಾಯಕರು ಗೌಡರ ಕುಟುಂಬದವರೇ ಆಗಿರುತ್ತಾರೆ ಎನ್ನುವುದು ಸತ್ಯ.

ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಸನ್ಮಾನ್ಯ ಹೆಚ್.ಡಿ.ದೇವೇಗೌಡರು ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ಜೆಡಿ(ಎಸ್) ಪಕ್ಷದಲ್ಲಿ ಬೆಳೆಸಿದ್ದಾರೆ ಎಂದು ವಿನಯಪೂರ್ವಕವಾಗಿ ಕೇಳಬಯಸುವೆ. ಹಾಸನದ ಪುಟ್ಟಸ್ವಾಮಿಗೌಡ, ಸಿ.ಎಸ್. ಪುಟ್ಟೇಗೌಡ, ಜವರೇಗೌಡ, ಕೆ.ಎಂ.ವಿಶ್ವನಾಥ್, ಹನುಮೇಗೌಡ, ಮಂಡ್ಯದ ಕೆ.ಎನ್. ನಾಗೇಗೌಡ, ಕೆ.ಆರ್.ಪೇಟೆ ಕೃಷ್ಣ, ವೈ.ಕೆ. ರಾಮಯ್ಯ, ಸಿ.ಬೈರೇಗೌಡ, ಬಚ್ಚೇಗೌಡ, ಬಿ.ಎಲ್.ಶಂಕರ್, ಸಿ.ನಾರಾಯಣಸ್ವಾಮಿ, ಚೆಲುವರಾಯ ಸ್ವಾಮಿ ಮೊದಲಾದವರೆಲ್ಲ ಯಾಕೆ ದೇವೇಗೌಡರನ್ನು ಬಿಟ್ಟು ಹೊರಬಂದರು ಎನ್ನುವುದನ್ನು ನಾನು ವಿವರಿಸಿ ಹೇಳಬೇಕಾಗಿಲ್ಲ. ಒಕ್ಕಲಿಗ ನಾಯಕರನ್ನು ಗುರುತಿಸಿ ರಾಜಕೀಯವಾಗಿ ಬೆಳೆಸಿದ್ದು ಕಾಂಗ್ರೆಸ್ ಪಕ್ಷ ಮಾತ್ರ. ಕೆಂಗಲ್ ಹನುಮಂತಯ್ಯ ಅವರಿಂದ ಹಿಡಿದು ಎಸ್.ಎಂ.ಕೃಷ್ಣ ವರೆಗೆ ನೂರಾರು ಒಕ್ಕಲಿಗ ನಾಯಕರನ್ನು ಬೆಳೆಸಿದೆ. ದೇವೇಗೌಡರಿಂದ ಮೋಸಕ್ಕೊಳಗಾದ ನಾಯಕರಿಗೆ ಅವಕಾಶ ನೀಡಿ ರಾಜಕೀಯ ವಾಗಿ ಬೆಳೆಸುತ್ತಿರುವುದು ಕೂಡಾ ಕಾಂಗ್ರೆಸ್ ಪಕ್ಷ. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ. ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೆ ಅದಕ್ಕೆ ಕಾಂಗ್ರೆಸ್ ಕಾರಣ.

ಒಕ್ಕಲಿಗ ಸಮುದಾಯಕ್ಕೆ ಸಮರ್ಥ ನಾಯಕತ್ವ ನೀಡಲು ಸಾಧ್ಯ ಇರುವವರು ಈಗಲೂ ಕಾಂಗ್ರೆಸ್ ಪಕ್ಷದಲ್ಲಿಯೇ ಇರುವುದು. ಡಿ.ಕೆ.ಶಿವಕುಮಾರ್, ಟಿ.ಬಿ.ಜಯಚಂದ್ರ, ಕಿಮ್ಮನೆ ರತ್ನಾಕರ್, ಎಂ.ಕೃಷ್ಣಪ್ಪ, ಕೃಷ್ಣಬೈರೇಗೌಡ, ಪಿರಿಯಾಪಟ್ಟಣ ವೆಂಕಟೇಶ್, ಹೀಗೆ ನಮ್ಮಲ್ಲಿರುವ ಒಕ್ಕಲಿಗರ ನಾಯಕರ ದೊಡ್ಡ ಪಟ್ಟಿಯೇ ಇದೆ. ಜೆಡಿ(ಎಸ್)ನಲ್ಲಿ ಎಷ್ಟು ಮಂದಿ ಒಕ್ಕಲಿಗ ನಾಯಕರಿದ್ದಾರೆ. ಮುಂದೊಂದು ದಿನ ದೇವೇಗೌಡರ ಕುಟುಂಬವನ್ನು ಹೊರತುಪಡಿಸಿ ಯಾರಾದರೂ ರಾಜ್ಯದ ಮುಖ್ಯಮಂತ್ರಿಗಳಾದರೆ ಅದು ಕಾಂಗ್ರೆಸ್ ಪಕ್ಷದಿಂದಲೇ ಆಗಲಿದೆ ಎನ್ನುವುದನ್ನು ನಾನು ಒತ್ತು ಕೊಟ್ಟು ಹೇಳುತ್ತಿದ್ದೇನೆ.

ಕಾಂಗ್ರೆಸ್ ಸಾಮಾಜಿಕ ನ್ಯಾಯದ ಪರವಾಗಿರುವ ಪಕ್ಷ ಈ ಸೈದ್ಧಾಂತಿಕ ಬದ್ಧತೆಯನ್ನು ಕೇವಲ ಮಾತಿನ ಮೂಲಕ ಮಾತ್ರವಲ್ಲ ಕೃತಿಯ ಮೂಲಕವೂ ಪಕ್ಷ ಮಾಡಿ ತೋರಿಸುತ್ತಾ ಬಂದಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದಿಂದ ಒಕ್ಕಲಿಗರು, ಲಿಂಗಾಯತರು, ಹಿಂದುಳಿದವರು ಮುಖ್ಯಮಂತ್ರಿಗಳಾಗಿದ್ದಾರೆ, ಹಿಂದುಳಿದ ಜಾತಿಗೆ ಸೇರಿದ ನನ್ನನ್ನು ಗುರುತಿಸಿ ಎರಡನೇ ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ಕಲ್ಪಿಸಿಕೊಟ್ಟಿರುವುದು ಕೂಡಾ ಕಾಂಗ್ರೆಸ್ ಪಕ್ಷ. ಇದಕ್ಕಾಗಿ ನಾನು ಪಕ್ಷದ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರಿಗೆ ಆಭಾರಿಯಾಗಿದ್ದೇನೆ.

ಜಾತಿಯಿಂದ ಮಾತ್ರವಲ್ಲ, ಅರ್ಹತೆಯ ಬಲದಿಂದಲೇ ಮುಖ್ಯಮಂತ್ರಿಯಾಗುವಂತಹ ದಲಿತ ಸಮುದಾಯದ ನಾಯಕರು ಕೂಡಾ ಕಾಂಗ್ರೆಸ್ ಪಕ್ಷದಲ್ಲಿಯೇ ಇರುವುದು. ಮುಂದೊಂದು ದಿನ ದಲಿತ ಸಮುದಾಯದಿಂದ ಯಾರಾದಾರೂ ರಾಜ್ಯದ ಮುಖ್ಯಮಂತ್ರಿಯಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎನ್ನುವುದನ್ನು ವಿಶ್ವಾಸಪೂರ್ವಕವಾಗಿ ಹೇಳಬಲ್ಲೆ.

ಇಂತಹದ್ದೊಂದು ಆಶಯವನ್ನು ಕೂಡಾ ವ್ಯಕ್ತಪಡಿಸುವ ಸ್ಥಿತಿಯಲ್ಲಿ ರಾಜ್ಯದ ಜೆಡಿಎಸ್ ಇಲ್ಲವೇ ಬಿಜೆಪಿ ಇದೆಯೇ? ಇದು ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ, ಜೆಡಿಎಸ್‌ಗಳಿಗೆ ಇರುವ ವ್ಯತ್ಯಾಸ. ಆದ್ದರಿಂದ ನನ್ನ ವಿರುದ್ಧ ಜಾತಿ ರಾಜಕೀಯದ ಆರೋಪ ಮಾಡುತ್ತಿರುವವರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಹಾರೈಸುತ್ತೇನೆ.

ಪ್ರಶಂಸಿಸಿದ ಪ್ರಧಾನಿ ನರೇಂದ್ರ ಮೋದಿ

ಇದರಿಂದ ದೇಶದ ಅವಶ್ಯಕತೆಯನ್ನು ಮೀರಿ ನಾವು ಜಾಗತಿಕವಾಗಿ ರಫ್ತು ಮಾಡಲು ಸಾಧ್ಯವಾಗಿದೆ. ಹಲವು ರೈತರು ಸಂಪ್ರದಾಯಿಕ ಕೃಷಿಯ ಜತೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ವಿಸ್ತರಿಸುತ್ತಿದ್ದಾರೆ ಎಂದು ಬಣ್ಣಿಸಿದ್ದಾರೆ.

ಸ್ವದೇಶಿ ಉತ್ಪನ್ನಗಳ ಬಳಸಿ: 'ವೋಕಲ್ ಫಾರ್ ಲೋಕಲ್' ಘೋಷಣೆ ಮೂಲಕ ಹಬ್ಬಗಳ ಸಂಭ್ರಮದಲ್ಲಿ 'ಸ್ವದೇಶಿ ಉತ್ಪನ್ನ'ಗಳ ಬಳಕೆಗೆ ಸಲಹೆ ನೀಡಿದ್ದಾರೆ. ಪವಿತ್ರ ರಂಜಾನ್ ವ್ರತಾಚರಣೆ ಆರಂಭವಾಗಿರುವುದನ್ನು ಉಲ್ಲೇಖಿಸಿರುವ ಪ್ರಧಾನಿ ಮೋದಿ, ಮುಸ್ಲಿಂ ಬಾಂಧವರಿಗೆ ಶುಭಾಶಯಗಳನ್ನು ಕೋರಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಹೋಳಿ ಹಬ್ಬ ಬರಲಿದೆ. ನೀವೆಲ್ಲರೂ ಕುಟುಂಬ ಹಾಗೂ ಪ್ರೀತಿಪಾತ್ರರೊಂದಿಗೆ ಎಲ್ಲಾ ಹಬ್ಬಗಳನ್ನು ಸಂತೋಷದಿಂದ ಆಚರಿಸುತ್ತೀರಿ. ಸಂಭ್ರಮದ ಕ್ಷಣದಲ್ಲಿ ಸ್ಥಳೀಯರಿಗೆ ನೆರವಾಗುವ ವೋಕಲ್ ಫಾರ್ ಲೋಕಲ್ ಮಂತ್ರವನ್ನು ಮರೆಯಬಾರದು. ಹೋಳಿ ಸೇರಿದಂತೆ ಯಾವುದೇ ಹಬ್ಬಗಳಲ್ಲಿ ವಿದೇಶಿ ಉತ್ಪನ್ನಗಳು ಮಾರುಕಟ್ಟೆ ಪ್ರವೇಶಿಸುತ್ತಿವೆ. ಅಂತಹ ಉತ್ಪನ್ನಗಳನ್ನು ಹಬ್ಬಗಳಿಂದ ದೂರವಿಡಿ. ಸ್ವದೇಶಿ ಉತ್ಪನ್ನಗಳನ್ನು ಬಳಕೆ ಮಾಡಿ. ಸ್ವದೇಶಿ ಉತ್ಪನ್ನಗಳನ್ನು ಖರೀದಿಸುವುದರಿಂದ ಸ್ವಾವಲಂಬಿ ದೇಶ ಅಭಿಯಾನಕ್ಕೂ ನೆರವಾಗುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಹಾಗಾದರೆ ತತ್‌ಕ್ಷಣ ನೀವು ಕುರ್ಚಿ ಬಿಡಬೇಕಲ್ಲವೇ

ನೀವು ಪಟ್ಟಿ ಮಾಡಿರುವ ಒಕ್ಕಲಿಗ ನಾಯಕರ ಹೆಸರುಗಳನ್ನು ಓದಿದೆ. ಪಾಪ.. ನೀವು ಅವರ ಹೆಸರುಗಳನ್ನ ಉಲ್ಲೇಖಿಸಿ ಅವರನ್ನೂ ಅಪಹಾಸ್ಯ ಮಾಡಿದ್ದೀರಿ. ನೀವೂ ಅಪಹಾಸ್ಯಕ್ಕೆ ತುತ್ತಾಗಿದ್ದಲ್ಲದೆ, ನಗೆಪಾಟಲಿಗೀಡಾಗಿದ್ದೀರಿ. ನಿಮ್ಮ ರಾಜಕೀಯ ಸ್ವಾರ್ಥಕ್ಕೆ ಆ 13 ಜನರ ಶೆಲ್ಟರ್ ಪಡೆದಿದ್ದೀರಿ. ಸರಿ, ಹಾಗಿದ್ದರೆ ಅವರೆಲ್ಲರೂ ದೇವೇಗೌಡರಿಂದ ಅಧಿಕಾರ ಅನುಭವಿಸಲೇ ಇಲ್ಲವೇ? ಆಗ ಅವರೆಲ್ಲರೂ ಕೂತಿದ್ದ ಅಧಿಕಾರ ಸ್ಥಾನಗಳಲ್ಲಿ ದೇವೇಗೌಡರೇ ಕೂತಿದ್ದರಾ? ಅವರೆಲ್ಲರೂ ನಿಮ್ಮಂತೆಯೇ ದೇವೇಗೌಡರ ಶ್ರಮ, ತ್ಯಾಗದಿಂದ ಅಧಿಕಾರ ಉಂಡು, ಪೊಗರದಸ್ತಾಗಿ ಬೆಳೆದು ಬೇಲಿ ಹಾರಿದವರು! ನೀವು ಹೇಳಿದಂತೆ ಕುಟುಂಬವೇ ಮಿಗಿಲು ಎಂದು ಗೌಡರು ಭಾವಿಸಿದ್ದಿದ್ದರೆ ಈ ಪಟ್ಟಿಯಲ್ಲಿನ ಒಬ್ಬರೂ ಶಾಸಕ, ಮಂತ್ರಿ, ಎಂಪಿ ಆಗುತ್ತಲೇ ಇರಲಿಲ್ಲ. ನಿಮ್ಮನ್ನೂ ಸೇರಿಸಿ! ಏನಂತೀರಿ? ನೀವೆಲ್ಲರೂ ನೆರಳು ಕೊಟ್ಟ ವೃಕ್ಷಕ್ಕೆ ನಿರ್ದಯದಿಂದ ಕೊಡಲಿ ಹಾಕಿದಿರಿ. ಉಂಡು ಹೋದಿರಿ, ಕೊಂಡು ಹೋದಿರಿ!

ಸಿದ್ದರಾಮಯ್ಯನವರೇ.. ನಿಮ್ಮ ಸ್ವಾರ್ಥಕ್ಕೆ ಜಾತಿ ಎಳೆದು ತಂದಂತೆ ಹಿರಿಯರಾದ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ.ಕೃಷ್ಣ ಅವರನ್ನು ಏಕೆ ಎಳೆದು ತರುತ್ತೀರಿ. ಎಸ್.ಎಂ.ಕೃಷ್ಣ ಅವರ ಹೆಸರೇಳುವ ಸಾಸಿವೆ ಕಾಳಷ್ಟು ಯೋಗ್ಯತೆ, ನೈತಿಕತೆ ನಿಮಗಿದೆಯೇ? ಹಿ ಈಸ್ ಅನ್ ಪಾಲಿಷ್ಡ್ ಡೈಮಂಡ್ ಎಂದು ಸೋನಿಯಾ ಗಾಂಧಿ ಅವರ ಮುಂದೆ ಹೇಳಿ, ನೀವು ಕಾಂಗ್ರೆಸ್ ಮೆಟ್ಟಿಲತ್ತಲು ಕಾರಣರಾದ ಎಸ್.ಎಂ.ಕೃಷ್ಣರನ್ನು ಎಷ್ಟು ಕ್ರೂರವಾಗಿ ವಂಚಿಸಿದಿರೆನ್ನುವುದು ಜಗತ್ತು ಬಲ್ಲ ಸತ್ಯ. ರಾಜಕೀಯದ ಕಡೆಗಾಲದಲ್ಲಿ ಅವರನ್ನು ನೀವೆಷ್ಟು ತುಚ್ಛವಾಗಿ ನಡೆಸಿಕೊಂಡಿರಿ ಎನ್ನುವುದನ್ನು ಜನ ಮರೆತಿಲ್ಲ. ಅನ್ ಪಾಲಿಷ್ಡ್ ಡೈಮಂಡ್ ಕೃಷ್ಣರಿಗೆ ಚೂರಿ ಆಗಿದ್ದು ಎಲ್ಲರೂ ಬಲ್ಲರು.

ಒಕ್ಕಲಿಗರನ್ನು ಬೆಳೆಸಿದ್ದು ಕಾಂಗ್ರೆಸ್ಸು ಅಂತೀರಿ.. ಬರೀ ಬುರಡೆ.. ವಿಧಾನಸೌಧ ಕಟ್ಟಿದ ಕೆಂಗಲ್ ಅವರಿಗೆ ನಿಮ್ಮ ನೆಹರು ಕೊಟ್ಟ ಕಿರುಕುಳ, ಮಾಡಿದ ಅಪಮಾನ ಅಷ್ಟಿಷ್ಟಾ? ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರಿಗೆ ಬೆನ್ನಿಗಿರಿದ ದೂರ್ತರು ಯಾರು? ಯಾವ ಪಕ್ಷದವರು? ಒಕ್ಕಲಿಗರನ್ನು ಸಿಎಂ ಮಾಡುವುದು ಕಾಂಗ್ರೆಸ್ಸೇ ಎನ್ನುವುದಾದರೆ, ತತ್‌ಕ್ಷಣಕ್ಕೇ ನೀವು ಕುರ್ಚಿ ಬಿಡಬೇಕಲ್ಲವೇ? ಒಕ್ಕಲಿಗರ ಮೇಲೆ ನಿಮ್ಮ ಪ್ರೀತಿ ಪ್ರದರ್ಶನಕ್ಕೆ ಇದು ಸಕಾಲ! ಸಿದ್ದರಾಮಯ್ಯನವರೇ.. ಒಕ್ಕಲಿಗ ಸಮುದಾಯಕ್ಕೆ ಸಮರ್ಥ ನಾಯಕತ್ವ ನೀಡುವ ಕಾಂಗ್ರೆಸ್ ಉದಾರತೆಯನ್ನು ನಾನು ಸ್ವಾಗತಿಸುವೆ. ಈ ಉದಾರತೆ ನಿಮಗೂ ಬೇಕಲ್ಲವೇ? ಈಗ ನೀವು ಉದಾರತೆ ತೋರಬೇಕು. ಎರಡನೇ ಅವಧಿಗೆ ನೀವು ಸಿಎಂ ಆಗುವ ಮುನ್ನ ಅಗ್ರಿಮೆಂಟ್ ಆಗಿತ್ತಲ್ಲಾ, ಅದನ್ನು ಬಹಿರಂಗವಾಗಿ ಹೇಳುವ ಉದಾರತೆ ತೋರಿ. ದಿಲ್ಲಿಯಲ್ಲಿ ನಿಮ್ಮಿಬ್ಬರ ನಡುವೆ ಆಗಿದ್ದ ಆ ಅಗ್ರಿಮೆಂಟ್‌ಗೆ ಸಾಕ್ಷಿ ಆಗಿದ್ದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ವೇಣುಗೋಪಾಲ್, ಸುರ್ಜೆವಾಲಾಗೆ ನಿಮ್ಮ ಸಾಮಾಜಿಕ ನ್ಯಾಯ, ಒಕ್ಕಲಿಗ ಪ್ರೀತಿಯ ಪರಾಕಾಷ್ಠೆ ಈಗೀಗ ಅರ್ಥವಾಗಿದೆ ಎಂದು ಭಾವಿಸುತ್ತೇನೆ. ಅವರೆಲ್ಲರ ಮಾನಸಿಕ ಸ್ವಾಸ್ಥ್ಯ ಸರಿ ಇದೆ ಎಂದು ನಾನಾದರೂ ನಂಬಿದ್ದೇನೆ.

ಸಾಮಾಜಿಕ ನ್ಯಾಯದ ಸಂಹಾರಿಯೇ ಅದೇ ಸಾಮಾಜಿಕ ನ್ಯಾಯ ಬಗ್ಗೆ ಪದೇಪದೆ ಮಾತನಾಡುವುದು ಅಸಹ್ಯ ತರಿಸುತ್ತದೆ. ನಿಮ್ಮ ಸಾಮಾಜಿಕ ನ್ಯಾಯಕ್ಕೆ ಅಂತಃಕರಣವಿಲ್ಲ. ಇದ್ದಿದ್ದರೆ ನಿಮಗಿಂತ ಮೊದಲೇ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಆಗಬೇಕಿತ್ತು. ಇದ್ದ ಪ್ರತಿಪಕ್ಷ ಸ್ಥಾನವನ್ನೂ ಕಿತ್ತುಕೊಂಡು ಅವರನ್ನು ಅತ್ಯಂತ ಅಪಮಾನಕರವಾಗಿ ದಿಲ್ಲಿಗೆ ಓಡಿಸಿದಿರಿ. ಇನ್ನೊಬ್ಬ ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ನಿಮ್ಮ ದಾರಿಗೆ ಅಡ್ಡ ಬರುತ್ತಾರೆಂದು ಚುನಾವಣೆ ಕಣದಲ್ಲೇ ಮುಗಿಸಿದಿರಿ, ನಿಮ್ಮನ್ನು ಕಾಂಗ್ರೆಸ್ಸಿಗೆ ಕರೆತಂದ ಹೆಚ್.ವಿಶ್ವನಾಥ್‌ರನ್ನು ಎಲ್ಲಿ ಇಟ್ಟಿದ್ದೀರಿ? ನೀವು ಸಿಎಂ ಪಟ್ಟಕ್ಕೆ ಏರಿ ಕೂತಿರಿ? ಎರಡು ಸಲ ನೀವು ಸಿಎಂ ಆಗಿದ್ದಲ್ಲ, ಅರ್ಹತೆಯಿಂದ ಆಗಿದ್ದೂ ಅಲ್ಲವೇ ಅಲ್ಲ. ಪಕ್ಷದಲ್ಲಿದ್ದ ಸಮರ್ಥರನ್ನು ಸಾಮಾಜಿಕ ನ್ಯಾಯದ ನೆಪದಲ್ಲಿ ರಾಜಕೀಯ ನರಮೇಧ ಮಾಡಿ ಆಕ್ರಮಿಸಿದ್ದು.

ಇನ್ನೆಷ್ಟು ಸುಳ್ಳು ಹೇಳುತ್ತೀರಿ. ಇನ್ನೆಷ್ಟು ದಿನ ಈ ಊಸರವಳ್ಳಿ ಅವತಾರ. ಅಸಲಿಗೆ ಅಹಿಂದಾ ನಾಯಕ, ಸಾಮಾಜಿಕ ನ್ಯಾಯದ ಪ್ರತಿನಿಧಿಯೇ ನೀವಾಗಿದ್ದಿದ್ದರೆ ಈ ಸೂಕ್ಷ್ಮ ಸಂದರ್ಭದಲ್ಲಿ ನೀವು ಹುಟ್ಟಿದ ಜಾತಿಯನ್ನು ಎಳೆದು ತರುತ್ತಿರಲಿಲ್ಲ. ಇದನ್ನೇ ನಾನು ಪ್ರಶ್ನಿಸಿದ್ದು. ಬಸವಣ್ಣ, ನಾರಾಯಣ ಗುರು, ಕುವೆಂಪು, ದೇವರಾಜ ಅರಸು ಅವರುಗಳ ವಿಚಾರ, ತತ್ವಾದರ್ಶಗಳನ್ನು ನಂಬಿದನು ಎನ್ನುವ ನೀವು, ಇನ್ನು ಮುಂದೆ ಆ ಮಹನೀಯರ ಹೆಸರೇಳಬೇಡಿ. ನಿಮಗಿಂತ ವಯಸ್ಸಿನಲ್ಲಿ ಚಿಕ್ಕವನಾದ ನಾನು ನಿಮಗೆ ನೀಡುವ ವಿನಮ್ರ ಸಲಹೆ ಇದು.

9 ದಿನ ನ್ಯಾಯಾಂಗ ಬಂಧನ

ಲಕ್ಷ್ಮೇಶ್ವರ ಪಟ್ಟಣದ ಆಸ್ಪತ್ರೆ ಆವರಣದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾಯಿಸಿ, ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಶನಿವಾರ ಮಧ್ಯಾಹ್ನದಿಂದ ರಾತ್ರಿ ಬಹುಹೊತ್ತಿನವರೆಗೂ ಪರಿಶೀಲನೆ ನಡೆಸಿದರು. ಆಸ್ಪತ್ರೆಯ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಇದೊಂದು ರಾಜಕೀಯ ಪ್ರೇರಿತ ದಾಳಿ. ಶಾಸಕ ಚಂದ್ರು ಲಮಾಣಿ ಅವರು ಅತ್ಯಂತ ಪ್ರಾಮಾಣಿಕರು. ಸದನದಲ್ಲಿ ಪ್ರತಿಪಕ್ಷದ ಶಾಸಕರಾಗಿ ಸರ್ಕಾರದ ವಿರುದ್ಧ ಗಟ್ಟಿ ಧ್ವನಿ ಎತ್ತುತ್ತಿದ್ದ ಕಾರಣ ಇದನ್ನು ಸಹಿಸದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರ ಕುತಂತ್ರದಿಂದ ಈ ದಾಳಿ ಮಾಡಿಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ತಡರಾತ್ರಿ 2 ಗಂಟೆಗೆ ಮೂವರನ್ನು ಗದಗ ಜಿಲ್ಲಾಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಈ ವೇಳೆಯೂ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ವಾಕ್ಸಮರ, ತಳ್ಳಾಟ ನಡೆಯಿತು. ಇದರಿಂದ ಕೆಲಹೊತ್ತು ಸ್ಥಳದಲ್ಲಿ ಹೈಡ್ರಾಮಾವೇ ಸೃಷ್ಟಿಯಾಯಿತು. ಆರೋಗ್ಯ ತಪಾಸಣೆ ನಂತರ ಭದ್ರತೆಯೊಂದಿಗೆ ಮೂವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆತರಲಾಯಿತು.

ಆಡಿಯೋ ವೈರಲ್: ಕ್ಷೇತ್ರದಲ್ಲಿ ಕಾಂಗ್ರೆಸ್–ಬಿಜೆಪಿ ನಡುವೆ ವಾಗ್ವಾದ ಭುಗಿಲೆದ್ದಿದೆ. ಚಂದ್ರು ಲಮಾಣಿಯನ್ನು ರಾಜಕೀಯವಾಗಿ ಮುಗಿಸಬೇಕು ಎಂಬ ಓರ್ವ ಸ್ವಾಮೀಜಿಯ ಆಡಿಯೋ ಬಹಿರಂಗವಾದ ಬೆನ್ನಲ್ಲೇ ಚಂದ್ರು ಲಮಾಣಿ ಮತ್ತು ಗುತ್ತಿಗೆದಾರ ವಿಜಯ್ ನಡುವೆ ನಡೆದಿದೆ ಎನ್ನಲಾದ ಸಂಭಾಷಣೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಆಡಿಯೋದಲ್ಲಿ ಕಾಮಗಾರಿ ಗುತ್ತಿಗೆಗಾಗಿ ಕಮಿಷನ್ ಪಡೆಯುವ ವಿಷಯಗಳೂ ಚರ್ಚೆಯಾಗಿವೆ. ನನಗೇ ಹಿಂಗೆ ಮಾಡಿದರೆ ನಿನ್ನ ಬೆನ್ನು ಮೂಳೆ ಮುರಿಸುತ್ತೇನೆ ಎಂದು ಶಾಸಕ ಚಂದ್ರು ಧಮ್ಕಿ ಹಾಕಿರುವುದು ಆಡಿಯೋದಲ್ಲಿದೆ ಎನ್ನಲಾಗಿದೆ.

ನಿಷೇಧಕ್ಕೆ ಚಿಂತನೆ

ಮತ್ತು ಮಾದಕ ದ್ರವ್ಯಗಳಿಗೆ ಒಡ್ಡಿಕೊಳ್ಳುವ ದುರ್ಬಲತೆಯನ್ನು ಹೆಚ್ಚಿಸುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ವಿಶೇಷವಾಗಿ ಮಕ್ಕಳು ಕೃತಕ ಬುದ್ಧಿಮತ್ತೆ ಮತ್ತು ಸಾಮಾಜಿಕ ಮಾಧ್ಯಮಗಳ ಜವಾಬ್ದಾರಿಯುತ ಬಳಕೆ ಖಾತ್ರಿಗೆ ರಾಜ್ಯವು ಮಧ್ಯಸ್ಥಗಾರರೊಂದಿಗೆ ಸಮಾಲೋಚನೆ ನಡೆಸುತ್ತಿರುವುದಾಗಿ ಐಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇತರ ರಾಜ್ಯಗಳಲ್ಲಿ ಇದೇ ರೀತಿಯ ಚರ್ಚೆಗಳು ನಡೆಯುತ್ತಿರುವುದರ ನಡುವೆ ಕರ್ನಾಟಕವೂ ಇಂತಹ ನಿರ್ಧಾರಕ್ಕೆ ಮುಂದಾಗಿದೆ. ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಮತ್ತು ಎಕ್ಸ್‌ನಂತಹ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳನ್ನು ಪ್ರವೇಶಿಸದಂತೆ 16 ವರ್ಷದೊಳಗಿನ ಮಕ್ಕಳನ್ನು ನಿರ್ಬಂಧಿಸುವ ಪ್ರಸ್ತಾಪವನ್ನು ಗೋವಾ ಸರ್ಕಾರ ಪರಿಶೀಲಿಸುತ್ತಿದೆ ಎಂದು ವರದಿಯಾಗಿದೆ. ಆಂಧ್ರಪ್ರದೇಶದಲ್ಲಿ ಅಪ್ರಾಪ್ತ ಮಕ್ಕಳ ಸಾಮಾಜಿಕ ಮಾಧ್ಯಮ ಬಳಕೆ ಮೇಲೆ ಕಠಿಣ ನಿರ್ಬಂಧ ಹೇರಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಶಿಕ್ಷಣ ಸಚಿವ ನಾರಾ ಲೋಕೇಶ್ ತಿಳಿಸಿದ್ದಾರೆ.

ದಾಖಲೆ ಬರೆದ ರಾಜ್ಯ ಕಾಂಗ್ರೆಸ್

ಅಲ್ಲದೇ ಪಟ್ಟಣದ ಹಾಸನ–ಮೈಸೂರು ರಸ್ತೆಯ ತೋಪಮ್ಮನ ದೇವಸ್ಥಾನದಿಂದ ತಾಲೂಕು ಕಚೇರಿವರೆಗೆ ಫ್ಲೆಕ್ಸ್ ಮತ್ತು ಬ್ಯಾನರ್ ಭರಾಟೆ ಜೋರಾಗಿತ್ತು.

ಕಾರ್ಯಕ್ರಮದಲ್ಲಿ ತಾಲೂಕು ಹಾಲುಮತ ಕುರುಬ ಸಮುದಾಯ ಮುಖಂಡರೊಟ್ಟಿಗೆ ಜಿಪಂ ಮಾಜಿ ಸದಸ್ಯ ಅಮಿತ್ ದೇವರಹಟ್ಟಿ ನೇತೃತ್ವದಲ್ಲಿ ನಿಖಿಲ್ ಕುಮಾರಸ್ವಾಮಿ ಹಾಗೂ ಸಾ.ರಾ.ಮಹೇಶ್ ಅವರಿಗೆ ಹಾವೇರಿ ಜಿಲ್ಲೆಯ ಮೈಲಾರಲಿಂಗೇಶ್ವರಸ್ವಾಮಿ ಕರಿ ಕಂಬಳಿ ಹೊದಿಸಿ, ಕುರಿಮರಿ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ್, ಮಾಜಿ ಶಾಸಕ ಕೆ.ಮಹದೇವ್, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು, ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ ಖ್ಯಾತ ಮೂಳೆ ತಜ್ಞ ಡಾ.ಸಾ.ರಾ. ಧನುಷ್, ಜಿಪಂ ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ ಮಾಜಿ ಸದಸ್ಯರಾದ ಅಚ್ಯುತಾನಂದ್, ಸಿ.ಜೆ.ದ್ವಾರಕೀಶ್, ಎಂ.ಟಿ. ಕುಮಾರ್, ಅಮಿತ್ ದೇವರಹಟ್ಟಿ, ಹೆಚ್.ಡಿ. ಕೋಟೆ ಜೆಡಿಎಸ್ ಮುಖಂಡ ಕೃಷ್ಣನಾಯಕ, ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಅಣ್ಣೇಗೌಡ, ಜೆಡಿಎಸ್ ಅಧ್ಯಕ್ಷರಾದ ಕುಮಾರ್, ರಾಜಣ್ಣ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜೆಡಿಎಸ್ ಯುವ ಮುಖಂಡ ಕೆ.ಮಧುಚಂದ್ರ, ಹೆಚ್.ಕೆ. ರಾಮು, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಯೋಗೇಶ್, ನಗರ ಜೆಡಿಎಸ್ ಅಧ್ಯಕ್ಷ ಸಂತೋಷ್ ಗೌಡ, ನಗರ ಕಾರ್ಯದರ್ಶಿ ಕೆ.ಉಮೇಶ್, ಜಿಲ್ಲಾ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಘಟಕದ ಅಧ್ಯಕ್ಷೆ ರಾಜಲಕ್ಷ್ಮೀ, ನಗರ ಜೆಡಿಎಸ್ ಮಹಿಳಾ ಘಟಕದ ಕಾರ್ಯದರ್ಶಿ ಭಾಗ್ಯಲಕ್ಷ್ಮಿ, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಗೀತಾ ಮಹೇಶ್, ಮಾಜಿ ಸದಸ್ಯರಾದ ಕೆಉಮೇಶ್, ಗಿರೀಶ್, ಸುಬ್ರಮಣ್ಯ, ರಾಜಾ ಶ್ರೀಕಾಂತ್, ತಾಲೂಕು ಜೆಡಿಎಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಕೃಷ್ಣಶೆಟ್ಟಿ, ಜೆಡಿಎಸ್ ಮುಖಂಡರಾದ ರವಿ, ಜಲೇಂದ್ರ, ಅನೀಫ್ ಗೌಡ, ರಮೇಶ್, ದಲಿತ ಮುಖಂಡರಾದ ನಾಗರಾಜ್, ಸೂರಿ, ಕಾಶಿ ಸೇರಿದಂತೆ ಸಾವಿರಾರು ಜೆಡಿಎಸ್ ಕಾರ್ಯಕರ್ತರು ಭಾಗವಹಿಸಿದ್ದರು.



ನಿಖಿಲ್ ಕುಮಾರಸ್ವಾಮಿ ಅವರಿಗೆ ಕಂಬಳಿ ಹೊದಿಸಿ, ಕುರಿಮರಿ ನೀಡಿ ಅಭಿನಂದಿಸಲಾಯಿತು.

> ತಂಬಾಕು ಬೆಲೆ ಕುಸಿತ ಸಂಬಂಧವಾಗಿ ಮಾಜಿ ಸಚಿವ ಸಾ.ರಾ. ಮಹೇಶ್, ಮಾಜಿ ಶಾಸಕ ಕೆ.ಮಹದೇವ್, ಯುವ ನಾಯಕ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ರೈತ ಮುಖಂಡರು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ, ಪರಿಹಾರ ಕಲ್ಪಿಸಲಾಗಿತ್ತು. ಆದರೆ ಮತ್ತೆ ತಂಬಾಕು ಬೆಲೆ ಕುಸಿತವಾಗಿದ್ದು, ಜೆಡಿಎಸ್ ಪಕ್ಷ ರೈತರ ಸಮಸ್ಯೆ ಬಗೆಹರಿಸಲು ಮುಂದಾಗಲಿದೆ. 3 ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ಸೋತರು ಅಂಜದೇ ನಾಡಿನ ಜನರ ಹಿತದೃಷ್ಟಿಯಿಂದ ಇಡೀ ರಾಜ್ಯದ ಪ್ರವಾಸ ಕೈಗೊಂಡಿದ್ದಾರೆ. ಜೆಡಿಎಸ್ ಹಳೇ ಮೈಸೂರು ಭಾಗದಲ್ಲಿ ಮಾತ್ರವಲ್ಲದೇ ಉತ್ತರ ಕರ್ನಾಟಕದಲ್ಲೂ ಜನರೊಂದಿಗೆ ಜನತಾದಳ ಹಾಗೂ ಸದಸ್ಯತ್ವ ನೋಂದಣಿ ಕಾರ್ಯಕ್ರಮ ನಡೆಸುತ್ತದೆ
> – ಜಿ.ಡಿ.ಹರೀಶ್‌ಗೌಡ, ಶಾಸಕ

ನಗದು ಪಾವತಿ ಏ.1ರಿಂದ ರದ್ದು

ಮೂಲಕ ನಡೆಯಲಿದೆ. ಫಾಸ್ಟ್ ಸ್ಟ್ಯಾಗ್ ನಲ್ಲಿ ಕೆಲವು ತಾಂತ್ರಿಕ ತೊಂದರೆಗಳಿದ್ದು, ಅದನ್ನು ಶೀಘ್ರ ಪರಿಹರಿಸಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮಿಲಿಂದ್ ವಾಬಾಲೆ ತಿಳಿಸಿದರು. ಎಲೆಕ್ಟ್ರಾನಿಕ್ ಟೋಲ್ ಸಂಗ್ರಹದ ಲಾಭವನ್ನು ಕ್ರೋಢೀಕರಿಸುವುದು, ಟೋಲ್ ಪ್ಲಾಜಾಗಳ ಕಾರ್ಯಾಚರಣೆಯ ದಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಸುಧಾರಿಸಲು ಪ್ರಾಧಿಕಾರ ನಗದು ರಹಿತ ಪಾವತಿಯನ್ನು ರದ್ದು ಮಾಡುತ್ತಿದೆ. ಸುಧಾರಿತ ಡಿಜಿಟಲ್ ಹಾಗೂ ಫಾಸ್ಟ್ ಟ್ಯಾಗ್ ಪಾವತಿಯಿಂದ ಟೋಲ್ ಪ್ಲಾಜಾಗಳಲ್ಲಿ ವಾಹನಗಳ ದಟ್ಟಣೆ ಕಡಿಮೆಯಾಗಿ ವಾಹನ ಸವಾರರು ಸುಲಭವಾಗಿ ಪ್ಲಾಜಾದಿಂದ ನಿರ್ಗಮಿಸಬಹುದು. ಅಲ್ಲದೆ ಟೋಲ್ ಪ್ಲಾಜಾಗಳ ವಹಿವಾಟಿನಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ಸ್ಥಿರತೆಯನ್ನು ಕಾಣಬಹುದು. ಜೊತೆಗೆ ವಾಹನ ಚಾಲಕರಿಗೆ ತ್ವರಿತ ಡಿಜಿಟಲ್ ಪಾವತಿ ಆಯ್ಕೆ ಒದಗಿಸುತ್ತದೆ. ನಗದು ರೂಪದಲ್ಲಿ ಪಾವತಿ ಮಾಡಿದರೆ ವಾಹನ ಚಾಲಕರು ದುಪ್ಪಟ್ಟು ಶುಲ್ಕ ಪಾವತಿ ಮಾಡಬೇಕಾಗಿತ್ತು. ಆದರೆ ಈಗ ಇಂತಹ ಯಾವುದೇ ನಷ್ಟ ಎದುರಾಗುವುದಿಲ್ಲ. ಅಲ್ಲದೆ ತಾವು ಪಾವತಿಸಿದ ಹಣಕ್ಕೆ ಖಚಿತ ಸಂದೇಶ ಮೊಬೈಲ್ ಮೂಲಕ ಸ್ಥಳದಲ್ಲೇ ಕೂಡ ದೊರೆಯುತ್ತದೆ.

ಮೈಸೂರು ಮಿತ್ರ ಸೋಮವಾರ 23 ಫೆಬ್ರವರಿ 2026

ಇಬ್ಬರು ಆರೋಪಿ ಬಂಧನ: 1.60 ಗ್ರಾಂ ಗಾಂಜಾ ವಶ




ಮೋಹನ ಎ.ಜಿ ಅಸ್ಸೈನಾರ್ ರಜಾಕ್

ಮಡಿಕೇರಿ: ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳ ಸಹಿತ 1.60 ಗ್ರಾಂ ಗಾಂಜಾವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿರಾಜಪೇಟೆಯ ಸುಣ್ಣದ ಬೀದಿಯ ಅಸ್ಸೈನಾರ್ ರಜಾಕ್ (43) ಹಾಗೂ ಬಾಳುಗೋಡು ಬಿಟ್ಟಂಗಾಲ ಗ್ರಾಮದ ಮೋಹನ ಎ.ಜಿ ಅಶೋಕ (42) ಆರೋಪಿಗಳಾಗಿದ್ದಾರೆ.

ಗ್ರಾಮಾಂತರ ಠಾಣಾ ವ್ಯಾಪ್ತಿಯ ಒಂಟಿಯಂಗಡಿ ರಸ್ತೆಯ ಪ್ರೌಢಶಾಲೆ ಮೈದಾನದ ಬಳಿಯ ಬಸ್ ತಂಗುದಾಣದಲ್ಲಿ ಇವರಿಬ್ಬರು ಗಾಂಜಾ ಮಾರಾಟಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ವಿರಾಜಪೇಟೆ ಉಪವಿಭಾಗದ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಪಿಎಸ್ಐಗಳಾದ ಎನ್.ಜೆ. ಲತಾ ವಾಣಿಶ್ರೀ ಬಿ.ಎಸ್, ಪ್ರಮೋದ್, ಎ.ಎಸ್.ಐ ಸೋಮಣ್ಣ ಕೆ.ಬಿ, ಹೆಚ್.ಸಿಗಳಾದ ಎಸ್.ಎಲ್. ನವೀನ್ ಕುಮಾರ್, ಎಂ.ಬಸವರಾಜು, ಅಬ್ದುಲ್ ಮಜೀದ್, ಕೆ.ಎ.ಹನೀಫ್, ಎಂ.ಎಸ್. ಬೋಪಣ್ಣ ರಾಧಾ, ಸಿಬ್ಬಂದಿಗಳಾದ ಮಹೇಶ್ ಎಸ್, ಶಿವಪ್ರಸಾದ್, ಎಸ್.ರಾಜೇಶ್ ಹಾಗೂ ರಾಘವೇಂದ್ರ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಪಕ್ಷದ ಬೆನ್ನೆಲುಬು ಬಲವಾಗಿರಬೇಕು ಅಂದರೆ ದಲಿತರನ್ನು ಮುಖ್ಯಮಂತ್ರಿ ಮಾಡಿ

ಸಮಾಜಕಲ್ಯಾಣ ಸಚಿವ ಮಹದೇವಪ್ಪ ಆಗ್ರಹ

ಮಡಿಕೇರಿ, ಫೆ.22– ದಲಿತರೇ ಕಾಂಗ್ರೆಸ್ ಪಕ್ಷದ ಬೆನ್ನೆಲುಬು. ಆ ಬೆನ್ನೆಲುಬು ಬಲವಾಗಬೇಕಾದರೆ ರಾಜ್ಯದಲ್ಲಿ ಮುಂದೆ ದಲಿತ ನಾಯಕರೇ ಸಿಎಂ ಆಗಬೇಕು ಎಂದು ಸಚಿವ ಹೆಚ್.ಸಿ ಮಹದೇವಪ್ಪ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ಮಡಿಕೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದಲಿತ ಸಿಎಂ ಕೂಗು ಇನ್ನೂ ಮುಟ್ಟಿಲ್ಲ. ಸಿದ್ದರಾಮಯ್ಯ ಇರುವ ತನಕ ಅವರೇ ಮುಖ್ಯಮಂತ್ರಿ, ನಂತರದ ದಿನಗಳಲ್ಲಿ ಎಲ್ಲರೂ ಸೇರಿ ದಲಿತರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಹೈಕಮಾಂಡ್ ಹಾಗೂ ಸಿದ್ದರಾಮಯ್ಯ ಅವರಿಂದ ಹಿಡಿದು ಎಲ್ಲರೂ ಸೇರಿ ಸೂಕ್ತವಾದ ದಲಿತ ನಾಯಕರಿಗೆ ಮುಖ್ಯಮಂತ್ರಿ ಹುದ್ದೆ ನೀಡಬೇಕು. ಇದರಲ್ಲಿ ಯಾವುದೇ ಗೊಂದಲಗಳು ಆಗಬಾರದು. ಅದು ಎಲ್ಲರ ಆಸೆ ಎಂದರು.



ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಚಿವರು, ಶಾಸಕರು ಮತ್ತು ಗಣ್ಯರು ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದರು.

ದಲಿತರು ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಇದ್ದಾರೆ. ಸದಾ ಕಾಂಗ್ರೆಸ್‌ನೊಂದಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಬೆನ್ನೆಲುಬು ಕಳೆದುಕೊಂಡು ಪಕ್ಷ ಬಲವಾಗಿ ಇರಲು ಸಾಧ್ಯವಿಲ್ಲ ಹೀಗಾಗಿ ಬೆನ್ನೆಲುಬು ಬಲಪಡಿಸಬೇಕು ಎಂದರೆ ದಲಿತ ನಾಯಕರು ಸಿಎಂ ಆಗಬೇಕೆಂಬ ತೀರ್ಮಾನ ಆಗಬೇಕು. ಹೈಕಮಾಂಡ್ ಕೂಡ ಇದನ್ನ ಗಮನದಲ್ಲಿಟ್ಟುಕೊಂಡಿದೆ ಎಂದು ಹೇಳಿದ್ದಾರೆ.

ಇನ್ನೂ ಡಿಕೆ ಶಿವಕುಮಾರ್ ಅವರು ಹೈಕಮಾಂಡ್ ತನಗೆ ಸರಿಯಾದ ರೀತಿಯಲ್ಲಿ ತನ್ನ ಶ್ರಮಕ್ಕೆ ಸ್ಥಾನಮಾನ ಕೊಡುತ್ತಾರೆ ಎಂಬ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಪ್ರತಿಯೊಬ್ಬರಲ್ಲೂ ಆಸೆ ಆಕಾಂಕ್ಷೆಗಳು ಇರುತ್ತವೆ. ಅದಕ್ಕೆ ತಪ್ಪು ಎಂದು ಹೇಳಲು ಆಗೋಲ್ಲ. ಆದರೆ ಪ್ರತಿಂಯೊಂದನ್ನು ಹೈಕಮಾಂಡ್ ಪರಾಮರ್ಶೆ ಮಾಡುತ್ತದೆ ಎಂದಿದ್ದಾರೆ.

ಪೊನ್ನಂಪೇಟೆಯಲ್ಲಿ ಹಿಂದೂ ಸಂಗಮ ಶೋಭಾಯಾತ್ರೆ



ಪೊನ್ನಂಪೇಟೆಯಲ್ಲಿ ಹಿಂದೂ ಸಂಗಮದ ಅಂಗವಾಗಿ ಶೋಭಾಯಾತ್ರೆ ನಡೆಯಿತು.

ಮಡಿಕೇರಿ,ಫೆ.22–ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮದಲ್ಲಿ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಹಿಂದೂ ಬಾಂಧವರು ಪಾಲ್ಗೊಂಡು ಯಶಸ್ವಿಗೊಳಿಸಿದರು.

ಹಿಂದೂ ಸಂಗಮ ಕಾರ್ಯಕ್ರಮದ ಅಂಗವಾಗಿ ಗ್ರಾಮದ ಮಹದೇವಸ್ವಾಮಿ ದೇವಸ್ಥಾನ, ಕನ್ನಂಬಾಡಿಯಮ್ಮ ದೇವಸ್ಥಾನ, ಹಾಗೂ ಕುಟ್ಟಿಚಾತ ದೇವಸ್ಥಾನದಲ್ಲಿ ಗ್ರಾಮಸ್ಥರೆಲ್ಲ ಸೇರಿ ದೇವರಿಗೆ ಪೂಜೆ ಸಲ್ಲಿಸಿ, ನಂತರ ಕಿರುಗೂರು ಕಿರಿಯ ಪ್ರಾಥಮಿಕ ಮೈದಾನದಲ್ಲಿ ಸೇರಿದ ಹಿಂದೂ ಬಾಂಧವರು ಗೋ ಪೂಜೆ ಸಲ್ಲಿಸಿ, ಮುಖ್ಯ ರಸ್ತೆಯಲ್ಲಿ ಶೋಭಾಯಾತ್ರೆ ನಡೆಸಿದರು.

ಸಾಂಪ್ರದಾಯಕ ವಾದ್ಯಗೋಷ್ಠಿಯೊಂದಿಗೆ ನಡೆದ ಮೆರವಣಿಗೆಯಲ್ಲಿ ಸಿಡಿಮದ್ದು ಪ್ರದರ್ಶನ ಗಮನ ಸೆಳೆಯಿತು. ಬಳಿಕ ಶೋಭಾಂಯಾತ್ರೆ ಮಹಿಳಾ ಸಮಾಜದ ಸಭಾಂಗಣದಲ್ಲಿ ಸಂಪನ್ನಗೊಂಡಿತು.

ಕೊದೇಂಗಡ ಸುಬ್ರಮಣಿ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿ ಮಾತ ನಾಡಿದ ಕೊದೇಂಗಡ ಸುಬ್ರಮಣಿ, ಹಿಂದೂ ಬಾಂಧವರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬರೂ ದೇಶ ಪ್ರೇಮ ಬೆಳೆಸಿಕೊಳ್ಳಬೇಕು. ಅಲ್ಲದೆ ಪ್ರತಿಯೊಬ್ಬರೂ ಮುಂದಿನ ಪೀಳಿಗೆಗೆ ಹಿಂದೂ ಧರ್ಮದ ಬಗ್ಗೆ ಅರಿವು ಮೂಡಿಸುವಂತಾಗಬೇಕು ಎಂದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮಂಗಳೂರು ಆದಿವಾಸಿ ವಿಭಾಗದ ಕಾರ್ಯ ಸಂಯೋಜಕ ಪ್ರವೀಣ್ ದೇರೆಬೈಲು ಮಾತನಾಡಿ, ಹಿಂದೂ ಧರ್ಮದ ಆಚಾರ, ವಿಚಾರ, ಪದ್ಧತಿ, ಪರಂಪರೆ, ಧರ್ಮ, ಬೆಳೆದು ಬಂದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಹಿಂದೂ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳು ದುಶ್ಚಟಗಳಿಗೆ ದಾಸರಾಗದೆ ಉತ್ತಮ ಹವ್ಯಾಸ ಬೆಳೆಸಿಕೊಳ್ಳಿ

ವಿರಾಜಪೇಟೆ: ವಿದ್ಯಾರ್ಥಿಗಳು ಜೀವನದಲ್ಲಿ ದುಶ್ಚಟಗಳಿಗೆ ದಾಸರಾಗದೆ ಉತ್ತಮ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಡಿವೈಎಸ್‌ಪಿ ಎಸ್.ಮಹೇಶ್ ಕುಮಾರ್ ಹೇಳಿದರು.

ಪಂಜರಪೇಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದ ಭಾರತದ 2600 ವರ್ಷ ನಂತರದ ಇತಿಹಾಸ ಪುರಾತನ ಹಾಗೂ ವಿಶ್ವದ 196 ದೇಶಗಳ ವಿವಿಧ ಕಾಲಘಟ್ಟದ ನಾಣ್ಯ ನೋಟುಗಳ ಬೃಹತ್ ಪ್ರದರ್ಶನ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದ ಅವರು, ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗಿ ಬೆಳೆಯಬೇಕು. ಹಿರಿಯರನ್ನು ಗೌರವಿಸುವ ಗುಣ, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ನಾಣ್ಯ ಪ್ರದರ್ಶನದಲ್ಲಿ ಅಪರೂಪದ ದೇಶ, ವಿದೇಶಗಳ, ಅರಸರ ಕಾಲದ ವೈವಿಧ್ಯಮಯ ನಾಣ್ಯ, ನೋಟುಗಳಿದ್ದು, ಇವು ನಮ್ಮ ಇತಿಹಾಸದ ಹೆಜ್ಜೆಗಳನ್ನು ತಿಳಿಸುತ್ತದೆ. ಆಯಾ ಕಾಲದ ಅರಸರ ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಅನಾವರಣ ಮಾಡುತ್ತವೆ. ನಾಣ್ಯಗಳು ಎಲ್ಲರನ್ನು ಆಕರ್ಷಿಸುತ್ತಿದೆ ಈ ಸಂಗ್ರಹದ ಹವ್ಯಾಸವನ್ನು ಇಂದಿನ ಪೀಳಿಗೆಯ ಮಕ್ಕಳು ಬೆಳೆಸಿಕೊಳ್ಳಬೇಕು ಎಂದರು.



ನಾಣ್ಯ ನೋಟುಗಳ ಬೃಹತ್ ಪ್ರದರ್ಶನವನ್ನು ವಿದ್ಯಾರ್ಥಿ ಮತ್ತು ಸಾರ್ವಜನಿಕರು ವೀಕ್ಷಿಸಿದರು.

ಸಾಹಿತಿ ರಜಿತ ಕಾರ್ಯಪ್ಪ ಮಾತನಾಡಿ ದೇಶದ ಶ್ರೀಮಂತಿಕೆಯು ಹಳೆಯ ನಾಣ್ಯಗಳಿಂದ ತಿಳಿಯುತ್ತದೆ. ವಿದ್ಯಾರ್ಥಿಗಳು ಜೀವನದಲ್ಲಿ ಗುರಿಯಿಟ್ಟುಕೊಂಡು ಸಾಧಿಸುವ ಛಲ ಹೊಂದಬೇಕು. ಪತ್ರಿಕೆಗಳನ್ನು ಓದುವ ಮೂಲಕ ತಮ್ಮ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕೆಂದರು.

ನಾಣ್ಯ, ನೋಟುಗಳ ಸಂಗ್ರಹಗಾರರಾದ ಅಜಯ್ ನಾರಾಯಣ ರಾವ್ ಮಾತನಾಡಿ, ಭಾರತವನ್ನು ಅನೇಕ ಅರಸರು, ವಿದೇಶಿ ಅಕ್ರಮಣಕಾರರು ಆಳಿದ್ದಾರೆ. ಅವರ ಕಾಲದ ಆಡಳಿತವನ್ನು ತಿಳಿಯಲು ಆಗಿನ ನಾಣ್ಯ ಮತ್ತು ನೋಟುಗಳು ಸಹಕಾರಿ. ಸಂಗ್ರಹದಲ್ಲಿ 196 ದೇಶಗಳ ನಾಣ್ಯ ಮತ್ತು ನೋಟುಗಳಿವೆ. ವಿದ್ಯಾರ್ಥಿಗಳು ಪ್ರದರ್ಶನ ವೀಕ್ಷಿಸಿ ಇತಿಹಾಸವನ್ನು ಅರಿತುಕೊಳ್ಳಬೇಕು. ಎಲ್ಲರನ್ನು ಗೌರವಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಮಾಜ ಸೇವಕ ರವಿ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ನಾಣ್ಯ ನೋಟುಗಳ ಪ್ರದರ್ಶನವನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡರು. ಶಿಕ್ಷಕರಾದ ದಿಲನ್, ಕವಿತಾ, ಭವ್ಯ, ಪದ್ಮನಾಭ, ಟಿ.ಕೆ. ರದೀಶ್, ಕೆ.ಆರ್. ವಿನೋದ್, ಎ.ಎನ್.ಸುದಿಶ್ ಮೋಹನ್, ಆರ್.ಶರವಣಕುಮಾರ್, ಮೇಕತಂಡ ಪ್ರವೀಣ್, ಕೆ.ಆರ್. ಶಶಿಧರ್ ಇದ್ದರು.

ನಾಳೆ ಕೊಡಗಿನ ಮಹಿಳೆಗೆ ಕ್ವೀನ್ ಎಲಿಜಬೆತ್ ಪ್ರಶಸ್ತಿ ಪ್ರದಾನ



ಮಡಿಕೇರಿ: ಜಿಲ್ಲೆಯ ಡಾ.ನವಿತಾ ಸೋಮಯ್ಯ ಅವರಿಗೆ ಯುನೈಟೆಡ್ ಕಿಂಗ್‌ಡಮ್‌ನ ಶೈಕ್ಷಣಿಕ ಮತ್ತು ಸಂಶೋಧನಾ ವಲಯದ ಅತ್ಯುನ್ನತ ರಾಷ್ಟ್ರೀಯ ಗೌರವವಾದ ಕ್ವೀನ್ ಎಲಿಜಬೆತ್ ಪ್ರಶಸ್ತಿ ದೊರೆತ್ತಿದೆ.

ಅತ್ಯುನ್ನತ ಶೈಕ್ಷಣಿಕ ಸಾಧನೆಗಾಗಿ ಕೊಡಗಿನ ಅಂತರರಾಷ್ಟ್ರೀಯ ಖ್ಯಾತ ವೈದ್ಯೆ ಹಾಗೂ ವಿಜ್ಞಾನಿ ಡಾ.ನವಿತಾ ಸೋಮಯ್ಯ ಅವರನ್ನು ಕಿಂಗ್ ಚಾರ್ಲ್ಸ್ III ಹಾಗೂ ಕ್ವೀನ್ ಕ್ಯಾಮಿಲ್ಲಾ ಅವರು ಪ್ರಶಸ್ತಿಯನ್ನು ಸ್ವೀಕರಿಸಲು ಐಸಿಆರ್ ತಂಡದ ಭಾಗವಾಗಿ ಆಹ್ವಾನಿಸಿದ್ದಾರೆ. ಪ್ರಶಸ್ತಿಗಾಗಿ ಆಯ್ಕೆಯಾದ ಐಸಿಆರ್‌ನ ಎಂಟು ವಿಜ್ಞಾನಿಗಳಲ್ಲಿ ಇವರೂ ಒಬ್ಬರು. ಇದೇ ಫೆ.24ರ ಬೆಳಿಗ್ಗೆ 11.30ಕ್ಕೆ ಸೈಂಟ್ ಜೇಮ್ಸ್ ಪ್ಯಾಲೇಸ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಕೊಡಗಿನ ಪ್ರತಿಭೆಗೆ ಜಾಗತಿಕ ಮನ್ನಣೆ: ಕನ್ನಂಡ ಪೊನಪ್ಪ ಸೋಮಯ್ಯ ಹಾಗೂ ಡಾ.ಕನ್ನಂಡ ನಿರ್ಮಲಾ ಸೋಮಯ್ಯ (ತಾಮನೆ ನಾಯಕಂಡ) ದಂಪತಿ ಪುತ್ರಿ ಡಾ.ನವಿತಾ ಸೋಮಯ್ಯ ರಾಷ್ಟ್ರೀಯ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 3 ನೇ ರ್‍ಯಾಂಕ್ ಪಡೆದು ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜಿಗೆ ಸೇರಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಸೇರಿದಂತೆ ಪ್ರಮುಖ ಜಾಗತಿಕ ಕೇಂದ್ರಗಳಲ್ಲಿ ಸುಧಾರಿತ ತರಬೇತಿ ಮತ್ತು ಸಂಶೋಧನೆಯನ್ನು ಮುಂದುವರಿಸಿದರು.

ಕ್ಯಾನ್ಸರ್ ಸಂಶೋಧನೆ ಮತ್ತು ಆರೈಕೆ: ಪ್ರಸ್ತುತ ಡಾ.ನವಿತಾ ಸೋಮಯ್ಯ ಅವರು ಐಸಿಆರ್‌ನಲ್ಲಿ ಕ್ಲಿನಿಷಿಯನ್ ವಿಜ್ಞಾನಿ ಹಾಗೂ ಗ್ರೂಪ್ ಲೀಡರ್ ಆಗಿದ್ದಾರೆ. ಲಂಡನ್‌ನ ರಾಯಲ್ ಮಾರ್ಸ್ಡೆನ್ ಎನ್‌ಎಚ್‌ಎಸ್ ಫೌಂಡೇಶನ್ ಟ್ರಸ್ಟ್ ನಲ್ಲಿ ಸಲಹೆಗಾರ ಕ್ಲಿನಿಕಲ್ ಆಂಕೊಲಾಜಿಸ್ಟ್ ಆಗಿದ್ದಾರೆ. ಸ್ತನ ರೇಡಿಯೊಥೆರಪಿಗಾಗಿ ಕ್ಲಿನಿಕಲ್ ಯುನಿಟ್ ಸಂಶೋಧನಾ ಅಧಿಕಾರಿಯಾಗಿದ್ದಾರೆ.

ಪಥಸಂಚಲನದಲ್ಲಿ ಭಾಗವಹಿಸಿದ್ದ ವರ್ಷಿಣಿಗೆ ಸನ್ಮಾನ



ವರ್ಷಿಣಿ ಪೂಜಾರಿಯನ್ನು ಕಾಂತೂರು ಮೂರ್ನಾಡು ಗ್ರಾಪಂ ಗೌರವಿಸಿತು.

ನಾಪೋಕ್ಲು, ಫೆ.22 (ದುಗ್ಗಳ)– ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಿದ್ದ ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿಗ್ಗಾಲು ಗ್ರಾಮದ ವರ್ಷಿಣಿ ಪೂಜಾರಿಯನ್ನು ಕಾಂತೂರು ಮೂರ್ನಾಡು ಗ್ರಾಪಂ ಗೌರವಿಸಿತು.

ಪಂಚಾಯತಿ ಮಾಜಿ ಅಧ್ಯಕ್ಷ ಕ್ಷಕುಶನ್ ರೈ ಮಾತನಾಡಿ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗಿಯಾಗುವುದು ಅಷ್ಟು ಸಾಧಾರಣ ವಿಷಂಯುವಲ್ಲ ಬೆರಳಣಿಕೆಯಷ್ಟು ಜನ ಮಾತ್ರ ಇಂಥ ಸಾಧನೆಯನ್ನು ಮಾಡಬಹುದು. ಅದರಲ್ಲಿ ನಮ್ಮ ಊರಿನವರೇ ಆಗಿರುವುದು ತುಂಬಾ ಹೆಮ್ಮೆಯ ವಿಷಯ ಎಂದರು. ಪಿಡಿಓ ಚಂದ್ರ ಮೌಳಿ, ಪುದಿಯೋಕಡ ರಮೇಶ್ರು ಮಾತನಾಡಿದರು.

ವರ್ಷಿಣಿ ಮೂರ್ನಾಡು ಗ್ರಾಮದ ಬಾಲು ಮತ್ತು ರೇಖಾ ದಂಪತಿಗಳ ಪ್ರಥಮ ಪುತ್ರಿಯಾಗಿದ್ದು, ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ 2ನೆ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದಾರೆ. ಇವರು 5ಕರ್ನಾಟಕ ನಾವೆಲ್ ಯೂನಿಟ್ ಎನ್‌ಸಿಸಿಯಲ್ಲಿ ಸೀನಿಯರ್ ವಿಂಗ್ ಆಲ್ ಇಂಡಿಯಾ ಕರ್ತವ್ಯ ಪಥ್‌ನಲ್ಲಿ ಆಯ್ಕೆ ಆಗಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

ವಿಶೇಷ ಪ್ರಾರ್ಥನೆ



ಅನಾರೋಗ್ಯಕ್ಕೊಳಗಾಗಿರುವ ವಾಲ್ಮೀಕಿ ಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿಯವರು ಶೀಘ್ರ ಗುಣಮುಖರಾಗಲಿ ಎಂದು ಗುಂಡ್ಲುಪೇಟೆಯ ವಾಲ್ಮೀಕಿ ಸಮುದಾಯದ ಮುಖಂಡರು ಪಟ್ಟಲದಮ್ಮನವರ ದೇವಾಲಯದಲ್ಲಿ ಶನಿವಾರ ಪೂಜೆ ಸಲ್ಲಿಸಿದರು. ಜನಾಂಗದ ಗಡಿ ಯಜಮಾನರಾದ ಎನ್.ಮಲ್ಲೇಶ್ ನೇತೃತ್ವದಲ್ಲಿ ಸಮುದಾಯದ ಮುಖಂಡರು, ಜನಪ್ರತಿನಿಧಿಗಳು ಪ್ರಾರ್ಥನೆ ಸಲ್ಲಿಸಿದರು.

ಇಂದು ಮಹದೇಶ್ವರ ಬೆಟ್ಟಕ್ಕೆ ಉಸ್ತುವಾರಿ ಸಚಿವರ ಭೇಟಿ




ಚಾಮರಾಜನಗರ, ಫೆ. 22– ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಫೆ. 23 ಮತ್ತು 24 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಫೆ. 23ರಂದು ಸಂಜೆ 6 ಗಂಟೆಗೆ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಅಲ್ಲಿಯೇ ವಾಸ್ತವ್ಯ ಹೂಡುವರು.

ಫೆ. 24ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವೀಕ್ಷಣೆ ಹಾಗೂ ಪರಿಶೀಲನೆ ನಡೆಸುವರು. ಮಧ್ಯಾಹ್ನ 2.30 ಗಂಟೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಹವಾಮಾನ ಮತ್ತು ಕುಡಿಯುವ ನೀರಿನ ಸಮಸ್ಯೆ ಹಾಗೂ ಕೆರೆಗೆ ನೀರು ತುಂಬಿಸುವ ಯೋಜನೆ, ಜಾನುವಾರುಗಳಿಗೆ ಮೇವಿನ ಲಭ್ಯತೆ, ಕಾಡ್ಗಿಚ್ಚು ಹಾಗೂ ಇತರೆ ವಿಪತ್ತು ನಿರ್ವಹಣೆ ಕುರಿತ ಸಭೆಯಲ್ಲಿ ಭಾಗವಹಿಸುವರು. ಸಂಜೆ 4 ಗಂಟೆಗೆ ಮೈಸೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಗುಂಡ್ಲುಪೇಟೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮಕ್ಕೆ ಸೂಚನೆ

ಪುರಸಭಾ ಮುಖ್ಯಾಧಿಕಾರಿಗಳಿಂದ ನೀರು ಸರಬರಾಜು ಸ್ಥಳ ಪರಿಶೀಲನೆ



ಗುಂಡ್ಲುಪೇಟೆ ಫೆ.22– ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಕಬಿನಿ ನದಿ ನೀರಿನ ಒಳ ಹರಿವು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಹಾಗೂ ಬೇಸಿಗೆ ಕಾಲ ಪ್ರಾರಂಭವಾಗುತ್ತಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ಮುಂಜಾಗ್ರತೆ ಕ್ರಮ ವಹಿಸುವಂತೆ ಮುಖ್ಯಾಧಿಕಾರಿ ಎಸ್.ಸರವಣ ಅವರಿಗೆ ಶಾಸಕ ಗಣೇಶ್ ಪ್ರಸಾದ್ ಸೂಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಎಸ್.ಸರವಣ ಮತ್ತು ಅಧಿಕಾರಿಗಳು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜಾಗುವ ದೇಬೂರು ಬಳಿ ಸ್ಥಳವನ್ನು ಪರಿಶೀಲಿಸಿ ನೀರಿನ ಹರಿವು ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಅದರಿಂದ ಡ್ಯಾಮಿನಿಂದ ಹೊಳೆಗೆ ಬರುವ ನೀರು ಕಡಿಮೆಯಾಗಿರುವ ಪ್ರಯುಕ್ತ ಶಾಸಕ ಗಣೇಶ್ ಪ್ರಸಾದ್ ನೀರಾವರಿ ನಿಗಮದ ಮುಖ್ಯ ಅಭಿಯಂತರರಾದ ಮಹೇಶ್ ಅವರಿಗೆ ಮೊಬೈಲ್ ಕರೆ ಮಾಡಿ ಡ್ಯಾಮ್ ನಿಂದ ನೀರು ಹೆಚ್ಚಿಗೆ ಬಿಡುವಂತೆ ಸೂಚಿಸಿರುತ್ತಾರೆ. ಇದರಿಂದ ಹೊಳಗೆ ಬರುವ ನೀರು ಹೆಚ್ಚಿನ ಪ್ರಮಾಣದಲ್ಲಿ ಬಂದಾಗ ದೇಬುರು ನೀರು ಎತ್ತುವ ಯಂತ್ರಕ್ಕೆ ಸಮರ್ಪಕ ವಾಗಿ ನೀರು ಸಿಗುವ ಪ್ರಮಾಣ ಜಾಸ್ತಿ ಆಗುತ್ತದೆ. ಆಗ ಸಾರ್ವಜನಿಕರಿಗೆ ಕುಡಿ ಯುವ ನೀರಿನ ಸಮಸ್ಯೆಂಯಾಗುವುದನ್ನು ತಪ್ಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದು ಮುಖ್ಯಾಧಿಕಾರಿ ಸರವಣ ಮೈಸೂರು ಮಿತ್ರಗೆ ತಿಳಿಸಿದ್ದಾರೆ. ಸ್ಥಳಕ್ಕೆ ಕಿರಿಯ ಇಂಜಿನಿಯರ್ ಮಂಜುನಾಥ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿದ್ದರು.

ಮನುಷ್ಯನ ಆತ್ಮೋದ್ಧಾರಕ್ಕಿರುವ ಪವಿತ್ರ ತಾಣಗಳೇ ದೇವಾಲಯಗಳು

ಧಾರ್ಮಿಕ ಸಭೆಯಲ್ಲಿ ಕನಕಪುರ ದೇಗುಲ ಮಠದ ಚನ್ನಬಸವ ಸ್ವಾಮೀಜಿ ಬಣ್ಣನೆ

ಚಾಮರಾಜನಗರ, ಫೆ.22– ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ದೇವಾಲಯಗಳಿಗೆ ಪವಿತ್ರ ಸ್ಥಾನವಿದ್ದು, ಅವು ಮನುಷ್ಯ ಆತ್ಮೋದ್ಧಾರಕ್ಕಿರುವ ಪವಿತ್ರ ತಾಣಗಳಾಗಿವೆ ಎಂದು ಕನಕಪುರ ದೇಗುಲ ಮಠದ ಚನ್ನಬಸವ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹರವೆ ಹೋಬಳಿ ಕೇತಹಳ್ಳಿ ಗ್ರಾಮದಲ್ಲಿ ನೂತನವಾಗಿ ಜೀರ್ಣೋದ್ಧಾರಗೊಂಡಿರುವ ಹೊನ್ನಾದೇವಿ ದೇವಾಲಯದ ಕಳಶಾರೋಹಣ ಹಾಗೂ ಬಸವೇಶ್ವರ ದೇವಾಲಯದ ಕಳಶಾರೋಹಣ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಚಿಕ್ಕದಾದರೂ ಗ್ರಾಮಸ್ಥರ ಮನಸ್ಸು ದೊಡ್ಡದೆಂಬುದಕ್ಕೆ ಹೊನ್ನಾದೇವಿ ದೇವಸ್ಥಾನ ನಿರ್ಮಾಣವೇ ಸಾಕ್ಷಿ. ಗ್ರಾಮದ ಜನ ಸುಖ–ಸಮೃದ್ಧಿಯಿಂದ ಜೀವನ ನಡೆಸುತ್ತಿರುವುದರಿಂದಲೇ ದೇವಾಲಯ ನಿರ್ಮಾಣಕ್ಕೆ ಉದಾರ ಮನಸ್ಸಿನಿಂದ ದೇಣಿಗೆ ನೀಡಿದ್ದಾರೆ ಎಂದರು.

ಮನುಷ್ಯ ಭಕ್ತಿಯ ಮೂಲಕ ತನ್ನ ನಿಜವಾದ ನಿಲುವನ್ನು ಕಾಣಲು ಸಾಧ್ಯವಾಗುವುದು ಭಗವಂತನ ಆರಾಧನೆ ಮೂಲಕ. 30 ವರ್ಷದ ಹಿಂದಿನ ಅಂಕಸ್ಥಾಪನೆ ಕಾರ್ಯ ಇಂದು ವಿಶೇಷವಾಗಿ ಕಾಣಿಸುತ್ತಿದೆ. ಬೆಂಗಳೂರಿನಂತಹ ಮಹಾನಗರದಲ್ಲೂ ಹೊನ್ನಾದೇವಿ ದೇವಾಲಯವಿದ್ದು, ಅಲ್ಲಿಯೂ ಹೊನ್ನಾದೇವಿ ಭಕ್ತರಿಂದ ಪೂಜೆಗೊಳ್ಳುತ್ತಿದ್ದಾಳೆ ಎಂದರು.

ನುಡಿನಮನ ಸಲ್ಲಿಸಿದ ಮೈಸೂರು ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ ಮಾತನಾಡಿ, 12ನೇ ಶತಮಾನದ ಬಸವಾದಿ ಶರಣರಲ್ಲಿ ಧಾರ್ಮಿಕ ಚಿಂತನೆ ಭಾವನೆ ಇತ್ತು, ದೇವಸ್ಥಾನಗಳಿ ರಲಿಲ್ಲ. ಇಂದು ಪ್ರತಿ ಗ್ರಾಮದಲ್ಲೂ ದೇವಾಲಯಗಳಿವೆ. ಅದರೆ ಅನ್ಯಾಯ, ಭ್ರಷ್ಟಾಚಾರ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ತೋರಿಕೆಯ ಭಕ್ತಿ ಇರಬಾರದು, ಅದು ಒಳಗಿನ ಭಕ್ತಿಯಾಗಬೇಕು. ಭಗವಂತನಿಗಾಗಿ ಮಾಡಿದ ಭಕ್ತಿ ನೂರು ಪಟ್ಟು ಉತ್ತಮವಾಗಿರುತ್ತದೆ ಎಂದರು.



ಹೊನ್ನಾದೇವಿ ದೇವಾಲಯದ ಕಳಶಾರೋಹಣ ಹಾಗೂ ಬಸವೇಶ್ವರ ದೇವಾಲಯದ ಕಳಶಾರೋಹಣ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ಗುಂಡ್ಲುಪೇಟೆ ಶಾಸಕ ಎಚ್.ಎಂ. ಗಣೇಶಪ್ರಸಾದ್ ಮಾತನಾಡಿ, ಗ್ರಾಮಸ್ಥರ ಒಗ್ಗಟ್ಟು ಹಾಗೂ ಶ್ರಮದ ಪ್ರತಿಫಲವಾಗಿ ಹಳೆಯ ದೇವಾಲಯವೊಂದು ಜೀರ್ಣೋದ್ಧಾರಗೊಂಡಿದೆ. ಇದೊಂದು ಉತ್ತಮ ಬೆಳವಣಿಗೆ, ಈ ಭಾಗದ ಜಾನುವಾರುಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕೆರೆಗಳಿಗೆ ನೀರು ತುಂಬಿಸಲು ಕ್ರಮವಹಿಸಲಾಗುವುದು ಎಂದರು.

ಸುತ್ತೂರು ಶ್ರೀಶಿವರಾತ್ರಿದೇಶಿ ಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಗ್ರಾಮದ ಮಹದೇವಪ್ರಸಾದ್ ಜಮೀನಿನಲ್ಲಿ ದೊರೆತ ಶಿಲಾಶಾಸನಗಳು, ಗ್ರಾಮಕ್ಕಿರುವ ಇತಿಹಾಸದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೋಪುರ ವಿನ್ಯಾಸಕಾರರಾದ ಶಿಲ್ಪಿ ಕಾಳಿದಾಸ, ಸುಂದರಂ, ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತಮಠದ ಚನ್ನಬಸವ ಸ್ವಾಮೀಜಿ, ಪಡುಗೂರು ಅಡವಿ ಮಠದ ಶಿವಲಿಂಗೇಂದ್ರ ಸ್ವಾಮೀಜಿ, ಮರಿಯಾಲ ಮುರುಘರಾಜೇಂದ್ರ ಸ್ವಾಮೀಜಿ, ಮಹಾಸಂಸ್ಥಾನ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಮೂಡುಗೂರು ಮಠದ ಉದ್ದಾನ ಸ್ವಾಮೀಜಿ, ಹಂಗಳ ಹಳ್ಳದ ಮಠದ ಜಡೇಸ್ವಾಮೀಜಿ, ಚಿಕ್ಕತುಪ್ಪೂರು ಶಿವಪೂಜಾಮಠದ ಚನ್ನವೀರ ಸ್ವಾಮೀಜಿ, ಆಲಹಳ್ಳಿ ಪಟ್ಟದಮಠದ ಮುಮ್ಮಡಿ ಬಸಪ್ಪಸ್ವಾಮೀಜಿ ಹಾಜರಿದ್ದರು.

'ಸಂಸ್ಕಾರ' ಸಂಸ್ಕೃತಿಯ ಪುನರುತ್ಥಾನ

ಮನುಷ್ಯ ನೋಡುವ ಭಾವಕ್ಕೆ ದೊರಕುವವನೇ ಭಗವಂತ. ಭಗವಂತನ ಸೃಷ್ಟಿಯನ್ನು ಅನುಭವಿಸಬಹುದೇ ಹೊರತು ಕಾಣಲು ಸಾಧ್ಯವಿಲ್ಲ ಎಂದು ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಭಗವಂತನಿಗೆ ಯಾವುದೇ ರೂಪ ಇಲ್ಲ. ನಾವು ಹೇಗೆ ಭಗವಂತನನ್ನು ಗ್ರಹಿಸುತ್ತೇವೆಯೋ ಆ ಭಾವಕ್ಕೆ ತಕ್ಕಂತೆ ಭಗವಂತ ಇರುತ್ತಾನೆ. ಯಾವುದೇ ಆಚರಣೆಯಾಗಿರಲಿ. ಅದರ ಹಿಂದಿನ ಸತ್ಯಾಸತ್ಯತೆ ಅರ್ಥಮಾಡಿಕೊಂಡಿರಬೇಕು, ಸಂಸ್ಕಾರ ಎಂದರೆ ಸಂಸ್ಕೃತಿಯ ಪುನರುತ್ಥಾನ. ಆಚರಣೆಯನ್ನು ಅರ್ಥಮಾಡಿಕೊಂಡು ಆಚರಿಸದಿದ್ದರೆ ಅದು ಮೌಢ್ಯವಾಗುತ್ತದೆ. ಅರ್ಥ ಮಾಡಿಕೊಂಡರೆ ಮೌಢ್ಯಕ್ಕೆ ಜಾಗವಿಲ್ಲ. ಸಂಸ್ಕಾರ ಸಂಸ್ಕೃತಿ ನೀಡುಮಂತವು ದೇವಾಲಯಗಳು. ಭಗವಂತನನ್ನು ಸ್ಮರಿಸಿದರೆ ಸಂಸ್ಕಾರಯುತ ಜೀವನ ನಡೆಸಲು ಸಾಧ್ಯವಾಗುತ್ತದೆ. ಯಾರಲ್ಲಿಯೂ ದ್ವೇಷಾಸೂಯೆ ಪಡದೇ ಪ್ರೀತಿಮಾಡುವ ಭಾವನೆಯನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅರೆಕಾಲಿಕ ಕಾನೂನು ಸ್ವಯಂ ಸೇವಕರ ತರಬೇತಿ

ಚಾಮರಾಜನಗರ, ಫೆ22– ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಬೆಂಗಳೂರಿನ ಔಟ್ಲಾಡ್ ಇಂಡಿಯಾ ಫೌಂಡೇಶನ್ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿ ಸಹಯೋಗದಲ್ಲಿ 2025–26ನೇ ಸಾಲಿನ ಹೊಸ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಫೆ23 ರಿಂದ 26ರವರೆಗೆ ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮವನ್ನು ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಜಿ. ಪ್ರಭಾವತಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶ್ರೀರೂಪ ಅಧ್ಯಕ್ಷತೆ ವಹಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಯೋಜನಾ ಸಂಯೋಜಕರಾದ ಮೀಮಾಂಸ ಸಿಂಗ್ ಅವರು ಉಪಸ್ಥಿತರಿರುವರು. ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಹೆಚ್. ವೆಂಕಟೇಶ್, ಜಾಮೀ ಜಾಯ್, ಸಿದ್ಧಾರ್ಥ್ ಪಾಟೀಲ್ ತರಬೇತಿ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ಚಾಮರಾಜನಗರದಲ್ಲಿ ಕೆಂಗಲ್ ಹನುಮಂತಯ್ಯ ಜಯಂತ್ಯೋತ್ಸವ

ಕೆಂಗಲ್ ಹನುಮಂತಯ್ಯ ದಕ್ಷ ಆಡಳಿತಗಾರರು

ಚಾಮರಾಜನಗರ.ಫೆ.22– ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಒಬ್ಬ ದಕ್ಷ ಆಡಳಿತಗಾರರಾಗಿ ಭವ್ಯ ವಿಧಾನಸೌಧ ನಿರ್ಮಿಸಿದರು ಎಂದು ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ ಮಂಜೇಗೌಡ ಹೇಳಿದರು.

ನಗರದ ಕೊಳದ ಬೀದಿಯ ಒಕ್ಕಲಿಗ ಸಮುದಾಯ ಭವನದಲ್ಲಿ ಚಾಮರಾಜನಗರ ಟೌನ್ ಒಕ್ಕಲಿಗ ಸಂಘದ ವತಿಯಿಂದ ನಡೆದ ಕರ್ನಾಟಕ ಏಕೀಕರಣ ರೂವಾರಿ, ವಿಧಾನಸೌಧ ನಿರ್ಮಾತೃ ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯ ಅವರ 118ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ರಷ್ಯಾದ ನಿಯೋಗವೊಂದರಲ್ಲಿ ವ್ಯಂಗ್ಯದ ಮಾತುಗಳಿಂದ ವಿಚಲಿತರಾದ ಅವರು, ದಕ್ಷಿಣ ಭಾರತದ ವಾಸ್ತುಶಿಲ್ಪ ಶೈಲಿಯಲ್ಲಿ ವಿಧಾನಸೌಧ ನಿರ್ಮಿಸುವ ಪಣತೊಟ್ಟು 1956ರಲ್ಲಿ ಪೂರ್ಣಗೊಳಿಸಿದರು ಎಂದರು.

ಆಧುನಿಕ ಶಿಲ್ಪಿಯಾಗಿದ್ದು, ಕರ್ನಾಟಕ ಏಕೀಕರಣದ ಪ್ರಮುಖ ರೂವಾರಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ದಕ್ಷ ಆಡಳಿತಗಾರರಾಗಿ, ಗ್ರಾಮೀಣಾಭಿವೃದ್ಧಿಯ ಹರಿಕಾರರಾಗಿ ಸೇವೆ ಸಲ್ಲಿಸಿದರು. ಕನ್ನಡನಾಡು ನಿರ್ಮಾಣದ ಕನಸು ಕಂಡಿದ್ದ ಅವರು ರೈಲ್ವೆ ಸಚಿವರಾಗಿಯೂ ಉತ್ತಮ ಸೇವೆ ಸಲ್ಲಿಸಿದರು. ನಂತರ ಕಾನೂನು ಸಚಿವ ರಾಗಿಯೂ ದಕ್ಷ ಆಡಳಿತ ನೀಡಿದ್ದರು. ಅವರನ್ನು ಸ್ಮರಿಸಿಕೊಳ್ಳು ವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.



ಚಾಮರಾಜನಗರದ ಕೊಳದ ಬೀದಿಯ ಒಕ್ಕಲಿಗ ಸಮುದಾಯ ಭವನದಲ್ಲಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ 118ನೇ ಜಯಂತ್ಯೋತ್ಸವ ಆಚರಿಸಲಾಯಿತು.

ತಾಲೂಕು ಒಕ್ಕಲಿಗರ ಸಂಘದ ಗೌರಾಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ಮಾತನಾಡಿ, ಕೆಂಗಲ್ ಹನುಮಂತಯ್ಯ ಅವರು ನಿರ್ಮಿಸಿರುವ ಭವ್ಯ ವಿಧಾನಸೌಧ ದೇಶದಲ್ಲಿ ಎಲ್ಲೂ ಇಲ್ಲ. ಒಕ್ಕಲಿಗರು ರಾಜ್ಯವನ್ನಾಳುತ್ತೇವೆ ಎನ್ನುವುದು ಗಂಗರ ಕಾಲದಿಂದಲೂ ಬಂದಿದೆ. ತಲಕಾಡಿನ ಗಂಗರು ಕಾಲದಿಂದಲೂ ಒಕ್ಕಲಿಗರಿಗೆ ಆಡಳಿತ ನಡೆಸುವ ಶಕ್ತಿ, ಸಾಮರ್ಥ್ಯ ಇದೆ. ತದನಂತರ ನಾಡುಪ್ರಭು ಕೆಂಪೇಗೌಡರು ಸಮುದಾಯಕ್ಕೆ ಒಂದು ಶಕ್ತಿ ತುಂಬಿದ್ದರು. ಬೆಂಗಳೂರು ನಿರ್ಮಿಸಿ ಜಗತ್ತೆ ತಿರುಗಿ ನೋಡುವಂತೆ ಮಾಡಿದರು. ಒಕ್ಕಲಿಗ ಸಮುದಾಯ ಇತರ ಸಮುದಾಯಗಳ ಜೊತೆ ಹೊಂದಾಣಿಕೆಯಿಂದ, ಸಹಬಾಳ್ವೆಯಿಂದ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಮೈಸೂರು ಮತ್ತು ಚಾಮರಾಜನಗರ ಒಕ್ಕಲಿಗರ ಸಂಘದ ನಿರ್ದೇಶಕ ಪಣ್ಯದಹುಂಡಿ ರಾಜು, ತಾಲೂಕು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಚಿನ್ನು ಮತ್ತು ಮಣಿಮಾಸ್ಟರ್, ಮಹೇಶ್ ಗೌಡ, ಸಿ.ಎನ್.ಮಹೇಶ್, ಪ್ರಧಾನ ಕಾರ್ಯದರ್ಶಿ ಅರುಣ ಕುಮಾರ್‌ಗೌಡ, ಖಜಾಂಚಿ ನಾಗೇಂದ್ರ ಗೌಡ, ಇತರರು ಹಾಜರಿದ್ದರು.

ದಾರಿಪುರದಲ್ಲಿ ದೇವಾಲಯಗಳು ಲೋಕಾರ್ಪಣೆ



ದೇವಾಲಯಕ್ಕೆ ಆಗಮಿಸಿದ ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.22– ತಾಲೂಕಿನ ದಾರಿಪುರ ಗ್ರಾಮದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ ಮತ್ತು ಮಹಾಗಣಪತಿ ದೇವಾಲಯಗಳು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಭಾನುವಾರ ಲೋಕಾರ್ಪಣೆಗೊಂಡಿತು.

ಶನಿವಾರ ರಾತ್ರಿ ನೂತನ ದೇವಾಲಯದಲ್ಲಿ ಹೋಮ–ಹವನಗಳು ನಡೆಯಿತು. ಭಾನುವಾರ ಕುಂಭಾಭಿಷೇಕ, ದೇವರ ವಿಗ್ರಹಗಳಿಗೆ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿ, ಗೋಪುರಕ್ಕೆ ಕಳಸ ಪ್ರತಿಷ್ಠಾಪಿಸಲಾಯಿತು.

ಮಂಟೇಸ್ವಾಮಿ ದೇವರ ಮೂರ್ತಿ ಮತ್ತು ಸಿದ್ದಪ್ಪಾಜಿ ಕಂಡಾಯವನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಛತ್ರಿ ಚಾಮರಗಳು ಮತ್ತು ಬಿರುದು ಬಾವಲಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಮಂಗಳವಾದ್ಯ ಮತ್ತು ತಮಟೆ ಸದ್ದಿಗೆ ವೀರಗಾಸೆ ನೃತ್ಯ ನಡೆಯಿತು. ನಂದಿಧ್ವಜ ಕಂಬ ಕುಣಿತ ಮತ್ತು ಸಾಂಸ್ಕೃತಿಕ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿದವು. ಬೊಪ್ಪೇಗೌಡನಪುರ ಮಠದ ಬಸವ ಮತ್ತು ಬಿರುದುಗಳು ದಾರಿಪುರಕ್ಕೆ ಆಗಮಿಸಿದ್ದವು. ಗ್ರಾಮಸ್ಥರು ವಿಶೇಷ ಪೂಜೆ ಸಲ್ಲಿಸಿದರು. ನೆರೆದಿದ್ದ ಸಾವಿರಾರು ಭಕ್ತರಿಗೆ ದಾಸೋಹ ನಡೆಯಿತು.

ಶಾಸಕ ಜಿ.ಟಿ.ದೇವೇಗೌಡ, ಮೈಸೂರು ಕುದೇರು ಮಠದ ಗುರುಶಾಂತ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತ ಮಠದ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಬರಡನಪುರ ಗುರುಮಹಾಂತೇಶ್ವರ ಮಠದ ಪೀಠಾಧ್ಯಕ್ಷ ಪರಶಿವಮೂರ್ತಿ ಸ್ವಾಮೀಜಿ, ಪುರ ಮಠದ ಚಂದ್ರಶೇಖರ ಸ್ವಾಮೀಜಿ, ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಗ್ರಾಪಂ ವ್ಯಾಪ್ತಿಯ ವಿವಿಧ ಪಕ್ಷಗಳ ಮುಖಂಡರು ದೇವಾಲಯಕ್ಕೆ ಆಗಮಿಸಿದ್ದರು. ಗಣ್ಯರನ್ನು ಗ್ರಾಮದ ವತಿಯಿಂದ ಸನ್ಮಾನಿಸಲಾಯಿತು. ಫೆ.23ರಂದು ಬೆಳಗ್ಗೆ ಗುರುಕರೂರು ಸ್ವಾಮಿಯವರ ರಥೋತ್ಸವ ಮತ್ತು ಪುಣ್ಯಾರಾಧನೆ ನಡೆಯಲಿದೆ.

ಇಂದು, ನಾಳೆ ಶ್ರೀಮಾರಮ್ಮ ದೇವಸ್ಥಾನ ಉದ್ಘಾಟನೆ

ಹುಣಸೂರು, ಫೆ.22– ತಾಲೂಕಿನ ಹೈರಿಗೆ ಗ್ರಾಮದಲ್ಲಿ ಫೆ.23, 24ರಂದು ಶ್ರೀಮಾರಮ್ಮ ದೇವಸ್ಥಾನದ ಉದ್ಘಾಟನೆ, ವಿಗ್ರಹ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಕಾರ್ಯಕ್ರಮದಲ್ಲಿ ಗಾವಡಗೆರೆ ಮಠದ ಶ್ರೀನಟರಾಜಸ್ವಾಮಿ, ಕೆ.ಆರ್.ನಗರದ ಕಾಗಿನೆಲೆ ಮಠದ ಶಿವಾನಂದಸ್ವಾಮಿ ಭಾಗವಹಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ವಹಿಸಲಿದ್ದಾರೆ. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ಎಂಎಲ್‌ಸಿ ಹೆಚ್.ವಿಶ್ವನಾಥ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

4 ತಿಂಗಳ ನಂತರ ಬಂಡೀಪುರ, ನಾಗರಹೊಳೆಯಲ್ಲಿ

ಸಫಾರಿ ಆರಂಭ

ಸಫಾರಿ ಸಮಯ, ವಾಹನಗಳ ಸಂಖ್ಯೆ ಶೇ.50ರಷ್ಟು ಕಡಿತ

- ಮೊಬೈಲ್ ನಿಷೇಧ, ಪೊಲೀಸ್ ಬೆಂಗಾವಲು
- ಮೊದಲ ದಿನವೇ ಹುಲಿ, ಆನೆ, ಚಿರತೆ ದರ್ಶನ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಸಂಜೆ ಸಫಾರಿ ಆರಂಭವಾಗಿದ್ದು, ಪೊಲೀಸರ ಭದ್ರತೆಯಲ್ಲಿ ಸಫಾರಿ ವಾಹನ ತೆರಳಿದವು.

ಮೈಸೂರು, ಫೆ.22(ಎಂಟಿವೈ)– ಮಾನವ ಮತ್ತು ವನ್ಯಜೀವಿ ಸಂಘರ್ಷದಿಂದಾಗಿ ನಾಲ್ಕು ತಿಂಗಳಿಂದ ಸ್ಥಗಿತಗೊಂಡಿದ್ದ ಸಫಾರಿ ಪರ ಮತ್ತು ವಿರೋಧದ ಪ್ರತಿಭಟನೆ ನಡುವೆ ಭಾನುವಾರ (ಫೆ.22) ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಅಧಿಕೃತವಾಗಿ ಆರಂಭವಾಗಿದ್ದು, ಮೊದಲ ದಿನವೇ ಹುಲಿ, ಆನೆ, ಚಿರತೆ ಸೇರಿದಂತೆ ವಿವಿಧ ಬಗೆಯ ಪ್ರಾಣಿಗಳು ಪ್ರವಾಸಿಗರಿಗೆ ಮುದ ನೀಡಿದವು.

ಮೈಸೂರು ಜಿಲ್ಲೆಯ ಸರಗೂರು ತಾಲೂಕು ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಮತ್ತು ಮಾನವ ಸಂಘರ್ಷದಿಂದ ಮೂವರು ರೈತರು ಬಲಿಯಾಗಿದ್ದರು. ಈ ಹಿನ್ನೆಲೆಯಲ್ಲಿ ನ.7ರಂದು ಸಫಾರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು. ನಾಲ್ಕು ತಿಂಗಳಿಂದ ಸಫಾರಿ ಬಂದ್ ಆಗಿದ್ದ ಹಿನ್ನೆಲೆಯಲ್ಲಿ ಪ್ರಾಸೋದ್ಯಮಕ್ಕೆ ಹಿನ್ನಡೆಯಾಗಿತ್ತಲ್ಲದೇ, ಸ್ಥಳೀಯ ರೈತರಿಗೆ ತೊಂದರೆಯಾಗಿದ್ದ ಹಿನ್ನೆಲೆಯಲ್ಲಿ ಸಫಾರಿ ಪುನರಾರಂಭಿಸುವಂತೆ ವ್ಯಾಪಕ ಒತ್ತಾಯ ಕೇಳಿಬಂದಿತು.

3 ದಿನದ ಹಿಂದೆಯೇ ಅರಣ್ಯ ಸಚಿವ ಬಿ.ಈಶ್ವರ ಖಂಡ್ರೆ ಅವರು ಸಫಾರಿ ಆರಂಭಕ್ಕೆ ಸಂಬಂಧಿಸಿದಂತೆ ತಜ್ಞರ ಸಮಿತಿ ನೀಡಿದ ವರದಿಯನ್ನು ಪರಾಮರ್ಶಿಸಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಫೆ.21ರಿಂದ ಕೆಲವು ಷರತ್ತು ಮತ್ತು ಮಾರ್ಪಾಡಿನೊಂದಿಗೆ ಸಫಾರಿ ಪುನರಾರಂಭಿಸಲು ಆದೇಶಿಸಿದ್ದರು. ಆದೇಶ ಪ್ರತಿ ಅಧಿಕೃತವಾಗಿ ಕೈಸೇರಿದ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಮಧ್ಯಾಹ್ನದಿಂದ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಬೆಳಗ್ಗಿನಿಂದಲೇ ಸಫಾರಿ ಆರಂಭವಾಗಿದೆ.

ಶೇ.50ರಷ್ಟು ಸಫಾರಿ ಕಡಿತ: ಹೊಸ ನಿಯಮದೊಂದಿಗೆ ಪುನರಾರಂಭವಾದ ಸಫಾರಿಯಲ್ಲಿ ಸಮಯ ಮತ್ತು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. ಶೇ.50ರಷ್ಟು ವಾಹನಗಳು ಮಾತ್ರ ಸಫಾರಿಗೆ ಪ್ರವಾಸಿಗರನ್ನು ಕರೆದೊಯ್ಯಲು ಬಳಸಲಾಗುತ್ತಿದೆ. ಈ ಹಿಂದೆ ಇದ್ದ ಸಫಾರಿ ಅವಧಿಯನ್ನು ಕಡಿಮೆ ಮಾಡಲಾಗಿದೆ. ಬಂಡೀಪುರದಲ್ಲಿ ಅರಣ್ಯ ಇಲಾಖೆಯ 19, ಜೆಎಲ್‌ಆರ್ ಸಂಸ್ಥೆಯ 12 ವಾಹನ ಸೇರಿದಂತೆ ದಿನಕ್ಕೆ 31 ವಾಹನಗಳಿಗೆ ಮಾತ್ರ ಸಫಾರಿಗೆ ಅವಕಾಶ ನೀಡಲಾಗಿದೆ. ಸಫಾರಿ ಅವಧಿ ಬೆಳಗ್ಗೆ ಎರಡೂವರೆ ಗಂಟೆ, ಸಂಜೆ ಎರಡೂವರೆ ಗಂಟೆ ಅವಕಾಶ ನೀಡಲಾಗಿದ್ದು, ಅರಣ್ಯ ಇಲಾಖೆಯ ಸಫಾರಿ ಬೆಳಗ್ಗೆ 6.30ರಿಂದ 9 ಗಂಟೆವರೆಗೂ ಸಂಜೆ 3.30ರಿಂದ 6 ಗಂಟೆಯವರೆಗೂ ನಡೆಯಲಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಕನಕೋಟೆ (ದಮ್ಮನಕಟ್ಟೆ) ಸಫಾರಿ ಕೇಂದ್ರದಿಂದ ಅರಣ್ಯ ಇಲಾಖೆಯ 13 ಜೆಎಲ್‌ಆರ್‌ನ 23 ವಾಹನ ಸೇರಿದಂತೆ ಒಟ್ಟು 36 ವಾಹನಗಳು ಸಫಾರಿಗೆ ತೆರಳುವುದಕ್ಕೆ ಅವಕಾಶ ನೀಡಲಾಗಿದ್ದು, ಈ ವಾಹನಗಳನ್ನು ಎ ಮತ್ತು ಬಿ ಜೋನ್ ಎಂದು ಪ್ರತ್ಯೇಕಿಸಿ ಬೇರೆ ಬೇರೆ ಸಫಾರಿ ಮಾರ್ಗದಲ್ಲಿ ತೆರಳುವಂತೆ ಸೂಚನೆ ನೀಡಲಾಗಿದೆ. ಈ ಭಾಗದಿಂದ ಬೆಳಗ್ಗೆ 6.30ರಿಂದ 9.30, ಸಂಜೆ 3 ರಿಂದ 6 ಗಂಟೆವರೆಗೆ ಸಫಾರಿ ನಡೆಯಲಿದೆ. ನಾಗರಹೊಳೆಯ ನಾಣಚ್ಚಿ ಮತ್ತು ವೀರನಹೊಸಳ್ಳಿ ಸಫಾರಿ ಕೇಂದ್ರದಿಂದ ಅರಣ್ಯ ಇಲಾಖೆಯ 6, ಜೆಎಲ್‌ಆರ್ ಸಂಸ್ಥೆಯ 8 ವಾಹನ ಸೇರಿ 14 ವಾಹನಗಳು ಸಫಾರಿಗರಿಗೆ ಲಭ್ಯವಿರುತ್ತದೆ. ಇಲ್ಲಿ ಬೆಳಗ್ಗೆ 7ರಿಂದ 9, ಮಧ್ಯಾಹ್ನ 3ರಿಂದ 5 ಗಂಟೆಯವರೆಗೆ ಸಫಾರಿ ಅವಧಿ ನಿಗದಿ ಮಾಡಲಾಗಿದೆ.

ಮೊಬೈಲ್ ಬಳಕೆ ನಿಷೇಧ: ಬಂಡೀಪುರ, ನಾಗರಹೊಳೆಯಲ್ಲಿ ಪುನರಾರಂಭವಾಗಿರುವ ಸಫಾರಿಯಲ್ಲಿ ಇನ್ನು ಮುಂದೆ ಪ್ರವಾಸಿಗರು ಮೊಬೈಲ್ ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧಿಸಲಾಗಿದೆ. ತಮ್ಮ ತಮ್ಮ ವಾಹನಗಳಲ್ಲಿ ಮೊಬೈಲ್ ಇಟ್ಟು ಹೋಗುವಂತೆ ಅರಣ್ಯ ಸಿಬ್ಬಂದಿಗಳು ಸೂಚನೆ ನೀಡುತ್ತಿದ್ದಾರೆ. ಆದರೆ ಪ್ರವಾಸಿಗರಿಗೆ ಇದು ಬೇಸರದ ಸಂಗತಿಯಾಗಿದ್ದು, ಮೊಬೈಲ್ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ.

ಪೊಲೀಸ್ ಬೆಂಗಾವಲು: ಸಫಾರಿ ಪುನರಾರಂಭಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಭಾನುವಾರ ಬಂಡೀಪುರದಲ್ಲಿ ಪುನರಾರಂಭವಾದ ಸಫಾರಿಗೆ ಪೊಲೀಸರ ಭದ್ರತೆ ಒದಗಿಸಲಾಗಿತ್ತು. ಮೇಲುಕಾಮನಹಳ್ಳಿ ಸಫಾರಿ ಕೌಂಟರ್‌ನಿಂದ ಸಫಾರಿ ವಾಹನ ಪೊಲೀಸ್ ಬೆಂಗಾವಲಿನ ವಾಹನದೊಂದಿಗೆ ಸಫಾರಿ ರಸ್ತೆವರೆಗೂ ತೆರಳಿ ಅನಂತರ ಅರಣ್ಯ ಪ್ರವೇಶಿಸಿದವು.

ಸಂಭ್ರಮಿಸಿದ ಪ್ರವಾಸಿಗರು: 4 ತಿಂಗಳ ಸುದೀರ್ಘ ಅವಧಿಯ ನಂತರ ಪುನರಾರಂಭವಾದ ಸಫಾರಿಗೆ ಆಗಮಿಸಿದ್ದ ಹಲವರು ಇಂದು ಮೊದಲ ಸಫಾರಿ ಕೈಗೊಂಡು ಸಂಭ್ರಮಿಸಿದರು. ಕುಟುಂಬದ ಸದಸ್ಯರು ಹಾಗೂ ಮಕ್ಕಳೊಂದಿಗೆ ಆಗಮಿಸಿದ ಪ್ರವಾಸಿಗರು, ಅರಣ್ಯ, ವನ್ಯಜೀವಿಗಳ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸುತ್ತಿದ್ದರು.

ಪ್ರಾಣಿಗಳ ದರ್ಶನ: ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಭಾನುವಾರ ಸಫಾರಿ ಕೈಗೊಂಡ ಪ್ರವಾಸಿಗರಿಗೆ ಹುಲಿ, ಆನೆ, ಚಿರತೆ, ಸಾಂಬಾರ್, ಜಿಂಕೆ, ಕಾಡೆಮ್ಮೆ ಸೇರಿದಂತೆ ಇನ್ನಿತರ ಪ್ರಾಣಿ ಮತ್ತು ಪಕ್ಷಿಗಳು ದರ್ಶನ ನೀಡಿದ್ದು, ಪ್ರವಾಸಿಗರು ಸಂಭ್ರಮಿಸುವಂತೆ ಮಾಡಿದವು.

ಪರ–ವಿರೋಧ ಪ್ರತಿಭಟನೆಯಾಗಿತ್ತು

ಸಫಾರಿ ಪುನರಾರಂಭಕ್ಕೆ ಸಂಬಂಧಿಸಿದಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಧಿಕೃತವಾಗಿ ಘೋಷಣೆ ಮಾಡಿದ್ದ ಹಿನ್ನೆಲೆಯಲ್ಲಿ ರೈತ ಸಂಘದ ಕೆಲ ಮುಖಂಡರು ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ಫೆ.20ರಂದು ಪ್ರತಿಭಟನೆ ನಡೆಸಿದ್ದರು. ಇದಕ್ಕೆ ವಿರುದ್ಧವಾಗಿ ಸ್ಥಳೀಯ ರೈತರು, ಹಾಡಿ ವಾಸಿಗಳು ಪ್ರತಿಭಟನೆ ನಡೆಸಿ ಸಫಾರಿ ಪುನರಾರಂಭಿಸುವಂತೆ ಒತ್ತಾಯಿಸಿದ್ದರು. ಇದರಿಂದ ಕೆಲ ಕಾಲ ಗೊಂದಲದ ವಾತಾವರಣ ಉಂಟಾಗಿತ್ತು. ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಪರಿಸ್ಥಿತಿಯನ್ನು ತಿಳಿಗೊಳಿಸಿದ್ದನ್ನು ಸ್ಮರಿಸಬಹುದು.

ಅಗತ್ಯ ಕ್ರಮ ಕೈಗೊಳ್ಳಲಾಗಿದೆ

ಸಫಾರಿ ಪುನರಾರಂಭಕ್ಕೆ ಸರ್ಕಾರ ನೀಡಿರುವ ಸೂಚನೆ ಮತ್ತು ನಿರ್ದೇಶನವನ್ನು ಪಾಲಿಸಿ ಶೇ.50ರಷ್ಟು ವಾಹನವನ್ನು ಮಾತ್ರ ಸಫಾರಿಗೆ ಬಳಸಲಾಗುತ್ತಿದೆ. ಇಂದಿನಿಂದ ಸಫಾರಿ ಆರಂಭವಾಗುತ್ತಿರುವ ಮಾಹಿತಿ ತಿಳಿದು ಬೇರೆ ಬೇರೆ ಕಡೆಯಿಂದ ಬೇರೆ ಬೇರೆ ಸಫಾರಿಗರು ಇಂದು ಆಗಮಿಸಿದ್ದಾರೆ. ಸುದೀರ್ಘ ಅವಧಿಯ ನಂತರ ಸಫಾರಿಗರು ಬಂಡೀಪುರದಲ್ಲಿ ಸಫಾರಿ ಕೈಗೊಳ್ಳಲು ಕುತೂಹಲದಿಂದ ಆಗಮಿಸಿದ್ದಾರೆ. ಸುಸೂತ್ರವಾಗಿ ಸಫಾರಿ ಆರಂಭವಾಗಲು ಪೊಲೀಸರು ಸಹಕಾರ ನೀಡಿದ್ದಾರೆ.

– ಮಲ್ಲೇಶ್, ಆರ್‌ಎಫ್‌ಓ,
ಗೋಪಾಲಸ್ವಾಮಿ ಬೆಟ್ಟ ವಲಯ.

ಕ್ರೀಡಾಂಗಣ ನಿರ್ಮಾಣದಿಂದ ಹಿಂದೆ ಸರಿಯದಿದ್ದರೇ ಹೋರಾಟ

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಎಚ್ಚರಿಕೆ



ಮಾಜಿ ಸಚಿವ ಎನ್.ಮಹೇಶ್ ಸಿಲ್ಕ್ ಫಿಲೇಚರ್ ಕಾರ್ಖಾನೆ ಕಾರ್ಮಿಕರ ಸಮಸ್ಯೆ ಆಲಿಸಿದರು.

ತಿ.ನರಸೀಪುರ, ಫೆ22– ಅಹಿಂದಾ ವರ್ಗದ 250 ಕುಟುಂಬಗಳ ಬದುಕು ಕಾಪಾಡಲು, ಪಾರಂಪರಿಕ ಕಾರ್ಖಾನೆ ಉಳಿಸಲು ಸಿಎಂ ಸಿದ್ದರಾಮಯ್ಯ ಅವರು ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಡಬೇಕು. ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ಕಾರ್ಖಾನೆಗೆ ಮರು ಹಸ್ತಾಂತರಿಸಬೇಕು ಎಂದು ಮಾಜಿ ಸಚಿವ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆಗ್ರಹಿಸಿದರು.

ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದಲ್ಲಿ ಭಾನುವಾರ ಕ್ರೀಡಾಂಗಣ ನಿರ್ಮಾಣಕ್ಕೆ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಗೊಂಡಿರುವ ನಿವೇಶನ ಪರಿಶೀಲಿಸಿ, ಕಾರ್ಮಿಕರ ಅಹವಾಲು ಆಲಿಸಿದ ಬಳಿಕ ಮಾತನಾಡಿದ ಅವರು, ರೇಷ್ಮೆ ಸೀರೆ ಉದ್ಯಮ ಮುಚ್ಚುವ ಮೊದಲ ಹೆಜ್ಜೆಯಾಗಿ ಇಲ್ಲಿನ ನೂಲು ತೆಗೆಯುವ ಘಟಕದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಮುಂದಾಗಿದೆ. ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ ಜನರ ಬದುಕನ್ನು ಮೂರಾಬಟ್ಟೆ ಮಾಡಲು ಹೊರಟಿರುವ ನಿರ್ಧಾರದಿಂದ ಇಲ್ಲಿನ ಜನಪ್ರತಿನಿಧಿಗಳು ಹಿಂದೆ ಸರಿಯದಿದ್ದರೆ ಹೋರಾಟ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1912ರಲ್ಲಿ ಮೈಸೂರು ಮತ್ತು ಚನ್ನಪಟ್ಟಣ ರೇಷ್ಮೆ ಕಾರ್ಖಾನೆಗಳಲ್ಲಿ ತಯಾರಾಗುವ ರೇಷ್ಮೆ ಸೀರೆಗಳಿಗೆ ಅಗತ್ಯ ಕಚ್ಚಾ ವಸ್ತು ನೂಲನ್ನು ಪೂರೈಸಲು ತಿ.ನರಸೀಪುರದಲ್ಲಿ ನೂಲು ತೆಗೆಯುವ ಘಟಕ ನಿರ್ಮಿಸಿದ್ದಾರೆ. ಸುತ್ತಲಿನ ಪರಿಸರದಲ್ಲೂ ನೂರಾರು ಮರ ಗಿಡಗಳು, ಪಕ್ಷಿ ಸಂಕುಲ, ಚಿಟ್ಟೆಗಳು, ಕೀಟಗಳು ಇವೆ. ಕೆಲವೇ ಮಂದಿ ಹೊರತುಪಡಿಸಿ 250 ಮಹಿಳೆಯರು ಹೊರಗುತ್ತಿಗೆ ಆಧಾರದಲ್ಲಿ ಉದ್ಯೋಗಿಗಳಾಗಿ ಜೀವನ ನಡೆಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ. ಕ್ರೀಡಾಂಗಣವಾದ ನಂತರ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ತಾಲೂಕು ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ನಮ್ಮ ಒತ್ತಾಯವೂ ಇದೆ. ಆದರೆ ಕ್ರೀಡಾಂಗಣಕ್ಕಾಗಿ ರೇಷ್ಮೆ ಕಾರ್ಖಾನೆ ಜಾಗ ಆಯ್ಕೆ ಮಾಡಿಕೊಂಡಿದ್ದು ಅವೈಜ್ಞಾನಿಕವಾಗಿದೆ. ಅದ್ಯಾರು ಇಲ್ಲಿ ಕ್ರೀಡಾಂಗಣ ನಿರ್ಮಿಸಲು ಮುಖ್ಯಮಂತ್ರಿಗೆ ಶಿಫಾರಸ್ಸು ಮಾಡಿದ್ದಾರೋ ತಿಳಿಯುತ್ತಿಲ್ಲ. ಇಲ್ಲಿನ ಶಾಸಕರಾಗಿರುವ ಸಿದ್ದರಾಮಯ್ಯ ಅವರು ಕಾರ್ಖಾನೆ ಆವರಣಕ್ಕೆ ಭೇಟಿಕೊಟ್ಟು ಪರಿಸರವನ್ನು ಒಮ್ಮೆ ಪರಿಶೀಲಿಸಿ ನೌಕರರ ಅಹವಾಲು ಆಲಿಸಬೇಕು. ವರುಣ ಮತ್ತು ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಿರುವ ಪಟ್ಟಣದಲ್ಲಿರುವ ಪರ್ಯಾಯ ನಿವೇಶನವನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಅವರು ಕ್ರೀಡಾಂಗಣ ನಿವೇಶನವನ್ನು ಮರು ಪರಿಶೀಲಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಜಿಲ್ಲಾ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆಲಗೂಡು ಮಂಜು, ಮುಖಂಡರಾದ ಸೋಮಣ್ಣ, ಬಸವರಾಜು, ಭರತ್ ಸೇರಿದಂತೆ ಕಾರ್ಖಾನೆಯ ನೌಕರರು ಇದ್ದರು.



ನೂತನ ನಿರ್ದೇಶಕರಿಗೆ ಸನ್ಮಾನ

ಮೈಸೂರು ವಕೀಲರ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ನಿರ್ದೇಶಕ ಎನ್.ಮಂಜುನಾಥ್ ಅವರನ್ನು ಭೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ತಿರುಮಕೂಡಲು ಪುಟ್ಟು ಸನ್ಮಾನಿಸಿದರು. ಪತ್ರ ಬರಹಗಾರರ ಉಕ್ಕಲಗೆರೆ ಗೌರಿಶಂಕರ್, ರವಿಶಂಕರ್, ರಾಮು, ನಾಗರಾಜು ಇತರರಿದ್ದರು.

ಕೋಟೆಯಲ್ಲಿ ಸಿದ್ಧಗಂಗಾಶ್ರೀ, ಸಿದ್ದೇಶ್ವರಶ್ರೀ, ರಾಜೇಂದ್ರಶ್ರೀಗಳ ಸ್ಮರಣೆ



ಹೆಚ್.ಡಿ. ಕೋಟೆಯಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಫೆ.22– ಇಳಿ ವಯಸ್ಸಿನಲ್ಲೂ ಯುವಕರು ನಾಚುವಂತೆ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾ, ಅಜ್ಞಾನದ ಜಗವನ್ನು ಸುಜ್ಞಾನದತ್ತ ಕೊಂಡೊಯ್ಯಲು ಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮೀಜಿ ಅವರು ಶ್ರಮಿಸುತ್ತಿದ್ದರು ಎಂದು ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ತಿಳಿಸಿದರು.

ಪಟ್ಟಣದ ಹಳೇ ಆಸ್ಪತ್ರೆ ಆವರಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಯುವ ಸಮಿತಿಯಿಂದ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ, ರಾಜೇಂದ್ರ ಸ್ವಾಮೀಜಿ ಮತ್ತು ಸಿದ್ದೇಶ್ವರ ಸ್ವಾಮೀಜಿಗಳ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ದಾಸೋಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ಧಗಂಗಾ ಸ್ವಾಮೀಜಿಗಳ ಪರಿಶ್ರಮದಿಂದಾಗಿ ಇಂದು ಅದೆಷ್ಟೋ ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿದ್ದಾರೆ. ಜಾತಿ, ಮತ, ಪಂಥ ಬೇಧ ಮಾಡದೇ ಅವರು ನೀಡಿದ ದಾಸೋಹ ಮತ್ತು ಶಿಕ್ಷಣವನ್ನು ಯಾರು ಮರೆಯಬಾರದು. ಅವರ ಆಶಯದಂತೆ ಮಠ ಸಾಗುತ್ತಿದೆ. ಅದೇ ರೀತಿ ಸಿದ್ದೇಶ್ವರ ಸ್ವಾಮೀಜಿಗಳು ಸಹ ತಮ್ಮ ವಿಚಾರಧಾರೆಗಳಿಂದ ಅಗಣ್ಯ ಭಕ್ತ ವೃಂದವನ್ನು ಹೊಂದಿದ್ದರು. ಅವರ ಸರಳತೆಯೇ ಇತರರಿಗೆ ಪಾಠವಾಗಿದೆ. ಅವರ ಜೀವನವು ಒಂದು ವಿಶ್ವ ವಿದ್ಯಾಲಯಕ್ಕೆ ಸಮ. ಇಂತಹ ಪುಣ್ಯ ಪುರುಷರು ನಾವು ಜೀವಿಸುವಾಗ ಇದ್ದರು ಎಂಬುದೇ ನಮಗೆ ಹೆಮ್ಮೆಯ ಸಂಗತಿ ಎಂದರು.

ಪುರ ಮಠದ ಚಂದ್ರಶೇಖರ ಸ್ವಾಮೀಜಿ ಮಾತನಾಡಿ, ವೀರಶೈವ ಧರ್ಮದ ಶಕ್ತಿಗಳಾಗಿ ಸುತ್ತೂರು ಶ್ರೀಗಳು, ಸಿದ್ಧಗಂಗಾ ಮಠದ ಶ್ರೀಗಳು ಹಾಗೂ ಸಿದ್ದೇಶ್ವರ ಶ್ರೀಗಳು ನಿಲ್ಲುತ್ತಾರೆ. ಜಾತಿ ಬೇಧ ಮರೆತು ಎಲ್ಲಾ ಧರ್ಮಿಯರಿಗೆ ದಾಸೋಹದ ಜೊತೆಗೆ ಶಿಕ್ಷಣ ಮತ್ತು ಸಮಾಜ ಸುಧಾರಣೆಗೆ ಹೆಚ್ಚು ಒತ್ತನ್ನು ನೀಡಿದ್ದರು. ಜೊತೆಗೆ ಸಮಾಜದಲ್ಲಿ ನಕಾರಾತ್ಮಕ ಶಕ್ತಿ ತೊಲಗಿಸಿ ಸಕಾರಾತ್ಮಕ ಶಕ್ತಿ ಬಿತ್ತುವಲ್ಲಿ ಶ್ರಮಿಸಿದ್ದಾರೆ ಎಂದರು.

ಹಂಚೀಪುರ ಸಿದ್ದಮಲ್ಲೇಶ್ವರ ದಾಸೋಹ ಮಠದ ತೋಂಟದಾರ್ಯ ಸ್ವಾಮೀಜಿ, ಯುವ ಘಟಕದ ಅಧ್ಯಕ್ಷ ಸತೀಶ್ ಮಾತನಾಡಿದರು. ಇದೇ ವೇಳೆ ಭಜನಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಲ್ಲದೇ ಪ್ರಸಾದ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಕ್ಕಹಳ್ಳಿ ಮಠದ ಶಿವಕುಮಾರಸ್ವಾಮೀಜಿ, ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ರುದ್ರಪ್ಪ, ಮೊತ್ತ ಬಸವರಾಜಪ್ಪ, ದಾರಿದೀಪ ಟ್ರಸ್ಟ್‌ನ ಪ್ರದೀಪ ಕುಮಾರ್, ಜಯಪ್ರಕಾಶ್ ಚಿಕ್ಕಣ್ಣ, ಶಂಭೇಗೌಡ, ಟಿ.ವೆಂಕಟೇಶ್, ಬಿ.ವಿ.ಬಸವರಾಜು, ಶಿವಸ್ವಾಮಿ, ಮಾದರಾಜು, ಕೆ.ವಿ.ಮಹದೇವಸ್ವಾಮಿ, ಮಹದೇವಪ್ಪ, ವೀರಭದ್ರಪ್ಪ, ವೀರಪ್ಪ, ಡೈರಿ ಶ್ರೀಕಾಂತ್, ಕನ್ನಡ ಪ್ರಮೋದ್, ಚಂದ್ರಮೌಳಿ, ಸಂತೋಷ್, ಕಾಶಿಪತಿ, ಸ್ವಾಮಿ, ಕೆಂಡಗಣ್ಣಸ್ವಾಮಿ, ಸೋಮಾಚಾರ್, ಯೋಗೇಶ್ ಕುಮಾರ್, ನಾಗರಾಜಪ್ಪ, ನಾಗರಾಜು, ಗಿರೀಶ್, ಸಯ್ಯದ್ ಅಕ್ರಂ, ಚಂದ್ರು, ಲೋಕೇಶ್, ದೇವಮ್ಮಣ್ಣಿ, ಜಗದೀಶ್, ಶಿವರಾಜು, ನಂದೀಶ್, ರಾಜು, ಚಲುವರಾಜು, ಮಹೇಶ್, ಗುರುಸ್ವಾಮಿ, ಮಹದೇವಸ್ವಾಮಿ, ಶಿವಕುಮಾರ್ ಇದ್ದರು.

ನಿವೃತ್ತ ಹಾಲು ಪರೀಕ್ಷಕಿ ಗೌರಮ್ಮ ಅವರಿಗೆ ಚೆಕ್ ವಿತರಣೆ




ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್‌ನ ಮೈಮುಲ್ ಉಪ ಕಚೇರಿಯಲ್ಲಿ ಸತ್ತಿಗೆ ಹುಂಡಿ ಡೇರಿಯಲ್ಲಿ ಹಾಲು ಪರೀಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಗೌರಮ್ಮ ಅವರಿಗೆ ಮೈಮುಲ್ ಕಲ್ಯಾಣ ಟ್ರಸ್ಟ್‌ನಿಂದ 2 ಲಕ್ಷ ರೂ.ಗಳ ಚೆಕ್ ಅನ್ನು ಮೈಮುಲ್ ಅಧ್ಯಕ್ಷ ಈರೇಗೌಡ ವಿತರಿಸಿದರು. ಈ ವೇಳೆ ವಿಸ್ತರಣಾಧಿಕಾರಿ ರಾಮಪ್ಪ ಬಾರ್ಕಿ, ಭಾಸ್ಕರ್, ಚಿಕ್ಕಕೆರೆಯೂರು ಡೈರಿ ಅಧ್ಯಕ್ಷ ನಾಗೇಂದ್ರ, ಸಣ್ಣ ನಿಂಗೇಗೌಡ, ಅನುರಾಜ್, ಸತ್ತಿಗೆ ಹುಂಡಿ ಡೇರಿ ಅಧ್ಯಕ್ಷೆ ಲತಾ, ಸಿಇಓ ಅಂಬಿಕಾ, ಸಹಾಯಕ ಪರಮೇಶ್, ಮಹದೇವಸ್ವಾಮಿ ಇದ್ದರು.

ತಿ.ನರಸೀಪುರದ ಸಿಲ್ಕ್ ಫಿಲೇಚರ್ ಆವರಣದಲ್ಲಿ

ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟು ಬೇರೆಡೆ ನಿರ್ಮಿಸಿ

ಮಾಜಿ ಪುರಸಭೆ ಸದಸ್ಯ, ಚಿತ್ರನಟ ಅರ್ಜುನ್ ರಮೇಶ್ ಆಗ್ರಹ



ಪುರಸಭೆ ಮಾಜಿ ಸದಸ್ಯ ಅರ್ಜುನ್ ರಮೇಶ್ ಕಾರ್ಮಿಕರ ಸಮಸ್ಯೆ ಆಲಿಸಿದರು.

> ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಬೇಕೆಂದು ಕೈಗೊಂಡಿರುವ ನಿರ್ಧಾರದಿಂದ ಸರ್ಕಾರ ನಡೆಸುತ್ತಿರುವ ಪಕ್ಷಕ್ಕೆ ಸರಿ ಎನ್ನುವುದನ್ನು ಬಿಟ್ಟರೆ ತಿ.ನರಸೀಪುರ ಸುತ್ತಮುತ್ತಲ ಕುಟುಂಬಕ್ಕೆ ಅನ್ಯಾಯ ಮಾಡಿದಂತಿದೆ. ತಿ.ನರಸೀಪುರ ಪುರಸಭೆ ಸದಸ್ಯನಾಗಿದ್ದ ವೇಳೆ ತಾಲೂಕಿನಲ್ಲಿ ಕ್ರೀಡಾಂಗಣ ಆಗಬೇಕೆಂದು ಹೇಳಿದ ಮೊದಲಿಗ ನಾನು. ಆದರೆ ಬಡ ಕುಟುಂಬದವರು ಕೆಲಸ ಮಾಡುತ್ತಿರುವ ಸಿಲ್ಕ್ ಫ್ಯಾಕ್ಟರಿ ಆವರಣವನ್ನು ಸರ್ಕಾರ ಆಯ್ಕೆ ಮಾಡಿಕೊಂಡಿರುವುದು ಸರಿಯಲ್ಲ. ಸರ್ಕಾರದ ಅಂಗ ಸಂಸ್ಥೆಯಾಗಿರುವ ಕೆಎಸ್‌ಐಸಿಯಲ್ಲಿ 200–250 ಕುಟುಂಬದ ಬಡ ಜನರು ಕೆಲಸ ಮಾಡುತ್ತಿದ್ದು, ಅವರ ಬಗ್ಗೆ ಯೋಚನೆ ಮಾಡದೇ ಸರ್ಕಾರ ಯಾವ ದೃಷ್ಟಿಕೋನದಲ್ಲಿ ಇಲ್ಲಿ ಕ್ರೀಡಾಂಗಣ ನಿರ್ಮಿಸಲೊರಟಿದೆಯೋ ಗೊತ್ತಿಲ್ಲ.
>
> –ಅರ್ಜುನ್ ರಮೇಶ್, ಮಾಜಿ ಪುರಸಭೆ ಸದಸ್ಯ.

ತಿ.ನರಸೀಪುರ, ಫೆ.22– ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿರುವ ಮಾಜಿ ಪುರಸಭೆ ಸದಸ್ಯ ಹಾಗೂ ಚಿತ್ರನಟ ಅರ್ಜುನ್ ರಮೇಶ್, ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಪಕ್ಷದ ಕಾರ್ಯಕರ್ತರನ್ನು ಮೆಚ್ಚಿಸಲು ನೂರಾರು ಕುಟುಂಬಗಳಿಗೆ ಅನ್ಯಾಯ ಮಾಡುವ ಕೆಲಸಕ್ಕೆ ಮುಂದಾಗಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ ದೊರೆತ ಹಿನ್ನೆಲೆಯಲ್ಲಿ ಕೆಎಸ್‌ಐಸಿ ನೌಕರರನ್ನು ಭೇಟಿ ಮಾಡಿದ ಅರ್ಜುನ್ ರಮೇಶ್ ಕಾರ್ಮಿಕರಿಗೆ ನೈತಿಕ ಸ್ಥೈರ್ಯ ತುಂಬಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟು ಸೂಕ್ತವಾದ ಮತ್ತೊಂದು ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಕಾರ್ಖಾನೆಯಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ಗಮನಿಸಿದರೆ, ಕ್ರೀಡಾಂಗಣ ನಿರ್ಮಿಸಲು ಅಧಿಕಾರಿಗಳು ಬೌಂಡರಿ ಗುರುತು ಮಾಡುವ ವೇಳೆ ನಡೆದುಕೊಂಡ ರೀತಿ ನೋಡಿದರೆ ಯಾರನ್ನೋ ಮೆಚ್ಚಿಸಲು ಕ್ರೀಡಾಂಗಣ ಕಾಮಗಾರಿ ಕೈಗೆತ್ತಿಕೊಂಡಂತಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಕ್ರೀಡಾಂಗಣ ನಿರ್ಮಾಣದ 5 ಎಕರೆ ಜಾಗ ಗುರುತು ಮಾಡುವ ವೇಳೆ ಅಧಿಕಾರಿಗಳು ಮಾತ್ರ ತಮ್ಮ ಕೆಲಸ ಮಾಡಬೇಕು. ಅದನ್ನು ಬಿಟ್ಟು ಒಂದು ಪಕ್ಷಕ್ಕೆ ಸೇರಿದ ಮುಖಂಡರ ಸಮ್ಮುಖದಲ್ಲಿ ಅಳತೆ ಕಾರ್ಯ ಮಾಡಿ, ಅವರ ಎದುರೇ ಬೌಂಡರಿ ಫಿಕ್ಸ್ ಮಾಡಿ ಕಲ್ಲು ನೆಡುತ್ತಾರೆಂದರೆ ಸಾರ್ವಜನಿಕರಿಗೆ ಅಧಿಕಾರಿಗಳು ಯಾವ ಸಂದೇಶ ಕೊಡಲು ಹೊರಟಿದ್ದಾರೆ ಎಂದು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಹೊಟ್ಟೆ ತುಂಬಿದವರ ಹೊಟ್ಟೆಯನ್ನೇ ತುಂಬಿಸಬೇಡಿ: ಕ್ರೀಡಾಂಗಣ ನಿರ್ಮಿಸಲು ಸೂಕ್ತ ಜಾಗ ಗುರ್ತಿಸಬೇಕು. ಅಧಿಕಾರಿಗಳು ಸರ್ಕಾರಕ್ಕೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ಉಂಟಾಗುವ ತೊಂದರೆಗಳ ಬಗ್ಗೆ ಮಾಹಿತಿ ನೀಡಬೇಕು. ಆದರೆ ಅಧಿಕಾರಿಗಳು ರಾಜಕಾರಣಿಗಳು ಹೇಳಿದಂತೆ ಕೇಳಿಕೊಂಡು ಕೋಲೆ ಬಸವನಂತೆ ಕಲ್ಲು ನೆಡುವ ಕೆಲಸ ಮಾಡಿರುವುದು ಸರಿಯಲ್ಲ. ಕೆಎಸ್‌ಐಸಿ ಆವರಣದಲ್ಲಿ 500 ಮರಗಳು, ವಿವಿಧ ರೀತಿಯ ಪಕ್ಷಿಗಳಿವೆ. ಈ ಮರಗಳಿಂದ ಕಾರ್ಮಿಕರಿಗೆ ಅಗತ್ಯವಿರುವ ಆಕ್ಸಿಜನ್ ಕೂಡ ಸಿಗುತ್ತದೆ. ಅಷ್ಟಕ್ಕೂ ಇಲ್ಲೇ ಕ್ರೀಡಾಂಗಣ ನಿರ್ಮಿಸಬೇಕೆಂಬ ಹಠ ಯಾಕೆ ಬೇರೆಲ್ಲೂ ಜಾಗ ಸಿಗಲಿಲ್ಲವೇ. ಸಂಸ್ಥೆ ನಡೆಯಬೇಕೆಂದರೆ ಶೇ.33 ರಷ್ಟು ಮರ ಗಿಡಗಳಿರಬೇಕಾಗುತ್ತದೆ. ಈಗಿರುವ ಮರ ಗಿಡಗಳನ್ನು ಕತ್ತರಿಸಿ ಕ್ರೀಡಾಂಗಣ ನಿರ್ಮಿಸಲು ಹೊರಟಿರುವುದು ಎಷ್ಟು ಸರಿ?. ಕಚ್ಚಾ ವಸ್ತು ಸಂಗ್ರಹಣೆಗೆ ಜಾಗ ಎಲ್ಲಿ ತರುತ್ತೀರಾ ಎಂದು ಪ್ರಶ್ನಿಸಿದ ಅರ್ಜುನ್ ಯಾರನ್ನೋ ಮೆಚ್ಚಿಸಲು, ಬೇರೆ ಯಾವುದೋ ದುರುದ್ದೇಶ ನಿಮಗಿದೆ. ಕ್ರೀಡಾಂಗಣ ಆಗುವುದರಿಂದ ಒಂದಷ್ಟು ಜನಕ್ಕೆ ಟೆಂಡರ್ ನೀಡಿ ಹೊಟ್ಟೆ ತುಂಬಿರುವವರ ಹೊಟ್ಟೆ ತುಂಬಿಸಲು ಮುಂದಾಗಿದ್ದೀರಾ. ಇದರಿಂದ ಅದೆಷ್ಟೋ ಕುಟುಂಬಗಳು ಕಷ್ಟಕ್ಕೆ ಸಿಲುಕಲಿವೆ. ಹೀಗಾಗಿ ಮುಖ್ಯಮಂತ್ರಿಗಳು ಮತ್ತೊಮ್ಮೆ ಪರಿಶೀಲನೆ ಮಾಡಿ ಕ್ಷೇತ್ರಕ್ಕೆ ಮೆರುಗು ತಂದಿರುವ ಕೆಎಸ್‌ಐಸಿ ಸಂಸ್ಥೆಗೆ ಕಾಯಕಲ್ಪ ನೀಡುವ ಕೆಲಸ ಮಾಡಬೇಕು. ಮೈಸೂರು ಸಿಲ್ಕ್ ಎಂದರೆ ಪ್ರಪಂಚದಲ್ಲೇ ಪ್ರಸಿದ್ಧ. ಹಾಗಾಗಿ ಉಸ್ತುವಾರಿ ಸಚಿವರು, ಮುಖ್ಯಮಂತ್ರಿಗಳು ನಿಮ್ಮ ಪಕ್ಷದ ಒಂದಷ್ಟು ಜನರನ್ನು ಮೆಚ್ಚಿಸಲು ನೂರಾರು ಕುಟುಂಬಗಳನ್ನು ಕಷ್ಟಕ್ಕೆ ಸಿಲುಕಿಸಬೇಡಿ. ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟು ಬೇರೆ ಜಾಗ ಗುರುತಿಸಿ ಅಲ್ಲಿ ಕ್ರೀಡಾಂಗಣ ನಿರ್ಮಿಸುವ ಮೂಲಕ ಕ್ಷೇತ್ರಕ್ಕೆ ಮೆರಗು ತಂದು ಕೊಟ್ಟಿರುವ ಕೆಎಸ್‌ಐಸಿ ಹಾಗೂ ಅಲ್ಲಿನ ನೌಕರರ ಹಿತ ಕಾಪಾಡುವ ಕೆಲಸ ಮಾಡಿ ಎಂದು ಮನವಿ ಮಾಡಿದರು. ಈ ವೇಳೆ ಮುಖಂಡ ಸಿ.ಡಿ.ವೆಂಕಟೇಶ್ ಸೇರಿದಂತೆ ಕಾರ್ಮಿಕರು ಹಾಜರಿದ್ದರು.

ಆಕಸ್ಮಿಕ ಬೆಂಕಿಗೆ ಹುಲ್ಲಿನ ಮೆದೆ ಭಸ್ಮ


ಹುಣಸೂರು, ಫೆ.22– ಆಕಸ್ಮಿಕ ಬೆಂಕಿಗೆ ಹುಲ್ಲಿನ ಮೆದೆ ಭಸ್ಮವಾಗಿರುವ ಘಟನೆ ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆದಿದೆ.



ಗ್ರಾಮದ ನಿವಾಸಿ ವೆಂಕಟೇಶ್ ಅವರಿಗೆ ಸೇರಿದ ಹುಲ್ಲಿನ ಮೆದೆ ಭಸ್ಮವಾಗಿರುವುದು. ಇವರು ತಮ್ಮ ಜಾನುವಾರುಗಳಿಗಾಗಿ ಸುಮಾರು 7 ಎಕರೆಯಲ್ಲಿ ಬೆಳೆದಿದ್ದ ಭತ್ತದ ಹುಲ್ಲನ್ನು ಮೆದೆ ಹಾಕಿ ಸಂಗ್ರಹಿಸಿದ್ದರು. ಆದರೆ ಭಾನುವಾರ ಆಕಸ್ಮಿಕವಾಗಿ ಬೆಂಕಿ ಬಿದ್ದಿದೆ. ಈ ವೇಳೆ ಸ್ಥಳದಲ್ಲಿದ್ದ ಗ್ರಾಮಸ್ಥರು ನೀರು ಸುರಿದು ಬೆಂಕಿ ನಂದಿಸಲು ಮುಂದಾದರಾದರೂ ಸಾಧ್ಯವಾಗಲಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವುದರೊಳಗೆ ಮೆದೆ ಸಂಪೂರ್ಣ ಭಸ್ಮವಾಗಿತ್ತು.

ಆಕಸ್ಮಿಕವಾಗಿ ಬೆಂಕಿ ಬಿದ್ದು ಭತ್ತದ ಹುಲ್ಲಿನ ಮೆದೆ ಭಸ್ಮವಾಗಿದೆ. ಹೀಗಾಗಿ ಗ್ರಾಮಸ್ಥರು ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಕೃಷ್ಣಶೆಟ್ಟಿ ನಿಧನ



ಭೇರ್ಯ, ಫೆ.22– ಇಲ್ಲಿಗೆ ಸಮೀಪದ ಹೊಸ ಅಗ್ರಹಾರ ರೈಲ್ವೆ ಸ್ಟೇಷನ್ ನಿವಾಸಿ ಕೃಷ್ಣಶೆಟ್ಟಿ(84) ಭಾನುವಾರ ನಿಧನರಾದರು. ಮೃತರು ಶಿಕ್ಷಕಿ ವೀಣಾ ಸೇರಿದಂತೆ ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಮಾರ್




ಹುಣಸೂರು: ತಾಲೂಕಿನ ರತ್ನಪುರಿ ಗ್ರಾಮದ ದಲಿತ ಹೋರಾಟಗಾರ ಹರಿಹರ ಆನಂದಸ್ವಾಮಿ ಅವರ ಸಹೋದರ ನಿವೃತ್ತ ಸಾರಿಗೆ ನಿರ್ವಾಹಕ ಕುಮಾರ್(64) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಫೋಟೋ ಶೂಟ್ ತಾಣವಾದ ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ

●ದಿನನಿತ್ಯ ಪ್ರೀ ವೆಡ್ಡಿಂಗ್ ಶೂಟ್, ಜಾಹೀರಾತು, ಕಿರು ಚಲನಚಿತ್ರಗಳ ಚಿತ್ರೀಕರಣ
●ವಸ್ತುಸಂಗ್ರಹಾಲಯವಾಗಿಸಲು ಬಜೆಟ್‌ನಲ್ಲಿ ಮೀಸಲಿಟ್ಟ 30 ಕೋಟಿ ರೂ. ಏನಾಯ್ತು





ಹಳೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನವಜೋಡಿಗಳ ಪ್ರೀ ವೆಡ್ಡಿಂಗ್ ಶೂಟಿಂಗ್ ಮಾಡುತ್ತಿರುವುದು.

ಮೈಸೂರು, ಫೆ22(ಎಲ್‌ಎನ್‌ವೈ, ಬಿಸಿಟಿ, ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಫೋಟೋ ಶೂಟ್ ತಾಣವಾಗಿ ಬದಲಾಗಿದ್ದು, ನವ ಜೋಡಿಗಳಿಗೆ, ಜಾಹಿರಾತು ಮತ್ತು ಚಲನ ಚಿತ್ರ ಚಿತ್ರೀಕರಣಕ್ಕೆ ಹೊಸದೊಂದು ಆಕರ್ಷಕ ಸ್ಥಳ ದೊರೆತಂತಾಗಿದೆ.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತದ ಸುವರ್ಣ ಯುಗಕ್ಕೆ ಸಾಕ್ಷಿಯಾಗಿ ಮೈಸೂರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ 1895ರಲ್ಲಿ ನಿರ್ಮಾಣಗೊಂಡ, 130 ವರ್ಷಗಳ ಈ ಭವ್ಯ ಪಾರಂಪರಿಕ ಕಟ್ಟಡ ಉದ್ದೇಶಿತ ವಸ್ತು ಸಂಗ್ರಹಾಲಯವಾಗಿ ಪರಿವರ್ತನೆಗೊಂಡು ಸಂರಕ್ಷಣೆಯಾಗುವ ಹೊತ್ತಲ್ಲಿ ವೃತ್ತಿಪರ ಛಾಯಾಗ್ರಾಹಕರಿಗೆ ವಿವಾಹಪೂರ್ವ ಫೋಟೋ ಶೂಟ್‌ಗಳು ಮತ್ತು ಜಾಹೀರಾತು, ಚಲನಚಿತ್ರ ಚಿತ್ರೀಕರಣಕ್ಕೆ ಹೆಚ್ಚು ಜನಪ್ರಿಯ ತಾಣವಾಗಿ ರೂಪುಗೊಳ್ಳುತ್ತಿದೆ.

ಕೇಂದ್ರ ಸರ್ಕಾರದ ಸ್ವದೇಶ್ ದರ್ಶನ್ 2.0 ಯೋಜನೆಯಡಿ ವಸ್ತುಸಂಗ್ರಹಾಲಯವಾಗಬೇಕಿದ್ದ ಹಳೆ ಜಿಲ್ಲಾಧಿಕಾರಿಗಳ ಪಾರಂಪರಿಕ ಕಟ್ಟಡವಿಂದು ಅರಮನೆ ಸುತ್ತಮುತ್ತಲಿನ ಪ್ರದೇಶದ ನಂತರ ಫೋಟೋ ಶೂಟ್‌ಗೆ ಹೊಸ ಪರ್ಯಾಯ ಸ್ಥಳವಾಗಿ ಗುರ್ತಿಸಿಕೊಳ್ಳುತ್ತಿದೆ.

ಹಳೆ ಜಿಲ್ಲಾಧಿಕಾರಿ ಆವರಣದಲ್ಲಿ ಫೆ14ರ ಪ್ರೇಮಿಗಳ ದಿನದಂದು ಪೊಲೀಸರು ನೀಡಿದ ಎಚ್ಚರಿಕೆಯಿಂದಾಗಿ ಸ್ಥಗಿತಗೊಂಡಿದ್ದ ಪ್ರೀ ವೆಡ್ಡಿಂಗ್ ಫೋಟೋ ಶೂಟ್ ಮತ್ತೆ ಆರಂಭವಾಗಿದ್ದು, ಬೆಳ್ಳಂ ಬೆಳಗ್ಗೆಯೇ ಚಿತ್ರೀಕರಣ ಚಟುವಟಿಕೆಗಳು ನಡೆಯುತ್ತಿವೆ. ಇದೇ ರೀತಿ ಮುಂದುವರೆದರೆ, ಪಾರಂಪರಿಕ ಕಟ್ಟಡವನ್ನು ಕಳೆದು ಕೊಳ್ಳಬೇಕಾಗುತ್ತದೆ ಎಂದು ಪಾರಂಪರಿಕ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಸ್ತಾವನೆ ಕಾಗದಕ್ಕೆ ಸೀಮಿತ: ಜಿಲ್ಲಾಧಿಕಾರಿ ಕಚೇರಿಯಲ್ಲಿ 2023 ಜೂನ್‌ನಲ್ಲಿ ಸಿದ್ದಾರ್ಥನಗರದಲ್ಲಿರುವ ಹೊಸ ಜಿಲ್ಲಾ ಮಟ್ಟದ ಕಚೇರಿ ಸಂಕೀರ್ಣಕ್ಕೆ ಸ್ಥಳಾಂತರಿಸಲಾಯಿತು. ಅಂದಿನಿಂದ ಖಾಲಿ ಇರುವ ಈ ಪಾರಂಪರಿಕ ಕಟ್ಟಡದ ಮಹತ್ವವನ್ನು ಪರಿಗಣಿಸಿ, ವಸ್ತುಸಂಗ್ರಹಾಲಯವನ್ನಾಗಿ ಮರುಬಳಕೆ ಮಾಡುವಂತೆ ಒತ್ತಾಯ ಕೇಳಿಬಂದ ಹಿನ್ನಲೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅಲ್ಲದೆ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಪ್ರಸ್ತಾವನೆ ವರ್ಷಗಳು ಕಳೆಯುತ್ತಿದ್ದರೂ ಕಾಗದಕ್ಕೆ ಸೀಮಿತವಾಗಿದೆಯೇ ಹೊರತು ಕಾರ್ಯ ರೂಪಕ್ಕೆ ಬಂದಿಲ್ಲ.

ಬಜೆಟ್‌ನಲ್ಲಿ ಅನುದಾನ: ಹಳೆ ಜಿಲ್ಲಾಧಿಕಾರಿ ಪಾರಂಪರಿಕ ಕಟ್ಟಡವನ್ನು ವಸ್ತು ಸಂಗ್ರಹಾಲಯವನ್ನಾಗಿಸುವ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ 2025–26ನೇ ಸಾಲಿನ ಬಜೆಟ್‌ನಲ್ಲಿ 30 ಕೋಟಿ ರೂ. ಅನುದಾನ ಹಂಚಿಕೆ ಮಾಡಿದ್ದರು. ಆದರೆ, ಅದರಲ್ಲೂ ಯಾವುದೇ ಪ್ರಗತಿ ಸಾಧ್ಯವಾಗಿಲ್ಲ.

ಪರಂಪರೆಯ ಸಂರಕ್ಷಣೆ ಇಲ್ಲ: ಮೈಸೂರಿನ 23ನೇ ಮಹಾರಾಜ ಹತ್ತನೇ ಚಾಮರಾಜ ಒಡೆಯರ್ ಅವರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದ ಈ ಪಾರಂಪರಿಕ ಕಟ್ಟಡವನ್ನು 1878 ರಿಂದ 1881 ರವರೆಗೆ ಮೈಸೂರು ರಾಜ್ಯದ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಸರ್ ಜೇಮ್ಸ್ ಡೇವಿಡ್ಸನ್ ಗಾರ್ಡನ್ ಅವರಿಗೆ ಸಮರ್ಪಿಸಲಾಗಿತ್ತು. ಅದರಂತೆ ಕಟ್ಟಡದ ಮುಂದೆ ಮಹಾರಾಣಿ ಕಾಲೇಜು ರಸ್ತೆಗೆ ಎದುರಾಗಿ ಗಾರ್ಡನ್ ಅವರ ಪ್ರತಿಮೆಯೂ ಇದೆ. ದಿವಾನರ ಅಡಿಯಲ್ಲಿ ಜಿಲ್ಲಾ ಆಡಳಿತ ಕೇಂದ್ರವಾಗಿದ್ದ ಭವ್ಯ ಕಟ್ಟಡದ ಪರಂಪರೆ ಕುಂದುತ್ತಿರುವುದು ಮೈಸೂರಿಗರಲ್ಲಿ ಅತೀವ ಬೇಸರವನ್ನುಂಟು ಮಾಡಿದೆ.

ಪಾರಂಪರಿಕ ಕಟ್ಟಡ ಸಂರಕ್ಷಣೆ ದೃಷ್ಟಿಯಲ್ಲಿ ಯಾವುದೇ ಮೇಲ್ವಿಚಾರಣೆ, ಕನಿಷ್ಠ ಕಾಳಜಿಯನ್ನು ತೋರದ ಜಿಲ್ಲಾಡಳಿತದ ಬೇಜವಾಬ್ದಾರಿಯಿಂದಾಗಿ ಪಾರಂಪರಿಕ ಕಟ್ಟಡವಿಂದು ಫೋಟೋ ಶೂಟ್, ತಡರಾತ್ರಿಯ ಕೂಟಗಳು ಹಾಗೂ ಅನಧಿಕೃತ ಚಟಿವಟಿಕೆಗಳು ಹಾಗೂ ಮುಂದುರ ಹಾವಳಿಗೆ ಸಿಲುಕಿ ನಾಶವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಫೋಟೋ ಶೂಟ್‌ಗೆ ಪಾರಂಪರಿಕ ತಜ್ಞರ ಖಂಡನೆ...

ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಅನಧಿಕೃತ ಛಾಯಾಗ್ರಹಣ ನಡೆಸುತ್ತಿರುವುದನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರೂ ಆದ ಜಿಲ್ಲಾ ಪರಂಪರೆ ಸಮಿತಿಯ ಸದಸ್ಯ ಪ್ರೊ.ಎನ್.ಎಸ್.ರಂಗರಾಜು ತೀವ್ರವಾಗಿ ಖಂಡಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ಆಲ್ಬರ್ಟ್ ವಿಕ್ಟರ್ ರಸ್ತೆ, ಅಶೋಕ ರಸ್ತೆ ಮತ್ತು 10ನೇ ಚಾಮರಾಜ ಒಡೆಯರ್ ವೃತ್ತ ಸೇರಿದಂತೆ ನಗರ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ನಡೆಯುತ್ತಿದ್ದ ಫೋಟೋ ಶೂಟ್ ಈಗ ಹಳೆ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ವ್ಯಾಪಿಸಿದೆ ಎಂದು ಕಿಡಿಕಾರಿದ್ದಾರೆ.

ಮೈಸೂರಿನ ಎಲ್ಲಾ ಪಾರಂಪರಿಕ ಸ್ಮಾರಕಗಳಲ್ಲಿ ಸೂಕ್ತ ಅನುಮತಿಯಿಲ್ಲದೆ ಛಾಯಾಗ್ರಹಣವನ್ನು ನಿಷೇಧಿಸುವ ಆದೇಶಗಳನ್ನು ತಕ್ಷಣವೇ ಹೊರಡಿಸಬೇಕು. ಇಲ್ಲದಿದ್ದರೆ, ಅಪಾಯ ಸಂಭವಿಸು ಸಾಧ್ಯತೆ ಹೆಚ್ಚಾಗಲಿದೆ. ಅಲ್ಲದೆ ಮೈಸೂರಿನ ಬಗ್ಗೆ ಕೆಟ್ಟ ಅಭಿಪ್ರಾಯವೂ ಮೂಡಲಿದೆ. ಹಾಗೆಯೇ ಅನಧಿಕೃತ ಒಳನುಗ್ಗುವಿಕೆಯಿಂದ ಕಟ್ಟಡಕ್ಕೆ ಹಾನಿಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಪಾರಂಪರಿಕ ತಾಣಗಳಲ್ಲಿ ಫೋಟೋ ಶೂಟ್ ಪ್ರವೃತ್ತಿ ಬೆಳೆಯುತ್ತಿರುವುದೇ ದುರದೃಷ್ಟಕರ. ಇತಿಹಾಸ ಪ್ರಸಿದ್ದ ಭವ್ಯ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕಾದರೆ, ನಿಯಂತ್ರಣ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ನಗರ ಪೊಲೀಸ್ ಆಯುಕ್ತರು, ನಗರ ಪಾಲಿಕೆ ಆಯುಕ್ತರಿಗೆ ಮನವಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಗಿಲ್ಲಿ –3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವತಿ (ತ)	4 ಪ್ರದರ್ಶನಗಳು
ಸಂಗಂ	
ಸೆಕೆಂಡ್ ಕೇಸ್ ಆಫ್ ಸೀತಾರಾಂ (ಕ) + ಆಲ್ಫಾ (ಕ)	2+2 ಪ್ರದರ್ಶನಗಳು
ಲಿಡೋ	
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಿಷ್ಠ (ಕ)	4 ಪ್ರದರ್ಶನಗಳು

ಮಹಿಳಾ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಫೈನಲ್

ಬಾಂಗ್ಲಾ ಮಣಿಸಿ ಚಾಂಪಿಯನ್ ಕಿರೀಟ ಧರಿಸಿದ ಭಾರತ

ಥೈಲ್ಯಾಂಡ್: ಥೈಲ್ಯಾಂಡ್‌ನ ಬ್ಯಾಂಕಾಕ್‌ನ ಟೆರ್ಡ್‌ಥೈ ಕ್ರಿಕೆಟ್ ಮೈದಾನದಲ್ಲಿ ನಡೆದ ಮಹಿಳಾ ಏಷ್ಯಾಕಪ್ ರೈಸಿಂಗ್ ಸ್ಟಾರ್ಸ್ ಫೈನಲ್‌ನಲ್ಲಿ ಬಾಂಗ್ಲಾದೇಶವನ್ನು ಮಣಿಸುವ ಮೂಲಕ ಭಾರತ ಮಹಿಳಾ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ತೇಜಲ್ ಹಸಬ್ನಿಸ್ ಅವರ ಅಜೇಯ 51 ರನ್‌ಗಳ(34 ಎಸೆತ) ನೆರವಿನಿಂದ 134 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಬಾಂಗ್ಲಾದೇಶ ಎ ತಂಡ 19.1 ಓವರ್‌ಗಳಲ್ಲಿ 88 ರನ್‌ಗಳಿಗೆ ಆಲೌಟ್ ಆಗುವ ಮೂಲಕ 46 ರನ್‌ಗಳಿಂದ ಸೋಲೊಪ್ಪಿಕೊಂಡಿತು. ಭಾರತದ ಪರ ಪ್ರೇಮಾ ರಾವತ್ ನಾಲ್ಕು ಓವರ್‌ಗಳ ಖೋಟಾದಲ್ಲಿ ಕೇವಲ 12 ರನ್ ನೀಡಿ ಪ್ರಮುಖ 3 ವಿಕೆಟ್ ಕಬಳಿಸುವ ಮೂಲಕ ಬೌಲಿಂಗ್‌ನಲ್ಲಿ ಮಿಂಚಿದರು.

ಬಾಂಗ್ಲಾದೇಶವು ಸೆಮಿಫೈನಲ್‌ನಲ್ಲಿ ಪಾಕಿಸ್ತಾನವನ್ನು ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಇತ್ತ ಪಂದ್ಯಾವಳಿಯ ಮೊದಲ ಸೆಮಿಫೈನಲ್‌ನಲ್ಲಿ ಶ್ರೀಲಂಕಾವನ್ನು ಸೋಲಿಸುವ ಮೂಲಕ ಭಾರತ ಫೈನಲ್‌ಗೆ ಟಿಕೆಟ್ ಪಡೆದಿತ್ತು. ಫೈನಲ್‌ನಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಆರಂಭ ಉತ್ತಮವಾಗಿರಲಿಲ್ಲ. ಅಗ್ರ ನಾಲ್ಕು ಆಟಗಾರ್ತಿಯರು ಕೇವಲ 50 ರನ್‌ಗಳನ್ನೂ ಪೇರಿಸಲಾಗದೆ ಔಟಾದರು. ಆದರೂ ನಾಯಕಿ ರಾಧಾ ಯಾದವ್ ಮತ್ತು ತೇಜಲ್ ಹಸಬ್ನಿಸ್ ಅರ್ಧಶತಕದ ಪಾಲುದಾರಿಕೆಯು ತಂಡದ ಸ್ಕೋರ್ ಅನ್ನು 100ರ ಗಡಿ ದಾಟಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಕೊನೆಯವರೆಗೂ ಅಜೇಯರಾಗಿ ಉಳಿದ ತೇಜಲ್ ಹಸಬ್ನಿಸ್ 34 ಎಸೆತಗಳಲ್ಲಿ ಮೂರು ಬೌಂಡರಿ ಮತ್ತು ಎರಡು ಸಿಕ್ಸರ್ ಸೇರಿದಂತೆ 51 ರನ್ ಬಾರಿಸಿದರೆ, ರಾಧಾ ಯಾದವ್ 30 ಎಸೆತಗಳಲ್ಲಿ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದಂತೆ 36 ರನ್ ಗಳಿಸಿದರು. ಈ ಇಬ್ಬರ ಇನ್ನಿಂಗ್ಸ್‌ಗಳು ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದು ಕೊಂಡು 134 ರನ್ ಗಳಿಸಲು ಸಹಾಯ ಮಾಡಿತು. ಇತ್ತ ಬಾಂಗ್ಲಾದೇಶ ಪರ ಫಾಹಿಮಾ ಖತುನ್ ನಾಲ್ಕು ಓವರ್‌ಗಳಲ್ಲಿ 25 ರನ್ ನೀಡಿ ನಾಲ್ಕು ವಿಕೆಟ್ ಕಬಳಿಸಿದರು.

ಗೆಲ್ಲಲು 135 ರನ್‌ಗಳ ಗುರಿ ಬೆನ್ನಟ್ಟಿದ ಬಾಂಗ್ಲಾದೇಶ ಕೇವಲ 88 ರನ್‌ಗಳಿಗೆ ಆಲೌಟ್ ಆಗಿ, 46 ರನ್‌ಗಳ ಸೋಲು ಕಂಡಿತು. ಆರಂಭಿಕ ಆಟಗಾರ್ತಿ ಶಮಿಮಾ ಸುಲ್ತಾನ 20 ರನ್ ಬಾರಿಸುವ ಮೂಲಕ ಬಾಂಗ್ಲಾದೇಶದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

10ನೇ ಚಾಮರಾಜೇಂದ್ರ ಒಡೆಯರ್ ಜಯಂತಿ ಆಚರಣೆ

ಚಾಮರಾಜೇಂದ್ರ ಒಡೆಯರ್ ಕೊಡುಗೆಗಳ ಸ್ಮರಿಸಿದ ಗಣ್ಯರು



ಮೈಸೂರು,ಫೆ.22(ಪಿಎಂ)– ಹತ್ತನೇ ಚಾಮರಾಜೇಂದ್ರ ಒಡೆಯರ್ (1863ರ ಫೆ.22) ಜಯಂತಿ ಪ್ರಯುಕ್ತ ಸಂಸದರೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಬಿಜೆಪಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಅವರು ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಗೌರವ ಸಮರ್ಪಿಸಿದರು.

ಮೈಸೂರು ಅರಮನೆ ಉತ್ತರ ದ್ವಾರದ ಎದುರಿನ ಹತ್ತನೇ ಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಅವರ ಪತ್ರಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು ಚಾಮರಾಜೇಂದ್ರ ಒಡೆಯರ್ ಅವರ ಕೊಡುಗೆಗಳನ್ನು ಸ್ಮರಿಸಿದರು.

ಮೈಸೂರು ಸಂಸ್ಥಾನದ 23ನೇ ಮಹಾರಾಜರಾದ ಹತ್ತನೇ ಚಾಮರಾಜೇಂದ್ರ ಒಡೆಯರ್ ಆಧುನಿಕ ಮೈಸೂರು ನಿರ್ಮಾಪಕರಲ್ಲಿ ಪ್ರಮುಖರು. 1881ರಲ್ಲಿ ಅಧಿಕಾರ ವಹಿಸಿಕೊಂಡ ಅವರು, 1883ರಲ್ಲಿ ಭಾರತದ ಮೊದಲ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಆಡಳಿತದಲ್ಲಿ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿದರು.

ಇವರ ಅವಧಿಯಲ್ಲೇ ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ್ದರು. ವಿವೇಕಾನಂದರು ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಚಿಕಾಗೋ ಪ್ರವಾಸ ಕೈಗೊಳ್ಳಲು ಚಾಮರಾಜೇಂದ್ರ ಒಡೆಯರ್ ಆರ್ಥಿಕ ಸಹಾಯ ಮತ್ತು ಪ್ರೋತ್ಸಾಹ ನೀಡಿದರು. ಅಲ್ಲದೆ, ಬೆಂಗಳೂರು ಅರಮನೆ, ಲಾಲ್‌ಬಾಗ್ ಗಾಜಿನ ಮನೆ, ಮೈಸೂರು ಮೃಗಾಲಯ ನಿರ್ಮಿಸಿ, ಶಿಕ್ಷಣ, ಕೃಷಿ ಮತ್ತು ಕಲೆಗೆ (ವಿಶೇಷವಾಗಿ ರಾಜಾ ರವಿವರ್ಮರಿಗೆ) ಅಪಾರ ಪ್ರೋತ್ಸಾಹ ನೀಡಿದರು. 31 ವರ್ಷದ ಅಲ್ಪಾಯುಷಿಯಾಗಿದ್ದರೂ ಅವರ ಆಡಳಿತಾವಧಿಯು ಮೈಸೂರಿನ ಸುವರ್ಣಯುಗವೆನಿಸಿದೆ. ಅವರನ್ನು ಸ್ಮರಿಸುವ ಕ್ಷಣ ಧನ್ಯತೆ ಭಾವ ಮೂಡಿಸುತ್ತದೆ ಎಂದು ಗಣ್ಯರು ಸ್ಮರಿಸಿದರು.

ವಿಕಾಸ ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ.ರಾಮು, ಅಧ್ಯಕ್ಷೆ ಹೆಚ್.ಎಲ್.ಯಮುನಾ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು, ಕನ್ನಡ ಪರ ಹೋರಾಟಗಾರರಾದ ಅರವಿಂದ ಶರ್ಮ, ಶಿವಶಂಕರ್, ಸುಶೀಲಾ ನಂಜಪ್ಪ ಮತ್ತಿತರರು ಹಾಜರಿದ್ದರು.

ಭೀಮ್‌ರಾವ್ ಕಪ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ...



ಮೈಸೂರಿನ ರೈಲ್ವೆ ಕಾರ್ಯಾಗಾರದ ಮೈದಾನದಲ್ಲಿ ವಿಶ್ವೇಶ್ವರನಗರದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯ ವತಿಯಿಂದ ಹಮ್ಮಿಕೊಂಡಿರುವ ಅಂತರ ವಿದ್ಯಾರ್ಥಿನಿಲಯ ಕ್ರಿಕೆಟ್ ಸರಣಿ 2026–ಭೀಮ್‌ರಾವ್ ಕಪ್ ಆವೃತ್ತಿ–3 ಅನ್ನು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉದ್ಘಾಟಿಸಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ದಿ.ವಿ.ಶ್ರೀನಿವಾಸ್ ಪ್ರಸಾದ್ ಅವರ ಅಭಿಮಾನಿಗಳ ಬಳಗದ ರಾಜ್ಯಾಧ್ಯಕ್ಷರಾದ ರಾಜ್ ಕುಮಾರ್ (ನಿವೃತ್ತ ರೈಲ್ವೆ ನೌಕರರು), ರೈಲ್ವೆ ಎಸ್‌ಸಿ–ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ್, ಅವ್ವಾಸ್ ಆಯಿಲ್ ಮಿಲ್ ಸಂಸ್ಥಾಪಕ ಸಿದ್ದಶೆಟ್ಟಿ, ಮೇಲ್ವಿಚಾರಕ ಪ್ರದೀಪ್, ಕಾರ್ತಿಕ್, ರಾಘವೇಂದ್ರ, ನಿಲಯ ಪಾಲಕ ಹೊನ್ನಶೆಟ್ಟರಹುಂಡಿ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಹೆಬ್ಬಾಲೆ ಕೆ.ನಾಗೇಶ್ ಅವರ 'ಅಂಬಲಿ' ಕೃತಿ ಬಿಡುಗಡೆ

ಕೃತಿಯಲ್ಲಿ ಸಂವಿಧಾನದ ಮೌಲ್ಯ ಸ್ಥಾಪಿಸುವ ಆಶಯವಿದೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಬ್ಬಾಲೆ ಕೆ.ನಾಗೇಶ್ ಅವರ 'ಅಂಬಲಿ' ಆತ್ಮಕಥನವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಿಡುಗಡೆ ಮಾಡಿದರು.

ಮೈಸೂರು, ಫೆ.22(ಎಂಟಿವೈ)– ಸಂವಿಧಾನದ ಮೌಲ್ಯಗಳನ್ನು ಮರುಸ್ಥಾಪಿಸುವ ಆಶಯವನ್ನು ಹೆಬ್ಬಾಲೆ ಕೆ.ನಾಗೇಶ್ ಅವರ 'ಅಂಬಲಿ' ಆತ್ಮಕಥನ ಹೊಂದಿದೆ ಎಂದು ಸಾಹಿತಿ ಹೆಚ್.ಲಕ್ಷ್ಮೀ ನಾರಾಯಣಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಹಾನಾಯಕ ಭೀಮ್ ರಾವ್ ಫೌಂಡೇಶನ್ ಜಿಲ್ಲಾ ಘಟಕ ಹಾಗೂ ಲಯನ್ಸ್ ಸೌಹಾರ್ದ ಸಂಸ್ಥೆ ಆಯೋಜಿಸಿದ್ದ ಹೆಬ್ಬಾಲೆ ಕೆ.ನಾಗೇಶ್ ಅವರ 'ಅಂಬಲಿ' ಆತ್ಮಕಥನ ಬಿಡುಗಡೆ ಸಮಾರಂಭದಲ್ಲಿ ಆತ್ಮಕಥನ ಕುರಿತು ಅವರು ಮಾತನಾಡಿದರು. ಅಂಬಲಿ ಆತ್ಮಕಥನದ ನಿರೂಪಣೆಯು ಇತರ ದಲಿತ ಲೇಖಕರ ಆತ್ಮಕಥನಗಳಿಗಿಂಥ ಭಿನ್ನವಾಗಿದ್ದು, ಹೊಸ ಮಾದರಿಯ ಅಭಿವ್ಯಕ್ತಿಯನ್ನು ಪರಿಚಯಿಸುತ್ತದೆ. ದಲಿತ ಚಳುವಳಿಗಾರನ ಆತ್ಮಕಥನ ಮಹತ್ವದ ವಿಚಾರಗಳನ್ನು ಹೊಂದಿದೆ. ಇದರಲ್ಲಿ ಪಾತ್ರಗಳೇ ತಮ್ಮ ಬಗ್ಗೆ ಮಾತನಾಡುತ್ತವೆ. ಇದಕ್ಕೆ ಲೇಖಕರೂ ಸಾಕ್ಷಿಯಾಗಿದ್ದಾರೆ. ಬಾಲ್ಯ, ಬಡತನ, ಹೋರಾಟ, ಶಿಕ್ಷಣ, ದಾಂಪತ್ಯ, ವೃತ್ತಿ ಎಲ್ಲವನ್ನು ನಿಷ್ಪಕ್ಷಪಾತವಾಗಿ ವಿವರಿಸುತ್ತಾ 3 ತಲೆಮಾರುಗಳ ಕಥೆಗಳನ್ನು ಹೇಳುತ್ತಾರೆ ಎಂದು ತಿಳಿಸಿದರು.

ಕೃತಿಯಲ್ಲಿ ಎಂಟು ವಿಭಾಗಗಳಿವೆ. ತನ್ನಂತೆ ಬದುಕುವ ಹಲವರನ್ನು ಪ್ರತಿನಿಧಿಸುವ ಅನುಭವಗಳ ಅನಾವರಣವಾಗಿದೆ. ಹಸಿವು ಅನ್ನವನ್ನು, ಅಕ್ಷರವನ್ನು ತಿಳಿಸುವ ಮಾಧ್ಯಮವಾಗಿ ಬೆಳೆದುಬಂದಿದೆ. ಶಿಕ್ಷಣ ಪಡೆದರೇ ಸಾಕು, ಉತ್ತಮ ಜೀವನ ದೊರೆಯುತ್ತದೆ ಎಂಬ ಬಡವರ ಕಲ್ಪನೆಯೂ ಪರೀಕ್ಷೆಗೊಳಪಡಿಸಲಾಗಿದೆ. ದೇಶದ ಸಂವಿಧಾನದ ಮೌಲ್ಯಗಳನ್ನು ಮರುಸ್ಥಾಪಿಸುವ ಆಶಯವನ್ನು ಆತ್ಮಕಥನವು ಹೊಂದಿದೆ. ಇಲ್ಲಿನ ಬರವಣಿಗೆಯಲ್ಲಿ ಬಳಸಿರುವ ವಿಭಿನ್ನ ತಂತ್ರಗಾರಿಕೆಯೂ ಗಮನ ಸೆಳೆಯುತ್ತದೆ. ಕನ್ನಡದಲ್ಲಿ ದಲಿತರ ಬದುಕನ್ನು ಇಷ್ಟು ನೈಜವಾಗಿ ತೋರಿದ ಮತ್ತೊಂದು ಕೃತಿಯಿಲ್ಲ. ಪ್ರಮುಖವಾಗಿ ಕೊಡಗಿನ ದಲಿತರ ಸಂಸ್ಕೃತಿ, ಜೀವನ ಶೈಲಿ ಅನಾವರಣವಾಗಿದೆ ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮ ಚಾಲನೆ ನೀಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ದಲಿತ ಸಮುದಾಯದ ಇಂದಿನ ಮಕ್ಕಳಿಗೆ ಅಸ್ಪೃಶ್ಯತೆ ಬಗ್ಗೆ ಕಲ್ಪನೆಯೇ ಇಲ್ಲ. ಪೂರ್ವಿಕರು ಅನುಭವಿಸಿದ ಸಮಸ್ಯೆಗಳ ಅರಿವಿಲ್ಲ, ಈ ವಾತಾವರಣ ಬದಲಾಗಬೇಕು. ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯವು ವಿಭಿನ್ನ ಸ್ವರೂಪದಲ್ಲಿ ಮುಂದುವರಿಯುತ್ತಲೇ ಇದೆ. ಈ ಬಗ್ಗೆ ಅರಿವು ಇದ್ದರೆ ಮಾತ್ರ ಸ್ವಾಭಿಮಾನದಿಂದ ಬದುಕುಹುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕೃತಿ ಬಿಡುಗಡೆಗೊಳಿಸಿದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಮೇಯರ್ ಪುರುಷೋತ್ತಮ ವಹಿಸಿದ್ದರು. ಫೌಂಡೇಶನ್ ಕಾರ್ಯಾಧ್ಯಕ್ಷ ಎಸ್.ಮಂಗಳಮೂರ್ತಿ, ಜಿಲ್ಲಾ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ಸ್ಪಂದನ ಸಾಹಿತ್ಯ ಪರಿಷತ್ ಅಧ್ಯಕ್ಷ ಸತೀಶ್ ಜವರೇಗೌಡ, ಲಯನ್ಸ್ ಸೌಹಾರ್ದ ಅಧ್ಯಕ್ಷ ಎಂ.ಕೆ.ಶ್ರೀಧರ್, ಕೆಎನ್‌ಎಸ್ ಪಬ್ಲಿಕೇಷನ್ಸ್ ಪ್ರಕಾಶಕ ಪುಟ್ಟೇಗೌಡ, ಮುಖಂಡ ಮಹೇಶ್ ಉಪಸ್ಥಿತರಿದ್ದರು.

ನಗರಪಾಲಿಕೆಯಿಂದ 'ಮೈಸೂರು ಸೈಕಲ್ ಡೇ' ಕಾರ್ಯಕ್ರಮ

●ಮನೆಯಿಂದಲೇ ಸೈಕಲ್ ಸವಾರಿ ಮಾಡಿಕೊಂಡು ಬಂದು ಕಾರ್ಯಕ್ರಮ ಉದ್ಘಾಟಿಸಿದ ಪಾಲಿಕೆ ಆಯುಕ್ತರು ●ಪ್ರತಿ ತಿಂಗಳು ಎರಡನೇ, ನಾಲ್ಕನೇ ಭಾನುವಾರ ಸೈಕಲ್ ದಿನ ಆಚರಣೆ ●ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಹಲವರು ಭಾಗಿ



ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ 'ಮೈಸೂರು ಸೈಕಲ್ ದಿನ'ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಸೈಕಲ್ ಪಟುಗಳು.

ಮೈಸೂರು,ಫೆ.22(ಎಂಟಿವೈ)– ವಾಯು ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ದೇವರಾಜ ಅರಸ್ ರಸ್ತೆಯಲ್ಲಿ ಭಾನುವಾರ ಬೆಳಗ್ಗೆ ಆಯೋಜಿಸಿದ್ದ 'ಮೈಸೂರು ಸೈಕಲ್ ಡೇ' ಕಾರ್ಯಕ್ರಮದಲ್ಲಿ ಹಲವು ಮಂದಿ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಮಹಾನಗರ ಪಾಲಿಕೆ ಹಾಗೂ ಜಿಐಜೆಡ್ ಸಹಯೋಗದಲ್ಲಿ ಆಯೋಜಿಸಿದ್ದ 'ಮೈಸೂರು ಸೈಕಲ್ ದಿನ'ದ ಕಾರ್ಯಕ್ರಮಕ್ಕೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರು ತಮ್ಮ ನಿವಾಸದಿಂದಲೇ ಸೈಕಲ್‌ನಲ್ಲಿ ದೇವರಾಜ ಅರಸು ರಸ್ತೆಗೆ ಬಂದು ಸೈಕಲ್ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ದೈಹಿಕ ಚಟುವಟಿಕೆಯಾದ ಕಸರತ್ತು, ಸೈಕ್ಲಿಂಗ್‌ನಲ್ಲಿ ಪಾಲ್ಗೊಳ್ಳುವುದು ಅನಿವಾರ್ಯ. ಹೆಚ್ಚಾಗಿ ಸೈಕಲ್ ಬಳಸುವುದರಿಂದ ಪರಿಸರ, ವಾಯು ಮಾಲಿನ್ಯ ತಡೆಗಟ್ಟಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸೈಕಲ್ ಸವಾರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಪ್ರತಿ ತಿಂಗಳು ಎರಡನೆ ಹಾಗೂ ನಾಲ್ಕನೇ ಭಾನುವಾರ ಸೈಕಲ್ ದಿನ ಆಚರಿಸಲು ಉದ್ದೇಶಿಸಿದೆ ಎಂದರು.

ಜಿಐಜೆಡ್ ಸಂಸ್ಥೆ ಸುಸ್ಥಿರ ನಗರ ಸಾರಿಗೆ – ವಾಯು ಗುಣಮಟ್ಟ, ಹವಾಮಾನ ಕ್ರಿಯೆ ಮತ್ತು ಪ್ರವೇಶಿಸುವಿಕೆ (ಎಸ್‌ಯುಎಂ–ಎಸಿಎ) ಯೋಜನೆಯಡಿ ಈ ಕಾರ್ಯಕ್ರಮವನ್ನು ಇಎಸ್‌ಎಫ್ ಸಂಸ್ಥೆಯು ಆಯೋಜಿಸಿದ್ದು, ಜನ ಹೆಚ್ಚಾಗಿ ಸ್ವಂತ ವಾಹನ ತ್ಯಜಿಸಿ ಸೈಕಲ್ ಅಥವಾ ಸಾರಿಗೆ ವಾಹನ ಬಳಕೆ ಉತ್ತೇಜಿಸಲು ಈ ಕಾರ್ಯಕ್ರಮದ ಉದ್ದೇಶವಾಗಿದೆ. 'ಮೈಸೂರು ಸೈಕಲ್ ಡೇ' ಕಾರ್ಯಕ್ರಮಕ್ಕೆ ಮೈಸೂರಿನ ಜನತೆ ಬೆಂಬಲ ನೀಡಬೇಕು ಎಂದು ಕೋರಿದರು.

ವಿವಿಧ ಚಟುವಟಿಕೆ: ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ಚಿಕ್ಕ ಗಡಿಯಾರ ರಸ್ತೆಯ ಜಂಕ್ಷನ್‌ನಿಂದ ನಾರಾಯಣಶಾಸ್ತ್ರಿ ರಸ್ತೆ ಜಂಕ್ಷನ್‌ವರೆಗೆ ಪಾಲಿಕೆ ವತಿಯಿಂದ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆ, ಸ್ಕೇಟಿಂಗ್, ಬ್ಯಾಡ್ಮಿಂಟನ್, ಸ್ಲೋ ಸೈಕ್ಲಿಂಗ್, ಸೈಕ್ಲಿಂಗ್ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ಹಲವು ಮಂದಿ ಪಾಲ್ಗೊಂಡು ಗಮನ ಸೆಳೆದರು. ಓಪನ್ ಸ್ಟ್ರೀಟ್ ಫೆಸ್ಟಿವಲ್ ಮಾದರಿಯಲ್ಲಿ ನಡೆದ ಕಾರ್ಯಕ್ರಮ ನೋಡುಗರ ಗಮನ ಸೆಳೆಯಿತು. ಕೆಲವರು ಸ್ವಯಂ ಪ್ರೇರಣೆಯಿಂದ ಸೈಕಲ್‌ನಲ್ಲಿ ಸೈಕಲ್ ದಿನದ ಕಾರ್ಯ ಕ್ರಮ ವೀಕ್ಷಣೆಗೆ ಆಗಮಿಸಿದ್ದು ವಿಶೇಷ.

ಈ ಸಂದರ್ಭದಲ್ಲಿ ಪಾಲಿಕೆಯ ಅಧೀಕ್ಷಕ ಅಭಿಯಂತರ ಸಿ.ಎಸ್.ಮಂಜುನಾಥ್, ವಿವಿಧ ಸಂಸ್ಥೆಗಳ ಮುಖಂಡರಾದ ನೀತು ಜೋಸೆಫ್, ಜಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಒಳಚರಂಡಿ ನಿರ್ಮಾಣ, ಉನ್ನತೀಕರಣಕ್ಕೆ ಶಾಸಕ ಕೆ.ಹರೀಶ್‌ಗೌಡರಿಂದ ಚಾಲನೆ



ಚಾಮರಾಜ ಕ್ಷೇತ್ರದ ಒಳಚರಂಡಿ ನಿರ್ಮಾಣ, ಉನ್ನತೀಕರಣ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು,ಫೆ.22(ಜಿಎ)–ಮೈಸೂರಿನ ಚಾಮರಾಜ ಕ್ಷೇತ್ರದ ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಮತ್ತು ಉನ್ನತೀಕರಣ ಕಾಮಗಾರಿಗೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ, ಮೈಸೂರು ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ) ಅನುದಾನ ದಡಿ ಕಲುಷಿತ ನೀರು ಕೆರೆಕಟ್ಟೆಗಳಿಗೆ ಸೇರುತ್ತಿರುವುದನ್ನು ತಡೆಗಟ್ಟುವ ಸಲುವಾಗಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಬಳಸಿದ ನೀರು ನಿರ್ವಹಣೆ ಯೋಜನೆಯ ಅಡಿ ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಯಲ್ ಇನ್ ವೃತ್ತ ರಿಂಗ್ ರಸ್ತೆ, ಶೇಷಾದ್ರಿಪುರಂ ಕಾಲೇಜು ರಿಂಗ್ ರಸ್ತೆ ಹಾಗೂ ಪುಲಿಕೇಶಿ ರಸ್ತೆಯಲ್ಲಿ ಅಂದಾಜು 42 ಕೋಟಿ ರೂ. ವೆಚ್ಚದ ಒಳಚರಂಡಿ ವ್ಯವಸ್ಥೆಯ ನಿರ್ಮಾಣ, ಉನ್ನತೀಕರಣ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ಮಾಜಿ ಮೇಯರ್ ಪುಷ್ಪವಲ್ಲಿ, ಅನಂತು, ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮುಖಂಡರಾದ ಕೇಬಲ್ ನಾಗಣ್ಣ, ರಮೇಶ್, ಮಹೇಶ್ ಮಸಿಯಪ್ಪ, ವೆಂಕಟೇಶ್, ಡೈರಿ ರಮೇಶ್, ಸುಪ್ರೀಂ ಮಂಜು, ಪಾಲಿಕೆ ಸೂಪರಿಂಡೆಂಟ್ ಇಂಜಿನಿಯರ್ ಮಂಜು, ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್, ಸಹಾಯಕ ಇಂಜಿನಿಯರ್ ಮುಸ್ತಫಾ, ಶುಶ್ರುತ್, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್‌ನ ನಿಶಾಂತ್ ಪಟೇಲ್, ಸಂಜಯ್, ಚಂದ್ರು, ಮುಖಂಡ ಮುದ್ದು ಮಲ್ಲೇಗೌಡ ಇನ್ನಿತರರಿದ್ದರು.

ಸಾರ್ವಜನಿಕರ ತೆರಿಗೆ ಹಣದಲ್ಲಿ ಅಭಿವೃದ್ಧಿ ಕಾಮಗಾರಿ ಮಾಡುವ ಮೇಸ್ತ್ರಿ ನಾನು

ನಾನೇ ರಸ್ತೆ ಮಾಡಿಸಿದೆ ಎಂಬ ಪ್ರತಾಪ್‌ಸಿಂಹ ಹೇಳಿಕೆಗೆ ಶಾಸಕ ಹರೀಶ್‌ಗೌಡ ಟಾಂಗ್

ಮೈಸೂರು,ಫೆ.22(ಜಿಎ)–ಸಾರ್ವಜನಿಕರು ಕಟ್ಟುವ ತೆರಿಗೆ ಹಣದಲ್ಲಿ ಅಭಿ ವೃದ್ಧಿ ಕಾಮಗಾರಿಗಳನ್ನು ಮೇಸ್ತ್ರಿಯಂತೆ ಮಾಡುತ್ತಿದ್ದೇನೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾಜಿ ಸಂಸದ ಪ್ರತಾಪ್‌ಸಿಂಹ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ನಾನು ಮಾಡಿಸಿರುವ ರಸ್ತೆಯಲ್ಲಿ ಓಡಾಡುತ್ತಿದ್ದಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ದೇಶದ ಪ್ರಧಾನಿಯೂ ಸಹ ಅವರ ಮನೆಯ ದುಡ್ಡು ತಂದು ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಅವರ ಅಧಿಕಾರದ ಅವಧಿಯಲ್ಲಿ ಅಭಿವೃದ್ಧಿ ಮಾಡಿದ್ದಾರೆ ಎಂದು ಸ್ಮರಿಸಬಹುದು ಎಂದರು.

ನಾನೂ ಇಂದು 89 ಕೋಟಿ ರೂ. ವೆಚ್ಚದ ಅನುದಾನದ ಕಾಮಗಾರಿಗೆ ಚಾಲನೆ ನೀಡಿದ್ದೇನೆ. ಅದು ಸಾರ್ವಜನಿಕರು ಕಟ್ಟಿರುವ ತೆರಿಗೆ ಹಣದಿಂದ ಸರ್ಕಾರ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದೆ. ಅಲ್ಲಿ ನಾನು ಮೇಸ್ತ್ರಿ ಕೆಲಸ ಮಾಡುತ್ತಿದ್ದೇನೆ. ಜನರ ದುಡ್ಡಿನಲ್ಲಿ ಅವರ ಸೇವೆ ಮಾಡುತ್ತಿದ್ದೇವೆ. ಜನರಿಂದ ಜನರಿಗಾಗಿ ಅಷ್ಟೇ. ಎಲ್ಲವನ್ನು ನಾನು ಮಾಡಿದ್ದೇನೆ ಎಂಬುದು ಸರಿಯಲ್ಲ. ಸ್ವಂತ ಹಣದಿಂದ ಮನೆ ಕಟ್ಟಿಕೊಂಡರೆ ಅದು ನಿಮ್ಮ ಕೆಲಸ ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸಿ, ಈ ಬಾರಿ ವಿಧಾನಸಭೆ ಪ್ರವೇಶಿಸುತ್ತೇನೆ ಎಂಬ ಪ್ರತಾಪ್ ಸಿಂಹ ಹೇಳಿಕೆಗೆ ಪ್ರತಿಕ್ರಿಯಿಸಿ, ಚುನಾವಣೆ ಯುದ್ಧ ಇದ್ದ ಹಾಗೆ ಯುದ್ಧಕ್ಕೆ ನಾನೂ ರೆಡಿ ಜಯ, ಅಪಜಯ ಯಾರಿಗೆ ಎಂಬುದು ಚುನಾವಣೆ ನಂತರ ತಿಳಿಯುತ್ತದೆ ಎಂದರು.

ವಿರೋಧ ಪಕ್ಷ ಗ್ಯಾರಂಟಿ ಯೋಜನೆಯಿಂದ ಸರ್ಕಾರದಿಂದ ಯಾವುದಕ್ಕೂ ಅನುದಾನವಿಲ್ಲ ಎಂಬ ಹೇಳಿಕೆಗೆ ಉತ್ತರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮರಾಜ ಕ್ಷೇತ್ರಕ್ಕೆ ಈವರೆಗೂ 1 ಸಾವಿರ ಕೋಟಿ ರೂ. ಅನುದಾನ ನೀಡಿದ್ದಾರೆ. ಅದರಿಂದ ಶಿಕ್ಷಣ, ಆರೋಗ್ಯ, ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಅದಕ್ಕೆ ಈ ರೀತಿಯ ಅಭಿವೃದ್ಧಿ ಕಾರ್ಯಗಳು ಸಾಕ್ಷಿಯಾಗಿವೆ. ವಾರ್ಡ್ ನಂ.1ರಿಂದ 7ರವರೆಗೆ 50 ಕೋಟಿ ರೂ. ಮೂಲಭೂತ ಸೌಕರ್ಯಕ್ಕಾಗಿ ಮೀಸಲಿಡಲಾಗಿದ್ದು, ಮುಂದಿನ ವಾರದಿಂದ ಆರಂಭವಾಗಲಿದೆ. ಬಿಜೆಪಿ ಅವರು ಆರೋಪ ಮಾಡಬೇಕು. ಮಾಡುತ್ತಿದ್ದಾರೆ. ಸುಳ್ಳು ಹೇಳಿ ಅದನ್ನು ನಿಜ ಮಾಡುತ್ತಿದ್ದಾರೆ. ಈಗಾಗಲೇ ಕೇಂದ್ರದಿಂದ ಪಾಲಿಕೆಗೆ ಬಂದಿದ್ದ ಅನುದಾನವನ್ನು ವಾಪಸ್ ಪಡೆದುಕೊಂಡಿದ್ದಾರೆ ಮೊದಲು ಅದನ್ನು ಪ್ರಶ್ನಿಸಲಿ ಎಂದು ಕಿಡಿಕಾರಿದರು.

ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನಂ.ಗೂಡು ರಸಬಾಳೆ, ಮೈಸೂರು ವೀಳ್ಯೆದೆಲೆ ಪ್ರಸ್ತಾಪಕ್ಕೆ ಯದುವೀರ್ ಸಂತಸ

ಮೈಸೂರು,ಫೆ.22(ಎಂಟಿವೈ)–ಪ್ರಧಾನಿನರೇಂದ್ರ ಮೋದಿ ಅವರು 'ಮನ್ ಕಿ ಬಾತ್'ನಲ್ಲಿ ಮೈಸೂರಿನ ಉತ್ಪನ್ನಗಳಾದ ನಂಜನಗೂಡು ರಸಬಾಳೆ, ಮೈಸೂರು ವೀಳ್ಯೆದೆಲೆ ಬಗ್ಗೆ ಪ್ರಸ್ತಾಪಿಸಿರುವುದು ಸಾಂಪ್ರದಾಯಿಕ ಕೃಷಿ ಪದ್ಧತಿ ಸಂರಕ್ಷಣೆಗೆ ಆದ್ಯತೆ ನೀಡಲು ಸಹಕಾರಿಯಾಗಲಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತು(ಮನ್‌ಕೀ ಬಾತ್) ಕಾರ್ಯಕ್ರಮ ಆಲಿಸಿದ್ದೇನೆ. ಮನ್‌ಕಿ ಬಾತ್‌ನಲ್ಲಿ ನಂಜನಗೂಡು ರಸಬಾಳೆ, ಮೈಸೂರು ವೀಳ್ಯೆದೆಲೆ ಬಗ್ಗೆ ಪ್ರಸ್ತಾಪಿಸಿರುವುದು ಸಂತೋಷವನ್ನುಂಟು ಮಾಡಿದೆ. ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದ ಮೈಸೂರು ಮತ್ತು ಸುತ್ತಮುತ್ತಲಿನ ಕೃಷಿ ಸಮುದಾಯಗಳಿಗೆ ಹೆಮ್ಮೆಯ ವಿಷಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯುಳ್ಳ ಈ ಉತ್ಪನ್ನಗಳಿಂದಾಗಿ ರೈತರಿಗೆ ಉತ್ತಮ ಬೆಲೆ ದೊರೆಯುವುದಲ್ಲದೇ, ವಿಶಿಷ್ಟ ಗುಣಮಟ್ಟ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಸಂರಕ್ಷಿಸುವ ಪ್ರಾಮುಖ್ಯತೆಯನ್ನು ಬಲಪಡಿಸಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಸುವಾಸನೆ ಮತ್ತು ರುಚಿಗೆ ಹೆಸರುವಾಸಿಯಾದ ನಂಜನಗೂಡು ಬಾಳೆಹಣ್ಣು ಮತ್ತು ಮೌಲ್ಯಯುತವಾದ ಮೈಸೂರು ವೀಳ್ಯೆದೆಲೆ ಬೆಳೆ ಹಲವು ಪೀಳಿಗೆಯ ಕೃಷಿ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಇದರ ರಫ್ತು ವ್ಯಾಪ್ತಿ ವಿಸ್ತರಿಸುವುದರಿಂದ ರೈತರ ಆದಾಯ ಹೆಚ್ಚಾಗುತ್ತದೆ. ಹೊಸ ಮೌಲ್ಯ ಸೃಷ್ಟಿಸುತ್ತದೆ. ಯುವ ಕೃಷಿಕರು ಜಿಐ ಆಧಾರಿತ ಕೃಷಿಯಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸುತ್ತದೆ.



ಯದುವೀರ್

ಸಾಂಪ್ರದಾಯಿಕ ಕೃಷಿ ಪದ್ಧತಿ ಸಂರಕ್ಷಣೆಗೆ ಆದ್ಯತೆ ನೀಡಲು ಸಹಕಾರಿ

ಸ್ಥಳೀಯ ಜೀವವೈವಿಧ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವಾಗ ಭಾರತದ ಕೃಷಿ– ಕ್ಷೇತ್ರವನ್ನು ಬಲಪಡಿಸುವ ವಿಶಾಲ ದೃಷ್ಟಿಕೋನದೊಂದಿಗೆ ಕೆಲವು ಯೋಜನೆ ರೂಪಿಸಲಾಗುತ್ತಿದೆ. ರೈತರು, ಸಹಕಾರಿಗಳು ಮತ್ತು ರಫ್ತುದಾರರಿಗೆ ಮಾರುಕಟ್ಟೆ ಸಂಪರ್ಕಗಳು, ಲಾಜಿಸ್ಟಿಕ್ಸ್, ಬ್ರ್ಯಾಂಡಿಂಗ್ ಕ್ರಮ ಮತ್ತು ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿ ಕೊಳ್ಳಲು ಸಾಂಸ್ಥಿಕ ಬೆಂಬಲವನ್ನು ಸುಗಮಗೊಳಿಸಲು ಕೇಂದ್ರ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ ಎಂದು ತಿಳಿಸಿದರು.

ರೈತ ಉತ್ಪಾದಕ ಸಂಸ್ಥೆಗಳು, ರಫ್ತುದಾರರು, ಸಂಶೋಧನಾ ಸಂಸ್ಥೆಗಳು ಮತ್ತು ರಾಜ್ಯ ಸಂಸ್ಥೆಗಳು ಸೇರಿದಂತೆ ಪಾಲುದಾರರು ಈ ಜಿಐ ಖ್ಯಾತಿಯನ್ನು ಎತ್ತಿಹಿಡಿಯುವ ಮಾನದಂಡಗಳನ್ನು ಕಾಯ್ದುಕೊಳ್ಳುವಾಗ ಉತ್ಪಾದನೆಯನ್ನು ಸುಸ್ಥಿರವಾಗಿ ಅಳೆಯಲು ಸಹಯೋಗದಿಂದ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಸಾಕಷ್ಟು ಯೋಜನೆ ರೂಪಿಸಿದ್ದಾರೆ. ಜಿಐ ಸ್ವತ್ತುಗಳನ್ನು ಗ್ರಾಮೀಣ ಸಮೃದ್ಧಿಯ ಎಂಜಿನ್‌ಗಳಾಗಿ ಪರಿವರ್ತಿಸಲು ಬದ್ಧವಾಗಿದೆ. ಜಾಗತಿಕ ಗುರುತಿಸುವಿಕೆಯ ಪ್ರಯೋಜನಗಳು ನಮ್ಮ ರೈತರಿಗೆ ಸ್ಪಷ್ಟವಾದ ಆರ್ಥಿಕ ಸಬಲೀಕರಣವಾಗಿ ಪರಿವರ್ತಿಸುವುದನ್ನು ಖಚಿತಪಡಿಸುತ್ತದೆ. ಮೋದಿ ಅವರ ಕಲ್ಪನೆಯನ್ನು ಸಾಕಾರಗೊಳಿಸಲು ಎಲ್ಲರೂ ಬದ್ದರಾಗಬೇಕು ಎಂದು ಸಲಹೆ ನೀಡಿದ್ದಾರೆ.

ಮೈಸೂರಲ್ಲಿ 'ಸಂತ ಸೇವಾಲಾಲ್ ಜಯಂತಿ' ಆಚರಣೆ

ಮಹಾನ್ ವ್ಯಕ್ತಿಗಳ ಆಶಯಗಳನ್ನು ತಿಳಿಸಲು ಜಯಂತಿಗಳ ಆಚರಣೆ



ಮೈಸೂರಿನ ಕಿರುರಂಗ ಮಂದಿರದಲ್ಲಿ ನಡೆದ 'ಸಂತ ಸೇವಾಲಾಲ್ ಜಯಂತಿ'ಕಾರ್ಯಕ್ರಮ ದಲ್ಲಿ ಸಂತ ಸೇವಾ ಲಾಲ್ ಭಾವಚಿತ್ರಕ್ಕೆ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಎಂಎಲ್ಸಿ ಸಿ.ಎನ್. ಮಂಜೇಗೌಡ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಫೆ.22(ಎಂಟಿವೈ)– ಜಾತಿ ರಹಿತ ಸಮ ಸಮಾಜ ನಿರ್ಮಾಣ ಮಾಡಲು ಅನೇಕ ಮಹನೀಯರು ಶ್ರಮಿಸಿದ್ದು, ಆ ಮಹಾನ್ ವ್ಯಕ್ತಿಗಳ ಆಶಯವನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಅವರ ಜಯಂತಿ ಆಚರಿಸಲಾಗುತ್ತಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಂತ ಸೇವಾಲಾಲ್ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಸಂತ ಸೇವಾಲಾಲ್ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಯಾ ಜಾತಿ, ಸಂಘಟನೆಗಳು ಗಟ್ಟಿಯಾಗಲು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಬೆಳೆಯುವ ಸಲುವಾಗಿ ಜಯಂತಿಗಳನ್ನು ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಸಂತ ಸೇವಾಲಾಲ್ ಅವರು ಸಾಮಾಜಿಕ, ಧಾರ್ಮಿಕ ಸುಧಾರಕರಾಗಿದ್ದರು. ಇವರನ್ನು ಬಂಜಾರ್ ಸಮುದಾಯದ ಆಧ್ಯಾತ್ಮಿಕ ಗುರುಗಳು ಎಂದು ಕರೆಯಲಾಗುತ್ತದೆ. ಸಂತ ಸೇವಾಲಾಲ್ ಅವರು ಪಶು ಸಂಗೋಪನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರ ಹೆಸರಿನಲ್ಲಿ ಹಲವು ದೇವಾಲಯಗಳು ನಿರ್ಮಿಸಲಾಗಿದೆ ಎಂದರು.

ಮನುಷ್ಯ ಜೀವನದಲ್ಲಿ ಎತ್ತರಕ್ಕೆ ಬೆಳೆಯಲು ಮುಂದೆ ಗುರಿ ಇರಬೇಕು ಹಿಂದೆ ಗುರು ಇರಬೇಕು. ಆದ್ದರಿಂದ ತಾವೆಲ್ಲರೂ ಸಂತಲಾಲ್ ಅವರು ತಿಳಿಸಿಕೊಟ್ಟಿರುವ ಹಾದಿಯನ್ನು ಆಯ್ಕೆ ಮಾಡಿಕೊಂಡು ಸಾಗಬೇಕು. ಸಮಾಜಕ್ಕೆ ಅವರು ನೀಡಿದಂತಹ ಕೊಡುಗೆಗಳನ್ನು ನೆನೆಯುತ್ತಾ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗೋಣ ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಟಿ.ಗಣೇಶ್ ಮಾತನಾಡಿದರು. ಇದೇ ವೇಳೆ ಆರ್.ಬಿ. ವಿನೋದ್ ಬರೆದಿರುವ 'ಶ್ರೀಸೇವಾ ಚರಿತಾಮೃತ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಕೃಷ್ಣಾಪುರದ ಬಂಜಾರ ಗುರುಪೀಠದ ಕುಮಾರ್ ಮಹಾರಾಜ್, ವಿಜಯನಗರ ಕೊಟ್ಟೂರು ತಾಲೂಕಿನ ಶಕ್ತಿ ಪೀಠದ ಶಿವಪ್ರಕಾಶ್ ಮಹಾರಾಜ್, ಬಂಜಾರ ಸೇವಾ ಸಂಘದ ಅಧ್ಯಕ್ಷ ಎಂ.ಸುಂದರ್, ಉಪಾಧ್ಯಕ್ಷ ತೇಜು ನಾಯಕ, ಕಾರ್ಯದರ್ಶಿ ಎಂ.ಅನಿಲ್, ಸಂಘದ ಜಂಟಿ ಕಾರ್ಯದರ್ಶಿ ಪಿ.ಜಯರಾಮ್ ಹಾಗೂ ಕಾವೇರಿ ಬಾಯ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜಲ ಸಾಹಸ, ಭೂ ಸಾಹಸ ಕ್ರೀಡಾ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಇಂಡಿಯನ್ ಮೌಂಟನೇರಿಂಗ್ ಫೌಂಡೇಷನ್, ಕರ್ನಾಟಕ ರಾಫ್ಟಿಂಗ್ ಅಸೋಸಿಯೇಷನ್ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ 18ರಿಂದ 29 ವರ್ಷದೊಳಗಿನ ಯುವಕ/ಯುವತಿಯರಿಗೆ ಭೂ ಸಾಹಸ, ಜಲ ಸಾಹಸ ಕ್ರೀಡಾ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಲ ಸಾಹಸ ಕ್ರೀಡೆಯನ್ನು ವರುಣ ಕೆರೆ, ಭೂ ಸಾಹಸ ಕ್ರೀಡೆಯನ್ನು ಪಾಂಡವಪುರದ ಕುಂತಿಬೆಟ್ಟದಲ್ಲಿ ಫೆಬ್ರವರಿ ಕೊನೆಯ ವಾರದಲ್ಲಿ ನಡೆಸಲಾಗುತ್ತದೆ. ಮೈಸೂರು ಜಿಲ್ಲೆಯ ಅಭ್ಯರ್ಥಿಗಳು ಸ್ವವಿವರದೊಂದಿಗೆ ಫೆ.24ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ದೂ.ಸಂ.0821–2564179, ವಿಶ್ವ ಅವರ ಮೊ: 9481075364 ಸಂಪರ್ಕಿಸಬಹುದಾಗಿದೆ.

ಆಟೋ ಚಾಲಕರಿಂದ ಫೆ.26ರಂದು ಮೈಸೂರಿಂದ ಬೆಂಗಳೂರಿಗೆ ಪಾದಯಾತ್ರೆ

ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ನಿರ್ಧಾರ



ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಭೆ ನಡೆಸಲಾಯಿತು.

ಮೈಸೂರು,ಫೆ.22(ಜಿಎ)–ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಫೆ.26ರಂದು ಬೆಂಗಳೂರಿಗೆ ಪಾದಯಾತ್ರೆ ನಡೆಸಲು ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘ ನಿರ್ಧರಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಸಭೆಯಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ 200ಕ್ಕೂ ಹೆಚ್ಚು ಆಟೋ ಚಾಲಕರು, ಮಾಲೀಕರು ಬೆಂಗಳೂರಿಗೆ ಪಾದಯಾತ್ರೆ ಮೂಲಕ ತೆರಳಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಸಂಘದ ಅಧ್ಯಕ್ಷ ಎಂ.ವಿ.ಶ್ರೀನಿವಾಸ ಮಿತ್ರ ಮಾತನಾಡಿ, ಪ್ರಸ್ತುತ ಎಫ್‌ಸಿ ಶುಲ್ಕ ಹೆಚ್ಚಿಸಿರುವುದನ್ನು ಕೂಡಲೇ ರದ್ದುಪಡಿಸಬೇಕು. ಮೈಸೂರು ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಹಾಗೂ ಉಪ ಪ್ರಾದೇಶಿಕ ಸಾರಿಗೆ ಹುಣಸೂರು ಕಚೇರಿಯಲ್ಲಿ ಕೂಡ ಸುಮಾರು ಮೂರು ನಾಲ್ಕು ತಿಂಗಳಿಂದ ಎಫ್‌ಸಿ ರಸೀದಿಗಳು ಬರುತ್ತಿಲ್ಲ. ಎಫ್‌ಸಿ ಆಗದೆ ರಸ್ತೆಗಳಲ್ಲಿ ಅಧಿಕಾರಿಗಳು ಸಿಬ್ಬಂದಿ ವರ್ಗದವರು ತಪಾಸಣೆ ಮಾಡುವ ಸಂದರ್ಭದಲ್ಲಿ ದಂಡ ಕಟ್ಟುವ ಸ್ಥಿತಿ ನಿರ್ಮಾಣವಾಗಿದೆ. ಈ ರೀತಿ ಆಟೋಗಳಿಗೆ ಅಪಘಾತ ಆದರೆ ಯಾರು ಹೊಣೆ ಎಂದು ಪ್ರಶ್ನಿಸಿದರು.

ಮೈಸೂರು ನಗರದಲ್ಲಿ ಜನಸಂಖ್ಯೆ, ವಾಹನ ಸಂಖ್ಯೆಗಳು ಹೆಚ್ಚುತ್ತಿರುವುದರಿಂದ ಆಟೋರಿಕ್ಷಾ ರಹದಾರಿಯನ್ನು ಕೂಡಲೇ ತಡೆಹಿಡಿಯಬೇಕು. ನಗರದಲ್ಲಿ ಹಾಲಿ ವಾಹನಗಳ ಸಂಖ್ಯೆ ಹೆಚ್ಚು ಇರುವುದರಿಂದ ಸಾರ್ವಜನಿಕರ ಸುರಕ್ಷತೆಗಾಗಿ ವಾಹನಗಳನ್ನು ನಿಲ್ಲಿಸಲು ಸರಿಯಾದ ನಿಲ್ದಾಣಗಳು ಮಾರ್ಪಡು ಮಾಡಿ ಸಂಬಂಧಪಟ್ಟ ಇಲಾಖೆಗಳು ರಸ್ತೆಯನ್ನು ಅಗಲೀಕರಣ ಬಹುಮುಖ್ಯವಾಗಿ ಮಾಡುವಂತೆ ಆಗ್ರಹಿಸಿದರು.

ಆಟೋರಿಕ್ಷಾ ಚಾಲಕರಿಗೆ ತಮ್ಮ ದುಡಿಮೆಯಲ್ಲಿ ಮನೆ ಬಾಡಿಗೆ ಕಟ್ಟಲು ಅಸಾಧ್ಯವಾದುದರಿಂದ ಉಚಿತ ಸೂರು ನೀಡಬೇಕು. ಪ್ರಸ್ತುತ ಆಂಧ್ರ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಆಟೋರಿಕ್ಷಾ ಚಾಲಕರಿಗೆ ಸೇವಾ ಯೋಜನೆಯಲ್ಲಿ ಗೌರವ ವಾರ್ಷಿಕ ಭತ್ಯೆಯಾಗಿ 15 ಸಾವಿರ ರೂ. ನೀಡುವಂತೆ. ಆಟೋರಿಕ್ಷಾ ಚಾಲಕರ ಕುಟುಂಬ ಸದಸ್ಯರಿಗೆ ಉಚಿತ ವೈದ್ಯಕೀಯ ಹಾಗೂ ಉಚಿತ ಶಿಕ್ಷಣ ಒದಗಿಸಬೇಕು. ಅನಾರೋಗ್ಯದಿಂದ ಸ್ವಾಧೀನ ಕಳೆದುಕೊಂಡ ಚಾಲಕರಿಗೆ ಸರ್ಕಾರ ಅನುಕಂಪದಿಂದ ಸ್ಪಂದಿಸುವಂತೆ ಮನವಿ ಸಲ್ಲಿಸಲಾಗುತ್ತದೆ ಎಂದರು. ಅಹಿಂದ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಪಿ.ಸುನಿಲ್‌ಕುಮಾರ್, ಆರ್.ಸುರೇಶ್, ಎಂ.ಹೆಚ್.ಕಿರಣ್, ಜಗದೀಶ್ ಪಂಚಮುಖಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.